ಅಖಿಲ
ಭಾರತ
ಪತ್ರಿಕೆ
ಮೇ 2017



# ಬ್ರಹ್ಮಚರ್ಯ

ಬೆಲೆ : 15/-



*Take Truth for your force,*
*take Truth for your refuge.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### "ಬ್ರಹ್ಮಚರ್ಯ"

ಭೌತದ್ರವ್ಯ ದಿವ್ಯಾತ್ಮನ ಮುಖವನ್ನು ತೆರೆದು ತೋರಿಸುವುದು.

**– ಶ್ರೀ ಅರವಿಂದರು**

**ಅನು : ಡಾ. ಕೆ.ಎಸ್. ಆಮೂರ**
ಸ್ವಭಾವದ ಒಂದು ಸರ್ವಸಾಧಾರಣ ಚಲನೆ 3
**ಅನು : ಶ್ರೀ ಪುರುಷೋತ್ತಮ ಗಲಗಲಿ**
ಪುರುಷ ಮತ್ತು ಸ್ತ್ರೀ 18
**ಅನು : ಡಾ. ಕೆ.ಎಸ್. ಆಮೂರ**
ಬ್ರಹ್ಮಚರ್ಯದ ತತ್ವ 27
ಬ್ರಹ್ಮಚರ್ಯದ ಪಾಲನೆ 45
ವಾರ್ತಾಪತ್ರ 60

## (All India Magazine) ಸಂಪಾದಕೀಯ:

ಆಧ್ಯಾತ್ಮಿಕ ಅಭೀಪ್ಸೆಯುಳ್ಳವರು ಅನುಸರಿಸಬೇಕಾದ ಆಚರಣೆಗಳಲ್ಲಿ ಬ್ರಹ್ಮಚರ್ಯವೂ ಕೂಡ ಒಂದು ಎಂದು ಸಲಹೆ ನೀಡಲಾಗಿದೆ. ಸ್ವ–ಪ್ರಭುತ್ವ ಪಡೆಯಲು ಕೈಕೊಳ್ಳಬೇಕಾದ ಪ್ರಯತ್ನಗಳ ವಿಶಾಲ ವ್ಯಾಪ್ತಿಯನ್ನು ಆ ಶಬ್ದ ಆವರಿಸುತ್ತದೆ. ಆ ವ್ಯಾಪ್ತಿ ಮಾತಿನಲ್ಲಿ ಇಂದ್ರಿಯ ನಿಗ್ರಹ, ಭಾವನೆಗಳು ಹಾಗೂ ಯೋಚನೆಗಳು ಸತ್ಯದಿಂದ ಕೂಡಿರುವಿಕೆ, ಇವೆಲ್ಲ ಶಬ್ದಗಳಲ್ಲಿ ಹಾಗೂ ಕ್ರಿಯೆಗಳಲ್ಲಿ ಅದೇ ಮಟ್ಟದಲ್ಲಿ ಇರುವಿಕೆ ಇದನ್ನೆಲ್ಲ ಆವರಿಸುತ್ತದೆ. ಹಾಗೆಯೇ ಅವುಗಳ ಮಧ್ಯೆ ಆಶಯ ಹಾಗೂ ಉದ್ದೇಶಗಳ ಪರಿಶುದ್ಧತೆ ಇರಬೇಕು. ಆದಾಗ್ಯೂ ಇಂದ್ರಿಯ ನಿಗ್ರಹ ಲೈಂಗಿಕ ಚೈತನ್ಯಗಳ ನಿಷೇಧ ಹಾಗೂ ನಿರೋಧ ಹೊಂದಿರಬಾರದು, ಆದರೆ ಅವುಗಳ ಉದಾತ್ತೀಕರಣ ಹಾಗೂ ರೂಪಪರಿವರ್ತನೆ ಪ್ರಾಣಿಕ ಚೇತನಶಕ್ತಿ ಹಾಗೂ ಬೌದ್ಧಿಕ ಮಾನವ ಪ್ರೇಮ ಇವುಗಳಲ್ಲಾಗಬೇಕು ಮತ್ತು ಕೊನೆಗೆ ಆಧ್ಯಾತ್ಮಿಕ ಆಚರಣೆಗಾಗಿ ಬೇಕಾದ ಆಧ್ಯಾತ್ಮಿಕ ಜ್ಞಾನದ ಅಂಶಗಳಲ್ಲಿ ಅವುಗಳಿರಬೇಕು, ಏಕೆಂದರೆ ಈ ಹುಟ್ಟುಗುಣ ದೇಹದ ರಚನೆಯಲ್ಲಿಯೇ ಬೇರೂರಿರುತ್ತದೆ ಮತ್ತು ಆದಾಗ್ಯೂ ಈ ಪ್ರಭುತ್ವವಿಲ್ಲದೆ ತಾಳಿಕೊಳ್ಳುವ ಆಧ್ಯಾತ್ಮಿಕತೆಯನ್ನು ಸುರಕ್ಷಿತವಾಗಿ ಇರಿಸಲಾಗದು. ಆದ್ದರಿಂದ ಸಮಗ್ರ ಯೋಗದಲ್ಲಿ ಸ್ವ–ಪ್ರಭುತ್ವ ಕುರಿತು ಇರುವ ಈ ಮೂಲಭೂತ ವಿಧಾನದಲ್ಲಿರುವ ಹಲವಾರು ವಾಸ್ತವ ಸಂಗತಿಗಳಿಗಾಗಿ ಈ ಸಂಚಿಕೆಯನ್ನು ಮುಡುಪಾಗಿರಿಸಿದ್ದೇವೆ.

*



### ಸ್ಥಾಪಿಸಬೇಕಾದ ವಿಷಯಗಳು

ಬ್ರಹ್ಮಚರ್ಯಮ್ ಶಮಃ ಸತ್ಯಮ್ ಪ್ರಶಾಂತಿರಾತ್ಮಾಸಮ್ ಯಮಃ : ಬ್ರಹ್ಮಚರ್ಯಮ್ ಎಂದರೆ ಸಂಪೂರ್ಣ ಲೈಂಗಿಕ ಪರಿಶುದ್ಧತೆ, ಶಮಃ ಎಂದರೆ ಸತ್ತೆಯಲ್ಲಿ ಅಚಂಚಲತೆ ಹಾಗೂ ಸಾಮರಸ್ಯ, ಅವುಗಳ ಶಕ್ತಿಗಳನ್ನು ನಿರ್ವಹಿಸುವುದು, ಆದರೆ ನಿಯಂತ್ರಿಸುವುದು, ಸಾಮರಸ್ಯಗೊಳಿಸುವುದು ಹಾಗೂ ಶಿಸ್ತಿಗೆ ಒಳಪಡಿಸುವುದು; ಸತ್ಯಮ್ ಎಂದರೆ ಇಡೀ ಸ್ವಭಾವದಲ್ಲಿ ಸತ್ಯ ಹಾಗೂ ನಿಷ್ಕಾಪಟ್ಯ, ಪ್ರಶಾಂತಿಃ, ಶಾಂತಿ ಹಾಗೂ ಸ್ಥಿರತೆಗಳಿರುವ ಸರ್ವಸಾಧಾರಣ ಸ್ಥಿತಿ, ಆತ್ಮಾಸಮ್ ಯಮಃ ಎಂದರೆ ಸ್ವಭಾವದ ಚಲನೆಗಳಲ್ಲಿ ನಿಯಂತ್ರಣಕ್ಕೊಳಪಡಿಸಬೇಕಾದ ಆವಶ್ಯಕತೆ ಇದ್ದಲ್ಲಿ ನಿಯಂತ್ರಿಸುವ ಸಾಮರ್ಥ್ಯ ಹಾಗೂ ರೂಢಿ.

**CWSA, 30/32** **– ಶ್ರೀ ಅರವಿಂದರು**

*

## ಸ್ವಭಾವದ ಒಂದು ಸರ್ವಸಾಧಾರಣ ಚಲನೆ

### ಸಾಧಾರಣ ಸ್ವಭಾವದ ಒಂದು ಚಲನೆ

ಸ್ವಾಭಾವಿಕವಾಗಿ ಲೈಂಗಿಕ ಚಲನೆ ತನ್ನಲ್ಲಿಯೇ ಒಂದು ಶಕ್ತಿಯಾಗಿದೆ, ಅವೈಯಕ್ತಿಕವಾಗಿದೆ ಮತ್ತು ಯಾವುದೇ ಒಂದು ವಿಶಿಷ್ಟ ವ್ಯಕ್ತಿ ಇಲ್ಲವೆ ವಸ್ತುವಿನ ಮೇಲೆ ಅವಲಂಬಿಸಿರುವುದಿಲ್ಲ. ತನಗಾಗಿ ಒಂದು ದೇಹ, ಸಂತೋಷಕ್ಕಾಗಿ ಒಂದು ಕ್ಷೇತ್ರ ಪಡೆಯಲು ಒಬ್ಬನ ಇಲ್ಲವೆ ಇನ್ನೊಬ್ಬನ ಮೇಲೆ ತನ್ನ ಹಿಡಿತವನ್ನಿರಿಸುತ್ತದೆ.

ಅದನ್ನು ಪ್ರಾಣಿಕ ವಿನಿಮಯದಲ್ಲಿ ತಡೆಗೊಳಪಡಿಸಿದಾಗ ಅದು ತನ್ನ ಪ್ರಾಣಿಕ ಗುಣಲಕ್ಷಣವನ್ನು ಕಳೆದುಕೊಳ್ಳುವ ಪ್ರವೃತ್ತಿ ಹೊಂದಿರುತ್ತದೆ ಮತ್ತು ಅದರ ಅತ್ಯಂತ ಭೌತಿಕ ಹಾಗೂ ಪ್ರಾಥಮಿಕ ಚಲನೆಯ ಮೂಲಕ ಆಕ್ರಮಣ ಮಾಡುತ್ತದೆ. ಪ್ರಾಣಿಕ ಭೌತಿಕದಿಂದ ಹಾಗೂ ಅತ್ಯಂತ ಭೌತಿಕವಾದದ್ದರಿಂದ ಅದನ್ನು ಚೆಲ್ಲಿಕೊಟ್ಟಾಗ ಮಾತ್ರ ಅದರ ಮೇಲೆ ಜಯ ಸಾಧಿಸಲಾಗಿರುತ್ತದೆ.

*

ಲೈಂಗಿಕತೆ ತನ್ನದೇ ತೃಪ್ತಿಗಾಗಿ ಅಸ್ತಿತ್ವದಲ್ಲಿರುತ್ತದೆ. ತನ್ನ ಕ್ರಿಯೆಗಾಗಿ ಇಲ್ಲವೆ ತನ್ನ ಚಟುವಟಿಕೆಯನ್ನು ಜಾಗ್ರತಗೊಳಿಸುವುದಕ್ಕಾಗಿ ಈ ಒಬ್ಬ ಇಲ್ಲವೆ ಆ ಒಬ್ಬ ವ್ಯಕ್ತಿ ಕೇವಲ ನೆಪ ಮಾತ್ರಕ್ಕಾಗಿರುತ್ತಾನೆ ಇಲ್ಲವೆ ವಾಹಿನಿಯಾಗಿರುತ್ತಾನೆ. ಆಂತರಿಕವಾಗಿ ಮೇಲ್ಗಡೆಯಿಂದ ಬರುವ ಶಾಂತಿ ಹಾಗೂ ಪರಿಶುದ್ಧತೆಗಳನ್ನು ಆ ಭಾಗದ ಮೇಲೆ ಹಿಡಿದಿಟ್ಟುಕೊಳ್ಳುವುದರ ಮೂಲಕ ಅದು ಮಾಯವಾಗಬೇಕು.

**CWSA, 31/487** **– ಶ್ರೀ ಅರವಿಂದರು**

*

**ಪ್ರಕೃತಿಯಲ್ಲಿ ಲೈಂಗಿಕತೆಯ ಪಾತ್ರ**

ನಿಜವಾಗಿ, ಪ್ರಕೃತಿ ಅದರ ಸಂತಾನೋತ್ಪಾದನೆಯ ಗುರಿಗೆ ಉತ್ತೇಜನ ನೀಡುವುದಕ್ಕಾಗಿ ಅದನ್ನು (ಲೈಂಗಿಕತೆಯ ಸಂತೋಷವನ್ನು) ಕೊಟ್ಟಿತು. ಇದಕ್ಕೆ ಪ್ರಮಾಣವೆಂದರೆ ಪಶು ಋತುವಿನ ಪ್ರಕಾರ ಕೈಕೊಳ್ಳುತ್ತದೆ, ಸಂತಾನೋತ್ಪಾದನೆಯಾದ ನಂತರ ಅದನ್ನು ಬಿಟ್ಟುಕೊಡುತ್ತದೆ. ಮನಸ್ಸನ್ನು ಹೊಂದಿದ ಮಾನವ, ಪ್ರಕೃತಿಯ ಆವಶ್ಯಕತೆ ಇಲ್ಲದೆ ಇದ್ದಾಗಲೂ ಕೂಡ ಅದನ್ನು ಕೈಕೊಳ್ಳಬಲ್ಲನೆಂಬುದನ್ನು ಶೋಧಿಸಿದ್ದಾನೆ– ಆದರೆ ಪ್ರಕೃತಿಯ ಮೂಲ ಉದ್ದೇಶವನ್ನು ಮನಸ್ಸು ವಿಕೃತಗೊಳಿಸುತ್ತದೆ ಎಂಬುದಕ್ಕೆ ಅದು ಒಂದು ಪ್ರಮಾಣವಾಗಿದೆ. ಮನುಷ್ಯನಿಗೆ ಕೇವಲ ಅಲ್ಪಕಾಲದ ಹಾಗೂ ಹಾನಿಕಾರಕ ಲೈಂಗಿಕತೆಯ ಸಂತೋಷ ಕೊಡಲು ಅದನ್ನು ಪ್ರಕೃತಿ ಸೃಷ್ಟಿಸಿತೆಂದು ಹೇಳುವುದಕ್ಕೆ ಪ್ರಮಾಣವಿಲ್ಲ.

*

ಕಟ್ಟುನಿಟ್ಟಾದ ಯೌಗಿಕ ಜೀವನಕ್ಕಾಗಿ ಕರೆ ಸ್ವೀಕರಿಸಿದವರು ಅಲ್ಪ ಸಂಖ್ಯೆಯಲ್ಲಿರುತ್ತಾರೆ ಮತ್ತು ಮನುಕುಲವನ್ನು ಮುಂದುವರಿಸಿಕೊಂಡು ಹೋಗಲು ಸಾಕಷ್ಟು ಜನರಿರುತ್ತಾರೆ.

ಮಾನವ ಸ್ವಭಾವ ಕುರಿತು ಯೋಗಿ ತಿರಸ್ಕಾರವನ್ನಾಗಲಿ, ಜುಗುಪ್ಸೆಯನ್ನಾಗಲಿ ಹೊಂದಿರುವುದಿಲ್ಲ. ಅವನು ಅದನ್ನು ಮತ್ತು ಅದರ ಪ್ರತಿಯೊಂದು ಚಟುವಟಿಕೆಗೆ ಇರಬೇಕಾದ ಸ್ಥಾನವನ್ನು ಸ್ಪಷ್ಟ ಹಾಗೂ ಸ್ಥಿರತೆ ಇರುವ ಗೌರವದಿಂದ ಅರ್ಥಮಾಡಿಕೊಂಡಿರುತ್ತಾನೆ, ಹಾಗೆಯೇ ಒಂದು ಕ್ರಿಯೆಯನ್ನು ಆಸೆಯಿಲ್ಲದೆ, ಉಚ್ಚತರ ನಿರ್ದೇಶನದಡಿಯಲ್ಲಿ ಕೈಕೊಳ್ಳಲು ಸಾಧ್ಯವಾದರೆ ಅದು ಹೆಚ್ಚು ಒಳ್ಳೆಯ ರೀತಿಯದಾಗಿರುತ್ತದೆ. ಅದನ್ನು ಕೆಲವೊಮ್ಮೆ ವಿಷಯಗಳಲ್ಲಿರುವ ದೈವೀ ಸಂಕಲ್ಪದ ನೆರವೇರಿಕೆ ಕಂಡುಕೊಳ್ಳಲು ಅನುಸರಿಸಬೇಕಾಗುತ್ತದೆ, ಹಾಗಿಲ್ಲದಿದ್ದರೆ ಅದನ್ನು ಕೈಗೆತ್ತಿಕೊಳ್ಳಲಾಗದು, ಅದು ಯುದ್ಧ ಹಾಗೂ ಅದರ ಜೊತೆಗೆ ಬರುವ ವಿನಾಶ ಇವುಗಳ ರೂಪದ್ದಾಗಿರುತ್ತದೆ. ಸಾಮಾನ್ಯ ಮನಸ್ಸಿನ ಸ್ವಭಾವದಲ್ಲಿ ಲೋಲರಾಗಲು ಇಂತಹ ನಿಯಮವನ್ನು ಬಹಳ ಹಗುರಾದ ರೀತಿಯಲ್ಲಿ ಆಶ್ರಯಿಸಲು ನಿಮಿತ್ತವನ್ನಾಗಿ ಪರಿವರ್ತಿಸಬಹುದು.

**CWSA, 31/485–86** **– ಶ್ರೀ ಅರವಿಂದರು**

*

**ಪ್ರಾಣಿಕ ಚೈತನ್ಯವನ್ನು ಆಹಾರವನ್ನಾಗಿ ಮಾಡಿಕೊಂಡ ರಹಸ್ಯ ಚೈತನ್ಯಗಳು**

ಅಲ್ಲಿ ಬಹಳಷ್ಟು ಚಿಕ್ಕ ಅಸ್ತಿತ್ವಗಳೂ ಕೂಡ ಇವೆ, ಬಹಳ ಜುಗುಪ್ಸೆ ತರಿಸುವಂತಹವು ಹೆಚ್ಚಿನ ಸಂಖ್ಯೆಯಲ್ಲಿರುತ್ತವೆ, ಅವು ದರಿದ್ರ ಲೈಂಗಿಕ ಆಸೆಯಿಂದ ಹುಟ್ಟಿಕೊಳ್ಳುತ್ತವೆ. ಈ ಆಸೆಯನ್ನು ಮೃತ್ಯುವಿನ ಸಮಯದಲ್ಲಿ ಕರಗಿಸಲಾಗದಿದ್ದರೆ ಈ ಅಸ್ತಿತ್ವಗಳು ಬದುಕಿರುವುದನ್ನು ಮುಂದುವರಿಸುತ್ತವೆ ಮತ್ತು ಅವು ಒಂದು ಸೂಕ್ಷ್ಮ ಸಂವೇದನೆಯುಳ್ಳ ಜನರ ವಾತಾವರಣದಲ್ಲಿ ನೆಲೆಗೊಳ್ಳುತ್ತವೆ, ಅವರನ್ನು ಉದ್ರೇಕಿಸುತ್ತವೆ ಹಾಗೂ ಪ್ರಚೋದಿಸುತ್ತವೆ. ಈ ಅಸ್ತಿತ್ವಗಳು ಲೈಂಗಿಕ ಕ್ರಿಯೆಯ ಸಮಯದಲ್ಲಿ ಹೊರಬಂದ ಪ್ರಾಣಿಕ ಶಕ್ತಿಯನ್ನು ಆಹಾರ ರೂಪದಲ್ಲಿ ಸೇವಿಸುತ್ತವೆ, ಸ್ವಾಭಾವಿಕವಾಗಿ ಅವುಗಳ ಏಕೈಕ ಆಸೆ ಸಾಧ್ಯವಿದ್ದಷ್ಟು ಪೋಷಣೆ ಪಡೆಯುವುದಾಗಿರುತ್ತದೆ. ಇಂತಹ ಅನೇಕ ಸತ್ತೆಗಳಿಂದ ಸುತ್ತುವರಿದುಕೊಂಡಿದ್ದ ಜನರನ್ನು ನಾನು ನೋಡಿದ್ದೇನೆ, ಅದು ಬಹಳ ಮೂರ್ತಸ್ವರೂಪದ್ದು.

**CWM, 4/192** **– ಶ್ರೀಮಾತೆ**

*

## ಲೈಂಗಿಕತೆ ಹಾಗೂ ಆನಂದ

ಲೈಂಗಿಕ ಪ್ರಸಂಗದಲ್ಲಿ ದಿವ್ಯಾನಂದವಿರುವುದಿಲ್ಲ. ಅದು ಅವಶ್ಯವಾಗಿ ಮತ್ತು ಸಾಧ್ಯವಾಗುವಷ್ಟರ ಮಟ್ಟಿಗೆ ಕೇವಲ ಸಾಗಿ ಹೋಗುವ ಉದ್ರೇಕ ಮತ್ತು ಸಂತೋಷ ಮತ್ತು ಅದು ಕೊನೆಗೆ ಸವೆದು ಹೋಗುವ ದೇಹದ ಜೊತೆಗೆ ಸವೆದು ಹೋಗುತ್ತದೆ.

*

ಲೈಂಗಿಕ ಕೇಂದ್ರ ಹಾಗೂ ಅದರ ಪ್ರತಿಕ್ರಿಯೆಗಳನ್ನು ಪರಿವರ್ತನೆಗೆ ಒಳಪಡಿಸಬಹುದು ಎಂಬುದು ನಿಜ. ಮೇಲ್ಗಡೆಯಿಂದ ಒಂದು ಆನಂದ ಅದರ ಸ್ಥಾನದಲ್ಲಿ ಕೆಳಗಿಳಿದು ಬರಬಹುದು. ಲೈಂಗಿಕ ಪ್ರಚೋದನೆ ಆ ಆನಂದದ ಕೀಳುಸ್ಥಿತಿ. ಆದರೆ ಈ ಆನಂದವನ್ನು (ಭೌತಿಕ ಹಾಗೂ ಪ್ರಾಣಿಕ ಆನಂದಗಳ ಜೊತೆಗೆ) ಸ್ವೀಕರಿಸುವುದು ಪ್ರಜ್ಞೆ ಪರಿವರ್ತನೆಗೊಳಗಾಗುವುದರ ಮೊದಲು ಆದರೆ ಅಪಾಯಕಾರಿಯಾಗಬಹುದು, ಏಕೆಂದರೆ ಇತರ ಹಾಗೂ ನಿಮ್ನತರ ವಿಷಯಗಳು ಅದರ ಅನುಕೂಲತೆ ಪಡೆಯಬಹುದು, ಅದರಲ್ಲಿ ಮಿಶ್ರಣಗೊಳ್ಳಬಹುದು ಮತ್ತು ಅದು ಇಡೀ ಸತ್ತೆಯನ್ನು ತಪ್ಪಾದ ದಾರಿಯಲ್ಲಿ ಮುನ್ನಡೆಸಿಕೊಂಡು ಹೋಗಬಹುದು, ಅದಕ್ಕಾದ ಪ್ರಭಾವದಿಂದಾಗಿ ಈ ನಿಮ್ನತರ ವಿಷಯಗಳು ಸಾಧನೆಯ ಭಾಗವೆಂದು, ಮೇಲ್ಗಡೆಯಿಂದ ಅನುಮತಿ ಪಡೆದವುಗಳು ಎಂಬ ಇಲ್ಲವೆ ನಿಮ್ನತರ ಅಂಶಗಳು ನಿಜವಾದ ಅನುಭವದ ಮೇಲೆ ಸಹಿಸಲಾಗದಷ್ಟು ಪ್ರಬಲವಾಗಿವೆ ಎಂಬ ಭಾವನೆ ಹೊಂದುವಂತಾಗುತ್ತದೆ, ಕೊನೆಯ ಸಂದರ್ಭದಲ್ಲಿ ಆನಂದ ನಿಂತು ಹೋಗುತ್ತದೆ ಮತ್ತು ಲೈಂಗಿಕ ಕೇಂದ್ರ ನಿಮ್ನತರ ಕ್ರಿಯೆಗಳ ವಶಕ್ಕೊಳಗಾಗುತ್ತದೆ.

*

(ಲೈಂಗಿಕ ಸಂತೋಷ ಹಾಗೂ ಬ್ರಹ್ಮಾನಂದ ಇವೆರಡೂ ಸಹೋದರ ಸಮಾನವಾಗಿರುವಂತಹವು) ಎಂಬ ಹೇಳಿಕೆಯಲ್ಲಿರುವ ಸತ್ಯವೆಂದರೆ ಎಲ್ಲ ಗಾಢವಾದ ಸಂತೋಷ ಅದರ ಮೂಲ ಬೇರಿನಲ್ಲಿ ಆನಂದತ್ತ ಮರಳಿ ಹೋಗುತ್ತದೆ ಎಂಬುದಾಗಿದೆ– ಕಾವ್ಯ, ಸಂಗೀತ, ಎಲ್ಲ ಬಗೆಯ ಉತ್ಪಾದನೆಗಳು, ಯುದ್ಧ, ಜಯ, ಸಾಹಸ ಕೂಡ ಇವೆಲ್ಲವುಗಳ ಸಂತೋಷ ಆ ಅರ್ಥದಲ್ಲಿ ಬ್ರಹ್ಮಾನಂದದ ಸಹೋದರ ಸಮಾನವಾಗಿರುವಂತೆ ಆಗಿರುತ್ತದೆ. ಆದರೆ ಆ ಪದಗುಚ್ಛ ಸಂಪೂರ್ಣವಾಗಿ ತಪ್ಪಾದದ್ದು. ಬ್ರಹ್ಮಾನಂದದಿಂದ ಜನ್ಮತಾಳಿದ ಭೌತಿಕ ಆನಂದವಿದೆ,

ಅದು ಬಹಳ ಉಚ್ಚತರವಾದದ್ದು, ಚೆನ್ನಾಗಿರುವಂತಹದು, ಲೈಂಗಿಕವಾದುದಕ್ಕಿಂತ ಹೆಚ್ಚು ಗಾಢವಾಗಿರುವಂತಹದು, ಆದರೆ ಅದರ ಲೈಂಗಿಕವಾದುದರ ಭಾಗ ಒರಟಾದದ್ದು ಹಾಗೂ ಉದ್ರೇಕಗೊಂಡ ಕೀಳುಸ್ಥಿತಿಯದು ಆಗಿರುತ್ತದೆ.

**CWSA, 31/488–89** **– ಶ್ರೀ ಅರವಿಂದರು**

*

## ಲೈಂಗಿಕತೆ ಹಾಗೂ ಪ್ರೇಮ

ಪ್ರೇಮ ಶುದ್ಧವಾಗಿರುವಂತೆ ಕಾಪಾಡಿಕೊಂಡು ಬರುವುದು ಸಾಧ್ಯವಿಲ್ಲ ಎಂದಲ್ಲ, ಆದರೆ ಅವೆರಡೂ (ಪ್ರೇಮ ಮತ್ತು ಲೈಂಗಿಕ ಆಸೆ) ಒಂದಕ್ಕೊಂದು ಎಷ್ಟು ಹತ್ತಿರ ಇವೆ ಎಂದರೆ ಮತ್ತು ಮನುಕುಲದ ಪಶುಸದೃಶ ಪ್ರಾರಂಭಗಳಲ್ಲಿ ಎಷ್ಟೊಂದು ತಳುಕು ಹಾಕಿಕೊಂಡಿವೆ ಎಂದರೆ ಅವುಗಳನ್ನು ಒಟ್ಟಿನಲ್ಲಿ ಪ್ರತ್ಯೇಕವಾಗಿ ಇರಿಸುವುದು ಸುಲಭವಾದದ್ದಲ್ಲ. ಪರಿಶುದ್ಧ ಚೈತ್ಯಾತ್ಮಿಕ ಪ್ರೇಮದಲ್ಲಿ ಲೈಂಗಿಕ ಆಸೆಯ ಗುರುತಿರುವುದಿಲ್ಲ, ಆದರೆ ಸಾಮಾನ್ಯವಾಗಿ ಪ್ರಾಣಿಕ ಮಮತೆ ಬಹಳ ಬಲವಂತವಾಗಿ ಚೈತ್ಯದೊಂದಿಗೆ ಸಹಕಾರಿಯಾಗಿರುತ್ತದೆ ಮತ್ತು ನಂತರ ಲೈಂಗಿಕವಾಗಿರದಿದ್ದರೂ ಮಿಶ್ರಣಕ್ಕೊಳಗಾಗಿರುತ್ತದೆ, ಆದರೆ ಪ್ರಾಣಿಕ ಮಮತೆ ಮತ್ತು ಪ್ರಾಣಿಕ ಭೌತಿಕ ಲೈಂಗಿಕ ಭಾವನೆ ಇವು ಇಡಿಯಾಗಿ ಒಂದಕ್ಕೊಂದು ಹತ್ತಿರವಾಗಿರುತ್ತವೆ. ವ್ಯಕ್ತಿಯಲ್ಲಿ ಲೈಂಗಿಕ ಶಕ್ತಿ ಬಲವತ್ತರವಾದಾಗ ಇದು ಬಹಳ ಬಲವತ್ತರವಾಗುತ್ತದೆ, ಪ್ರಾಣಿಕವಾಗಿ ಪ್ರಬಲರಾಗಿ ವರ್ತಿಸುವ ಜನರಲ್ಲಿ ಇದು ಕಂಡುಬರುತ್ತದೆ. ಯಾವಾಗಲೂ ಚೈತ್ಯಾತ್ಮಿಕ ಶಕ್ತಿ ಹೆಚ್ಚಾಗುವಂತೆ ಮಾಡುವುದು, ಲೈಂಗಿಕ ಪ್ರಚೋದನೆಯನ್ನು ನಿಯಂತ್ರಿಸುವುದು ಹಾಗೂ ಅದನ್ನು ಓಜಸ್ಸನ್ನಾಗಿ ಮಾಡುವುದು, ಪ್ರೇಮವನ್ನು ಭಗವಂತನೆಡೆಗೆ ಹೊರಳಿಸುವುದು ಇವು ಈ ತೊಂದರೆಯ ನಿವಾರಣೆಗೆ ಉಪಾಯಗಳಾಗಿರುತ್ತವೆ. ಸಂತಾನೋತ್ಪತ್ತಿಯ ಶಕ್ತಿಯನ್ನು ಲೈಂಗಿಕವಾಗಿ ವ್ಯಯಿಸದೆ ಓಜಸ್ಸಾಗುವಂತೆ ಯಾವಾಗಲೂ ಹೊರಳಿಸಬಹುದು.

*

ಚೈತ್ಯ ತನ್ನ ಪ್ರಭಾವವನ್ನು ಪ್ರಾಣಿಕದ ಮೇಲೆ ಇರಿಸಿದಾಗ ನೀವು ಮೊದಲು ವಹಿಸಬೇಕಾದ ಕಾಳಜಿ ಎಂದರೆ ಚೈತ್ಯದ ಚಲನೆಯೊಂದಿಗೆ ಕನಿಷ್ಠ ಮಟ್ಟದ ಪ್ರಾಣಿಕ ಚಲನೆಯ ಮಿಶ್ರಣವಾಗದಂತೆ ಮಾಡುವುದಾಗಿದೆ. ಕಾಮಾಸಕ್ತಿ ವಿಕೃತಿ ಇಲ್ಲವೆ

ಕೀಳುಸ್ಥಿತಿಯಾಗಿದ್ದು ಅದು ಪ್ರೇಮ ತನ್ನ ರಾಜ್ಯವನ್ನು ಸ್ಥಾಪಿಸುವುದಕ್ಕೆ ತಡೆ ಉಂಟುಮಾಡುತ್ತದೆ. ಹಾಗಾಗಿ ಹೃದಯದಲ್ಲಿ ಚೈತ್ಯಪ್ರೇಮದ ಚಲನೆಯಿದ್ದಾಗ ಕಾಮಾಸಕ್ತಿ ಇಲ್ಲವೆ ಪ್ರಾಣಿಕ ಆಸೆ ಇವು ಒಳಗೆ ಬರದ ಹಾಗೆ ನೋಡಿಕೊಳ್ಳುವುದು ಒಂದು ವಿಶೇಷ ವಿಷಯವಾಗಿದೆ– ಅದೇ ರೀತಿಯಲ್ಲಿ ಮೇಲ್ಗಡೆಯಿಂದ ಬಲ ಕೆಳಗಿಳಿದು ಬಂದಾಗ ವೈಯಕ್ತಿಕ ಮಹತ್ವಾಕಾಂಕ್ಷೆ ಹಾಗೂ ಗರ್ವ ಇವುಗಳನ್ನು ದೂರವಿರಿಸಬೇಕು, ಏಕೆಂದರೆ ವಿಕೃತಿಯ ಯಾವುದೇ ಬಗೆಯ ಮಿಶ್ರಣ ಚೈತ್ಯಾತ್ಮಿಕ ಇಲ್ಲವೆ ಆಧ್ಯಾತ್ಮಿಕ ಕ್ರಿಯೆಯನ್ನು ಭ್ರಷ್ಟಗೊಳಿಸುತ್ತದೆ ಮತ್ತು ನಿಜವಾದ ನೆರವೇರಿಕೆಗೆ ತಡೆ ಒಡ್ಡುತ್ತದೆ.

**CWSA, 31/490–91** **– ಶ್ರೀ ಅರವಿಂದರು**

*

**ಪ್ರೇಮದ ಭಿನ್ನ ಮುನ್ನಡೆಯ ಹಂತಗಳು**

ಸ್ತ್ರೀಯರಲ್ಲಿ ಅವ್ಯಭಿಚಾರತೆಯತ್ತ ಪ್ರವೃತ್ತಿ ಅಸಾಮಾನ್ಯವಾದದ್ದಲ್ಲ, ಅದು ಹೆಚ್ಚಾಗಿ ಸಾಮಾನ್ಯ ರೀತಿಯಲ್ಲಿ ಕಂಡುಬರುವಂತಹದು ಮತ್ತು ಅದು ಬಹಳ ಉಚ್ಚ ಸ್ತ್ರೀ ಮಾದರಿಯನ್ನು ಒಳಗೊಳ್ಳುತ್ತದೆ.

ಮನಸ್ಸು ಯೋಚನೆ ಹಾಗೂ ಗ್ರಹಿಕೆಗಳ ಸ್ಥಳ, ಹೃದಯ ಪ್ರೇಮದ ಆಸನ, ಪ್ರಾಣಿಕ ಆಸೆಯ ಆಸನ– ಆದರೆ ಅದು ಮಾನಸಿಕ ಪ್ರೇಮದ ಅಸ್ತಿತ್ವವನ್ನು ಹೇಗೆ ತಡೆಯಬಲ್ಲದು? ಮನಸ್ಸಿನ ಮೇಲೆ ಭಾವನಾತ್ಮಕವಾದ ಇಲ್ಲವೆ ಪ್ರಾಣಿಕದ ಭಾವನೆಗಳು ಮುತ್ತಿಗೆ ಹಾಕಬಹುದಾದ ರೀತಿಯಲ್ಲಿ ಹೃದಯ ಕೂಡ ಮನಸ್ಸಿನ ಪ್ರಾಬಲ್ಯಕ್ಕೆ ಒಳಗಾಗಬಹುದು ಮತ್ತು ಮಾನಸಿಕ ಶಕ್ತಿಗಳಿಂದ ಚಾಲನೆಗೊಳ–ಗಾಗಬಹುದು.

ಅಲ್ಲಿ ಪ್ರಾಣಿಕ ಪ್ರೇಮವಿದೆ, ಭೌತಿಕ ಪ್ರೇಮವಿದೆ. ಪ್ರಾಣಿಕವು ಪ್ರೇಮವಿಲ್ಲದೆಯೆ, ಆನೇಕ ಪ್ರಾಣಿಕ ಕಾರಣಗಳಿಂದಾಗಿ ಸ್ತ್ರೀಯನ್ನು ಬಯಸಬಹುದು ಅದು ಪ್ರಾಬಲ್ಯ ಮೆರೆಸುವ ಹುಟ್ಟುಗುಣದಿಂದಾಗಿರಬಹುದು, ಇಲ್ಲವೆ ವಶಪಡಿಸಿಕೊಳ್ಳುವುದಕ್ಕಾಗಿ–ರಬಹುದು, ತನ್ನದೇ ಪ್ರಾಣಿಕಕ್ಕಾಗಿ ಆಹಾರ ದೊರಕಿಸಲು ಇಲ್ಲವೆ ಪ್ರಾಣಿಕ ವಿನಿಮಯ ಮಾಡಲು ಸ್ತ್ರೀಯನ್ನು ಬಯಸಬಹುದು, ಬೇಟೆಗಾರ ಬೆನ್ನಟ್ಟಿ ಹೋಗುವ ಹುಟ್ಟುಗುಣ ಹೊಂದಿರುವ ಹಾಗೆ ತನ್ನ ಜಂಬದ ತೃಪ್ತಿಗಾಗಿ ಅವಳನ್ನು

ಬಯಸಬಹುದು. ಇದನ್ನು ಬಹಳ ಸಲ ಪ್ರೇಮವೆಂದು ಕರೆಯಲಾಗುತ್ತದೆ, ಆದರೆ ಅದು ಕೇವಲ ಪ್ರಾಣಿಕ ಆಸೆ, ಒಂದು ಬಗೆಯ ಕಾಮಾಸಕ್ತಿ. ಹಾಗಿದ್ದರೂ ಹೃದಯದ ಭಾವನೆಗಳು ಜಾಗ್ರತಗೊಂಡರೆ, ಆಗ ಅದು ಪ್ರಾಣಿಕ ಪ್ರೇಮವಾಗುತ್ತದೆ, ಯಾವುದಾದರೊಂದಿಗೆ ಇಲ್ಲವೆ ಈ ಎಲ್ಲ ಬಲವತ್ತರವಾದ ಪ್ರಾಣಿಕ ಉದ್ದೇಶಗಳೊಂದಿಗೆ ಮಿಶ್ರಣಗೊಂಡ ವಿಷಯವಾಗುತ್ತದೆ. ಆದರೆ ಅದಿನ್ನೂ ಪ್ರಾಣಿಕ ಪ್ರೇಮ.

ಅಲ್ಲಿ ಭೌತಿಕ ಪ್ರೇಮ ಕೂಡ ಇರಬಹುದು, ಸೌಂದರ್ಯದ ಆಕರ್ಷಣೆ, ಭೌತಿಕ ಲೈಂಗಿಕತೆಯ ರಂಜನೆ ಇಲ್ಲವೆ ಹೃದಯದ ಭಾವನೆಯನ್ನು ಜಾಗ್ರತಗೊಳಿಸುವ ಏನೋ ಒಂದು. ಅದು ಸಂಭವಿಸದಿದ್ದರೆ, ಆಗ ಭೌತಿಕ ಆವಶ್ಯಕತೆ ಎಲ್ಲವೂ ಆಗಿರುತ್ತದೆ, ಅದು ಕೇವಲ ಕಾಮಾಸಕ್ತಿ, ಬೇರೇನೂ ಅಲ್ಲ. ಆದರೆ ಭೌತಿಕ ಪ್ರೇಮ ಇರುವ ಸಾಧ್ಯತೆಯಿದೆ.

ಅದೇ ರೀತಿಯಲ್ಲಿ ಮಾನಸಿಕ ಪ್ರೇಮ ಇರಬಹುದು. ಮನುಷ್ಯ ತನ್ನ ಆದರ್ಶವನ್ನು ಇನ್ನೊಬ್ಬರಲ್ಲಿ ಇಲ್ಲವೆ ಯಾವುದೋ ಬಲವತ್ತರವಾದ ಮೆಚ್ಚುಗೆಯ ಭಾವೋದ್ರೇಕತೆಯಲ್ಲಿ ಹಾಗೂ ಆಶ್ಚರ್ಯದಲ್ಲಿ ಕಂಡುಕೊಳ್ಳುವ ಪ್ರಯತ್ನದಿಂದಾಗಿ–ರಬಹುದು, ಇಲ್ಲವೆ ಸಹಯೋಗಿಗಾಗಿ, ಮನುಷ್ಯನ ಸ್ವಭಾವದ ಪೂರಕರು ಹಾಗೂ ನೆರವೇರಿಕೆ ನೀಡುವವರಿಗಾಗಿ, ಸಹಧರ್ಮಿಣಿಗಾಗಿ, ಮಾರ್ಗದರ್ಶಕನಿಗಾಗಿ ಹಾಗೂ ಸಹಾಯಕನಿಗಾಗಿ, ನೇತಾರನಿಗಾಗಿ, ಪ್ರಭುವಿಗಾಗಿ ಇಲ್ಲವೆ ಬೇರೆ ಇತರ ನೂರಾರು ಉದ್ದೇಶಗಳಿಗಾಗಿ ಕಂಡುಕೊಳ್ಳುವಿಕೆ ಇರಬಹುದು. ಅದೇ ಸ್ವತಃ ಪ್ರೇಮ ಎಂದು ಹೇಳಲಾಗದು, ಆದಾಗ್ಯೂ ಬಹಳಷ್ಟು ಸಲ ಅದು ಎಷ್ಟೊಂದು ಉತ್ಸಾಹದಿಂದ ಕೂಡಿರುತ್ತದೆಂದರೆ ಅದನ್ನು ಪ್ರೇಮದಿಂದ ಭಿನ್ನ ಎಂದು ಪರಿಗಣಿಸಲಾಗುವುದಿಲ್ಲ, ಮತ್ತು ಅದು ಜೀವತ್ಯಾಗ ಮಾಡುವಷ್ಟರ ಮಟ್ಟಿಗೆ ಮುಂದೂಡಬಹುದು, ಇಡಿಯಾದ ಆತ್ಮಸಮರ್ಪಣೆ ಇತ್ಯಾದಿ ಇರಬಹುದು. ಆದರೆ ಅದು ಹೃದಯದ ಭಾವನೆಗಳನ್ನು ಜಾಗ್ರತಗೊಳಿಸಿದಾಗ ಅದು ಬಹಳ ಸಾಮರ್ಥ್ಯಪೂರ್ಣ ಪ್ರೇಮದತ್ತ ಕರೆದೊಯ್ಯಬಹುದು, ಅದು ಬೇರಿನಲ್ಲಿ ಇನ್ನೂ ಮಾನಸಿಕವಾದದ್ದು ಗುಣಲಕ್ಷಣದಲ್ಲಿ ಪ್ರಾಬಲ್ಯ ಮೆರೆಸುವಂತಹದು ಆಗಿರುತ್ತದೆ. ಹಾಗಿದ್ದಾಗ್ಯೂ, ಸಾಧಾರಣವಾಗಿ ಮನಸ್ಸು ಹಾಗೂ ಪ್ರಾಣಿಕ ಒಟ್ಟಿಗೆ ಕೂಡಿಕೊಳ್ಳುತ್ತವೆ, ಆದರೆ ಈ ಸಂಯೋಜನೆ ಭೌತಿಕ ಕ್ರಿಯೆ ಹಾಗೂ ಅದರಿಂದ ದೊರಕುವ ಈಡೇರಿಕೆಗಳ ಬಗ್ಗೆ

ಒಲವಿಲ್ಲದಿರುವಿಕೆ ಇಲ್ಲವೆ ಧನಾತ್ಮಕ ತಿರಸ್ಕಾರ ಇವುಗಳೊಂದಿಗೆ ಅಸ್ತಿತ್ವದಲ್ಲಿರಬಹುದು. ನಿಸ್ಸಂಶಯವಾಗಿ ಪುರುಷ ಒತ್ತಾಯಪಡಿಸಿದಾಗ ಸ್ತ್ರೀ ಶರಣಾಗುವ ಸಂಭವವಿರುತ್ತದೆ, ಆದರೆ ಅದನ್ನು ಜನರು 'a' Contre-couer' ಎಂದು ಕರೆಯುತ್ತಾರೆ. ಅದು ಅವಳ ಭಾವನೆಗಳು ಹಾಗೂ ಆಳಾತಿ ಆಳದ ಹುಟ್ಟುಗುಣಗಳು ಇವುಗಳ ವಿರುದ್ಧವಿರುತ್ತದೆ.

ಪ್ರತಿಯೊಂದನ್ನು ಲೈಂಗಿಕ ಉದ್ದೇಶ ಮತ್ತು ಲೈಂಗಿಕ ಪ್ರಚೋದನೆಗಳ ಸ್ಥಿತಿಗೆ ತರುವ ಮನೋವೈಜ್ಞಾನಿಕ ಶಾಸ್ತ್ರ ಅಜ್ಞಾನದ್ದಾಗಿರುತ್ತದೆ.

**CWSA, 31/492–93** **– ಶ್ರೀ ಅರವಿಂದರು**

*

**ತಾಮಸಿಕ ಜಡತ್ವ ಹಾಗೂ ಲೈಂಗಿಕ ಪ್ರಚೋದನೆ**

ಮಬ್ಬುತನವಿದ್ದಾಗ – ಯಾವುದೇ ಬಗೆಯ ತಮಸ್ಸಿದ್ದಾಗ – ಲೈಂಗಿಕ ಶಕ್ತಿ ಸುಲಭವಾಗಿ ಕಾರ್ಯಕೈಕೊಳ್ಳುತ್ತದೆ.

*

ಲೈಂಗಿಕತೆ ಮೇಲೆದ್ದು ಬರುವುದಕ್ಕೆ ನಿಷ್ಕ್ರಿಯತೆ ಒಂದು ವಾತಾವರಣ–ವಾಗಿರುತ್ತದೆ.

*

ಮನಸ್ಸಿನ ಹಾಗೂ ದೇಹದ ತಾಮಸಿಕ ಜಡತ್ವದ ಒಂದು ಸ್ಥಿತಿ ಲೈಂಗಿಕ ಪ್ರಚೋದನೆಯಿಂದ ಲೈಂಗಿಕ ಒತ್ತಡಕ್ಕೆ ಯಾವಾಗಲೂ ಅನುಕೂಲಕರವಾಗಿರುತ್ತದೆ. ನಾನು ಹೇಳಿದುದರ ಅರ್ಥ ನಿಮ್ಮ ನಿಮ್ನ ಪ್ರಾಣಿಕದ ಹಾಗೂ ಭೌತಿಕದ ಏನೋ ಒಂದು (ಇಡಿಯಾದದ್ದಲ್ಲ) ಲೈಂಗಿಕ ಪ್ರಚೋದನೆಗೆ ಪ್ರತಿಸ್ಪಂದಿಸುತ್ತದೆ. ಅಲ್ಲಿ ಅದಾಗಲೇ ಅಭೀಪ್ಸೆ ಹೊಂದಿರುವ ಇನ್ನೊಂದು ಭಾಗವಿರುತ್ತದೆ – ಆದರೆ ಲೈಂಗಿಕತೆಯ ಆಕ್ರಮಣಕ್ಕೆ ಅನುಕೂಲಕರವಾದ ಸ್ಥಿತಿ ಬಂದಾಗ ಅಭೀಪ್ಸೆ ನಿಶ್ಚಲವಾಗಿರುತ್ತದೆ ಇಲ್ಲವೆ ಸಾಕಷ್ಟು ಬಲವತ್ತರವಾಗಿರುವುದಿಲ್ಲ ಮತ್ತು ಇತರ ಅಂಶಗಳು ಲೈಂಗಿಕ – ಶಕ್ತಿ ಒಳಗೆ ಬರುವುದಕ್ಕೆ ಅನುವು ಮಾಡಿಕೊಡುತ್ತವೆ.

*

ಆ ವ್ಯಾಯಾಮ ಪ್ರಾಣಿಕ ಚೈತನ್ಯಗಳನ್ನು ಕಾರ್ಯದಲ್ಲಿ ತೊಡಗಿಸುವುದರ ಮೂಲಕ ಮತ್ತು ದೇಹಕ್ಕೆ ಬಲ ಹಾಗೂ ಆರೋಗ್ಯ ನೀಡುವುದರ ಮೂಲಕ ಬಹುಶಃ ಸಹಾಯ ಮಾಡಿರಬಹುದು. ಪ್ರಾಣಿಕ ಭೌತಿಕ ಸೋಮಾರಿಯಾದಾಗ, ವಿಶ್ರಾಂತಿಯಲ್ಲಿದ್ದಾಗ, ಆರೋಗ್ಯ ಸ್ಥಿತಿ ಸರಿ ಇಲ್ಲದಿದ್ದಾಗ ಲೈಂಗಿಕತೆ ಯಾವಾಗಲೂ ಹೆಚ್ಚಾಗುತ್ತದೆ.

*

ಲೈಂಗಿಕತೆಯ ಕಲ್ಪನೆ ಬರುವುದಕ್ಕೆ ಹಾಸಿಗೆಯ ಮೇಲೆ ಅರ್ಧ ಜಾಗ್ರತ ಅವಸ್ಥೆಯಲ್ಲಿ ಇಲ್ಲವೆ ಯಾವುದೇ ಚಟುವಟಿಕೆ ಇಲ್ಲದೆ ಅನುಭವ ಇಲ್ಲದೆ ಒರಗಿಕೊಂಡಿರುವುದಕ್ಕಿಂತ ಹೆಚ್ಚು ಅಪಾಯಕರ ಸ್ಥಿತಿ ಬೇರೊಂದಿಲ್ಲ.

**ಹಗಲುಗನಸುಗಳು**

(ಲೈಂಗಿಕತೆಯ ಯೋಚನೆಗಳಲ್ಲಿ) ತೊಡಗಿಕೊಂಡಿರದೇ ಇರಬೇಕೆಂಬುದು ಮುಖ್ಯ ವಿಷಯ. ಅದು ಕೇವಲ ಅನಪೇಕ್ಷಿತವಾಗಿ ತೊಂದರೆಗಳನ್ನು ಹೆಚ್ಚಿಸಿಕೊಳ್ಳುವುದಾಗಿದೆ. ಏಕೆಂದರೆ ಆಧ್ಯಾತ್ಮಿಕ ಪ್ರಯತ್ನ ನಿನ್ನ ಸ್ವಭಾವದ ಒಂದು ಭಾಗವಾಗಿದೆ. ಲೈಂಗಿಕ ಪ್ರಚೋದನೆಯನ್ನು ತೊಡೆದು ಹಾಕುವುದು ನಿನಗೆ ಕಠಿಣವಾಗಿದ್ದರೆ ನಿನ್ನಲ್ಲಿ ಆಧ್ಯಾತ್ಮಿಕ ಜೀವನ ಇಲ್ಲದೆ ಹೋದಾಗ ಅದು ಇನ್ನೂ ಹೆಚ್ಚು ಕಠಿಣವಾಗುವುದು, ಏಕೆಂದರೆ ಅದು ಅಂಟಿಕೊಳ್ಳುತ್ತದೆ ಮತ್ತು ಮರಳಿ ಬರುತ್ತದೆ, ಆದರೆ ಮನುಷ್ಯ ಅದಕ್ಕಿಂತ ಹೆಚ್ಚು ಪಟ್ಟು ಹಿಡಿದು ಅದನ್ನು ತಿರಸ್ಕರಿಸಬೇಕು, – ಅದಕ್ಕೆ ಬೇರೆ ಮಾರ್ಗವಿಲ್ಲ.

(ಸ್ತ್ರೀಯರೊಡನೆ) ಸಂಪರ್ಕವನ್ನು ಬಿಟ್ಟುಕೊಡುವುದರ ಮೂಲಕ ಅದನ್ನು ಎರಡು ರೂಪಗಳ ಮಟ್ಟಕ್ಕೆ ಇಳಿಸಬಹುದು – ಕನಸು ಹಾಗೂ ಕಲ್ಪನೆ. ಕನಸು ಎಚ್ಚೆತ್ತ ಮನಸ್ಸಿನ ಮೇಲೆ ಪರಿಣಾಮ ಬೀರದಿದ್ದರೆ ಬಹಳ ಮಹತ್ವದ್ದಲ್ಲ. ಅದು ಪರಿಣಾಮ ಬೀರುವ ಆವಶ್ಯಕತೆ ಇಲ್ಲ, ಅಲ್ಲದೆ ಅದು ಕುಂದುವಂತೆ ಮಾಡಬಹುದು, ಅದಕ್ಕೆ ಆಹಾರ ನೀಡದಿದ್ದರೆ ಕೊನೆಯಲ್ಲಿ ಮಸುಕಾಗಿ ಹೋಗುವುದು. ಕಲ್ಪನೆಗಳು ತಮ್ಮ ಮಾರ್ಗವನ್ನು ಮುಂದುವರಿಸಿಕೊಂಡು ಹೋಗದಂತೆ ಸಂಕಲ್ಪದ ತಪಸ್ಸಿನ ಮೂಲಕ ಮಾತ್ರ ಅವುಗಳನ್ನು ತೊಡೆದು ಹಾಕಬಹುದು. ಆದರೆ ಅವುಗಳು ಪ್ರಾರಂಭವಾಗುತ್ತಿರುವಾಗಲೇ ಅವುಗಳನ್ನು ಮುರಿದು ಹಾಕಬೇಕು. ನಿದ್ರೆಯಿಂದ ಎಚ್ಚೆತ್ತಾಗ ಹಾಸಿಗೆಯ ಮೇಲೆ ತಮಸ್ಸಿನ ಸ್ಥಿತಿಯಲ್ಲಿ ಒರಗಿಕೊಂಡಿದ್ದರೆ ಕಲ್ಪನೆಗಳು

ಬಹಳ ಸುಲಭವಾಗಿ ಬರುತ್ತವೆ. ತಮಸ್ಸನ್ನು ತಳ್ಳಿ ಹಾಕುವುದರ ಮೂಲಕ ಇಲ್ಲವೆ ಮನಸ್ಸನ್ನು ಬರಿದು ಮಾಡಿ ಮತ್ತೆ ನಿದ್ರೆ ಮಾಡುವುದರ ಮೂಲಕ ಮನುಷ್ಯ ಅವುಗಳನ್ನು ಮುರಿದು ಹಾಕಬೇಕು. ಇತರ ಸಮಯಗಳಲ್ಲಿ ಮನಸ್ಸನ್ನು ಬೇರೆಡೆ ಹೊರಳಿಸುವುದರ ಮೂಲಕ ಅವುಗಳನ್ನು ತಡೆಯಲು ಮನುಷ್ಯ ಶಕ್ತನಾಗಬೇಕು.

*

ಲೈಂಗಿಕ ಆಸೆಗೆ ಉತ್ತೇಜನ ನೀಡುವ ನೆನಪಿನಲ್ಲಿ ಇಲ್ಲವೆ ಕಲ್ಪನೆಯಲ್ಲಿ ನೆಲೆಸಲು ಅನುವು ಮಾಡಿಕೊಡುವುದು ಸಾಧನೆಗೆ ಅನಾರೋಗ್ಯಕರವಾದದ್ದು, ಯೌಗಿಕ ಪ್ರಜ್ಞೆಯ ಅಭಿವೃದ್ಧಿಗೆ ತಡೆಯನ್ನು ಉಂಟು ಮಾಡುವಂತಹದು. ಈ ಕಲ್ಪನೆಗಳು ಹಾಗೂ ನೆನಪುಗಳು ಬಂದಾಗ ಅವುಗಳಿಗೆ ಪ್ರೋತ್ಸಾಹ ನೀಡಬಾರದು.

**CWSA/31/823–33** **– ಶ್ರೀ ಅರವಿಂದರು**

*

**ಲೈಂಗಿಕ ಕನಸುಗಳು ಹಾಗೂ ಹೊರಸೂಸುವಿಕೆ**

ವೀರ್ಯದ ಹೊರಸೂಸುವಿಕೆ ಕುರಿತು ಹೇಳುವುದಾದರೆ ಅದು ಕಡಿಮೆ ಅಪಾಯಕಾರಿಯಾದದ್ದು. ಮದುವೆ ಮಾಡಿಕೊಳ್ಳದೆ ಉಳಿದುಕೊಂಡ ಬಹಳಷ್ಟು ಜನರಲ್ಲಿ ಅದು ಮೇಲಿಂದ ಮೇಲೆ ಆಗುತ್ತಿರುತ್ತದೆ. ಅದು ಬಹಳಷ್ಟು ಸಲ ಸಂಭವಿಸಿದರೆ ಪ್ರಾಣಿಕ ಶಕ್ತಿಗೆ ನಿರಾಶೆಯಾಗುತ್ತದೆ. ನಿಜವಾಗಿ ಅದನ್ನು ತಡೆಗಟ್ಟಬೇಕು. ಆದರೆ ಅದರ ವಿಚಾರ ಕುರಿತು ಉತ್ಪ್ರೇಕ್ಷೆ ಇರಬಾರದು. ಅದನ್ನು ತಡೆಯುವುದಕ್ಕೆ ಮೊದಲ ಆವಶ್ಯಕತೆ ಎಂದರೆ ಎಚ್ಚರವಾಗಿದ್ದಾಗ ಲೈಂಗಿಕ ಕಲ್ಪನೆಗಳಿಗೆ ಉತ್ತೇಜನ ನೀಡದೆ ಇರುವುದಾಗಿದೆ. ಅದನ್ನು ಇಡಿಯಾಗಿ ಕೈಕೊಂಡಾಗಲೂ ಕೂಡ ಹೊರಸೂಸುವಿಕೆ ಇನ್ನೂ ಮುಂದುವರಿದುಕೊಂಡು ಹೋಗಬಹುದು. ಏಕೆಂದರೆ ಅವಚೇತನ ಅದರ ನೆನಪನ್ನು ಹಾಗೂ ರೂಢಿಯನ್ನು ಕಾಪಾಡಿಕೊಂಡು ಬರುತ್ತದೆ. ಅದನ್ನು ನಿಲ್ಲಿಸಲು ನೀವು ನಿದ್ರೆ ಮಾಡುವ ಮೊದಲು ಅದು ಸಂಭವಿಸಬಾರದು ಎಂಬ ಬಲವಾದ ಸಂಕಲ್ಪವನ್ನು ನಿಮ್ಮಲ್ಲಿ ಇಟ್ಟುಕೊಂಡಿರಬೇಕು. ಹಾಗೆಯೇ ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದನ್ನು ನೀವು ಕಲಿತುಕೊಂಡರೆ, ನಿದ್ರೆ ಮಾಡುವುದಕ್ಕಿಂತ ಮೊದಲು ಲೈಂಗಿಕ ಕೇಂದ್ರದ ಮೇಲೆ ಬಲವತ್ತರವಾದ ಶಕ್ತಿಯನ್ನು ನಿರ್ದೇಶಿಸಿರಿ, ಅದರಿಂದಾಗಿ ಈ ಬಗೆಯ ಅಪಘಾತವನ್ನು ಪ್ರತಿಬಂಧಿಸಬಹುದು.

*

ಕನಸಿನಲ್ಲಿ ಹೊರಸೂಸುವಿಕೆ ಕಡಿಮೆಯಾಗುವಂತೆ ಇಲ್ಲವೆ ನಿಂತುಹೋಗುವಂತೆ ಮಾಡಲು ಮೊದಲು ಬ್ರಹ್ಮಚರ್ಯವಿರಬೇಕು, ಕಾಯಾ ಮನೋ ವಾಕ್ಯೇನ – ದೇಹದ ಕ್ರಿಯೆಯಿಂದ ಲೈಂಗಿಕತೆಯನ್ನು ಕೇವಲ ಹೊರದೂಡುವುದಷ್ಟೇ ಅಲ್ಲ, ಆದರೆ ಲೈಂಗಿಕ ಪ್ರಚೋದನೆಗಳನ್ನು ಪ್ರಾಣಿಕ ಹಾಗೂ ದೈಹಿಕ ಪ್ರಜ್ಞೆಯಿಂದ, ಲೈಂಗಿಕ ಯೋಚನೆಗಳನ್ನು ಹಾಗೂ ಕಲ್ಪನೆಗಳನ್ನು ಮನಸ್ಸು ಹಾಗೂ ಮಾತುಗಳಿಂದ ಹೊರಗಿರಿಸಬೇಕು ಮತ್ತು ಲೈಂಗಿಕ ವಿಷಯಗಳನ್ನು ಕುರಿತು ಮಾತನಾಡಬಾರದು ಮತ್ತು ಮಾತನಾಡಲು ಇಷ್ಟಪಡಬಾರದು. ಕನಸುಗಳು ಅವಚೇತನದಿಂದ ಮೇಲೆದ್ದು ಬರುತ್ತವೆ, ಅಲ್ಲಿ ಎಲ್ಲ ಪ್ರಭಾವಗಳು ಹಾಗೂ ಸಹಜ ಪ್ರವೃತ್ತಿಗಳು ಒಟ್ಟುಗೂಡಿರುತ್ತವೆ, ಇವುಗಳಲ್ಲಿ ಯಾವುದಾದರೊಂದು ಅವಚೇತನವನ್ನು ಉತ್ತೇಜಿತ–ವಾದದ್ದನ್ನಾಗಿ ಮಾಡಬಹುದು ಮತ್ತು ಅದರಲ್ಲಿ ಶೇಖರವಾದದ್ದನ್ನು ಹೆಚ್ಚಿಸಬಹುದು, ಅಂತಹದು ಕನಸಿನಲ್ಲಿ ಹರಿದು ಬರಬಹುದು. ಎಚ್ಚತ್ತುಕೊಂಡಾಗಿನ ಮನುಷ್ಯನ ಪ್ರಜ್ಞೆ ಬಹಳ ಪರಿಶುದ್ಧವಾಗಿದ್ದರೆ, ಆಗ ಅವಚೇತನದ ಮೇಲೆ ಸಂಕಲ್ಪವೊಂದನ್ನು ಇಲ್ಲವೆ ಶಕ್ತಿಯೊಂದನ್ನು ಇರಿಸು (ವಿಶೇಷವಾಗಿ ನಿದ್ರೆ ಮಾಡುವುದಕ್ಕಿಂತ ಮೊದಲು)ತ್ತ ಕೆಲ ಸಮಯದ ನಂತರ ಅವನು ಲೈಂಗಿಕ ಕನಸುಗಳನ್ನು ಹಾಗೂ ಹೊರಸೂಸುವಿಕೆಗಳನ್ನು ತೆಗೆದು ಹಾಕಬಲ್ಲನು.

**CWSA, 31/526–27** **– ಶ್ರೀ ಅರವಿಂದರು**

*

**ಅವಚೇತನದ ಪರಿಣಾಮಗಳು (impressions)**

ನೀವು (ಲೈಂಗಿಕ) ವಿಷಯಗಳನ್ನು (ಕಾದಂಬರಿಗಳಲ್ಲಿ) ಓದಿದಾಗ ಅವು ಮನಸ್ಸಿನಲ್ಲಿ ಪ್ರವೇಶಿಸುತ್ತವೆ ಮತ್ತು ಅವಚೇತನದಲ್ಲಿ ಸಾಗಿ ಹೋಗುತ್ತವೆ, ಅಲ್ಲಿ ಅವುಗಳ ಪರಿಣಾಮಗಳನ್ನು ಉಳಿಸುತ್ತವೆ. ಪ್ರಜ್ಞೆ ಲೈಂಗಿಕ ಪ್ರಚೋದನೆಯಿಂದ ಮುಕ್ತವಾಗಿರದೆ ಇದ್ದರೆ ಆ ಪರಿಣಾಮ ಅವಚೇತನದಿಂದ ಮೇಲೆದ್ದು ಬರುತ್ತದೆ ಮತ್ತು ಮನಸ್ಸಿನಲ್ಲಿ ಕಾರ್ಯಕೈಕೊಳ್ಳುತ್ತದೆ.

*

ಲೈಂಗಿಕ ಪ್ರಚೋದನೆ ಅವಚೇತನದಲ್ಲಿ ಆಳವಾಗಿ ಬೇರುಬಿಟ್ಟಿರುತ್ತದೆ, ಅದನ್ನು ತೊಡೆದು ಹಾಕುವುದು ಕಠಿಣವಾದದ್ದು. ಕೇವಲ ಭೌತಿಕ ಪ್ರಜ್ಞೆಯ ಪೂರ್ತಿ

ಪರಿವರ್ತನೆ ಅದನ್ನು ಕೈಕೊಳ್ಳಬಹುದು– ಅದಕ್ಕೆ ಬಲವತ್ತರವಾಗಿ ಬಂಧನಕ್ಕೊಳ–ಗಾಗಿರದ ಕೆಲವೇ ಜನರು ಅದನ್ನು ಕೈಕೊಳ್ಳಬಲ್ಲರು.

**CWSA, 31/526–27** **– ಶ್ರೀ ಅರವಿಂದರು**

*

## ಸ್ತ್ರೀಯರ ಮಧ್ಯದಲ್ಲಿ ಲೈಂಗಿಕ ತೊಂದರೆಗಳು

ವಿಶ್ವಂಭರ ನಿಯಮ ಎಂಬುದಿಲ್ಲ. ಸ್ತ್ರೀಯರು ಪುರುಷರ ಹಾಗೆ ಲೈಂಗಿಕ ಬಲವುಳ್ಳವರು ಇಲ್ಲವೆ ಇನ್ನೂ ಹೆಚ್ಚಿನ ರೀತಿಯಲ್ಲಿ ಬಲವುಳ್ಳವರು ಆಗಿರಬಹುದು. ಆದರೆ ಲೈಂಗಿಕ ಕ್ರಿಯೆ ಕುರಿತು ಒಲವು ಹೊಂದಿರದ ಅನೇಕ ಜನ ಸ್ತ್ರೀಯರಿರುತ್ತಾರೆ, ಅಂತಹ ಪುರುಷರ ಸಂಖ್ಯೆ ಕಡಿಮೆ ಇರುತ್ತದೆ. ಲಕ್ಷಾನುಗಟ್ಟಲೆ ಜನರಲ್ಲಿ ಒಬ್ಬ ಶುಕದೇವನಂತಿರುತ್ತಾನೆ, ಆದರೆ ಹಲವಾರು ಡಾಯನಾಗಳು ಮತ್ತು ಪಲ್ಲಾಸ ಅಥೆನ್ಸ್‌ರಂತಹರು ಇರುತ್ತಾರೆ. ನಿಜವಾಗಿ ಕನ್ಯೆ ಎಂಬ ಶಬ್ದ ಹೆಣ್ಣು ಮಕ್ಕಳಲ್ಲಿರುವ ಕಲ್ಪನೆ. ಶಾಶ್ವತವಾಗಿ ಮದುವೆಯಾಗದೆ ಉಳಿದುಕೊಳ್ಳುವ ವಿಚಾರದಿಂದ ಪುರುಷರು ದೂರ ಉಳಿದುಕೊಳ್ಳುತ್ತಾರೆ. ಲೈಂಗಿಕ ಹುಟ್ಟುಗುಣ ಜಾಗ್ರತಗೊಳ್ಳದೆ ಉಳಿದುಕೊಂಡಿರುವ ಮಹಿಳೆಯರಿರುತ್ತಾರೆ, ಅಂತಹರ ಮೇಲೆ ಪುರುಷರು ಒತ್ತಾಯದಿಂದ ಹೇರುತ್ತಾರೆ, ಬಹಳ ಜನರನ್ನು ಕುರಿತು ಅದನ್ನು ಹೇಳಲಾಗದು, ಬಹುಶಃ ಪುರುಷರಲ್ಲಿ ಅಂತಹರಾರೂ ಇರುವುದಿಲ್ಲ. ಆದರೆ ಈ ಚಿತ್ರಣಕ್ಕೆ ಇನ್ನೊಂದು ಬದಿಯಿದೆ. ಬಹುಶಃ ಸ್ತ್ರೀಯರಲ್ಲಿ ಲೈಂಗಿಕತೆಯ ಪ್ರಮಾಣ ಪುರುಷರಲ್ಲಿರುವುದಕ್ಕಿಂತ ಕಡಿಮೆಯಾಗಿರುತ್ತದೆ, – ಆದರೆ ವಶಪಡಿಸಿಕೊಳ್ಳುವ ಹಾಗೂ ವಶದಲ್ಲಿ ಉಳಿದುಕೊಳ್ಳುವ ಪ್ರಾಣಿಕ ಲೈಂಗಿಕತೆ ಇತ್ಯಾದಿ ಕುರಿತು ಏನನ್ನು ಹೇಳಲಾದೀತು?

*

ನಿನ್ನತ್ತ ಅವಳಿಗೆ ಲೈಂಗಿಕ ಭಾವನೆ ಬರದೆ ಇರಬಹುದು, ಆದರೆ ಒಂದು ಬಗೆಯ ಪ್ರಾಣಿಕ ಒತ್ತಡ ಇದೆ, ಅಗೋಚರ ನಿಯಂತ್ರಣವನ್ನು ಚೆಲ್ಲಿಕೊಡುವುದಾಗಿದೆ– ಅದನ್ನು ಹೇಗೆ ವ್ಯಕ್ತಪಡಿಸಬೇಕೆಂದು ನನಗೆ ತಿಳಿಯದು– ಪ್ರಕೃತಿಯಲ್ಲಿಯ ರಹಸ್ಯ ಉದ್ದೇಶ ಪುರುಷನನ್ನು ಆಕರ್ಷಿಸುವುದಾಗಿದೆ, ಅವನ ಲಕ್ಷ್ಯ ಸೆಳೆಯುವುದಾಗಿದೆ ಮತ್ತು ಅದನ್ನು ಸ್ತ್ರೀಯ ಮೇಲೆ ಸ್ಥಿರಗೊಳಿಸುವುದಾಗಿದೆ, ಹೆಚ್ಚಿನ ಇಲ್ಲವೆ ಕಡಿಮೆ ಪ್ರಮಾಣದಲ್ಲಿ ಅವನನ್ನು ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುವಂತೆ ಮಾಡಿ ಎಳೆಯುವುದಾಗಿದೆ.

ಸ್ತ್ರೀಯ ಮನಸ್ಸಿನಲ್ಲಿ ಉದ್ದೇಶ ಪ್ರಜ್ಞಾಪೂರ್ವಕವಾಗಿ ಇರದೇ ಹೋಗಬಹುದು, ಎಂದರೆ ಅವಳಿಗೆ ತೋರಿಬರದೆ ಇರಬಹುದು, ಸ್ಪಷ್ಟವಾಗದೆ ಇರಬಹುದು– ಅದು ಕೇವಲ ಸಹಜ ಪ್ರವೃತ್ತಿಯದು ಇಲ್ಲವೆ ಅವಚೇತನದ್ದು ಆಗಿರಬಹುದು. ಅಲ್ಲಿ ಭೌತಿಕವಾದ ಲೈಂಗಿಕತೆಯ ಉದ್ದೇಶವಿರಲಿಕ್ಕಿಲ್ಲ, ಸ್ವಯಂಪ್ರೇರಿತ ಚಲನೆಯಲ್ಲಿ ಪ್ರಾಣಿಕವಿರಬಹುದು. ಬಲವತ್ತರವಾದ ಪ್ರಾಣಿಕ ಮನೋಭಾವವಿದ್ದ ಸ್ತ್ರೀಯರೆಲ್ಲರೂ (X ಅಂತಹರಾಗಿದ್ದಾರೆ)– ಅದನ್ನು ಕೆಲವರು ಹೆಚ್ಚಿನ ರೀತಿಯಲ್ಲಿ ಇತರರು ಕಡಿಮೆ ರೀತಿಯಲ್ಲಿ ಹೊಂದಿರುತ್ತಾರೆ.

**CWSA, 31/534–35** **– ಶ್ರೀ ಅರವಿಂದರು**

**ಲೈಂಗಿಕ ಕಂಪನಗಳ ಪ್ರಾರಂಭ ಬಿಂದು**

ಸ್ತ್ರೀಯ ಒಂದು ಮುಗುಳ್ನಗು, ಯಾವುದೇ ಒಂದು ಚಲನೆ, ಚಹರೆ ಇಲ್ಲವೆ ಕ್ರಿಯೆ ಈ ಕಂಪನಗಳ ಪ್ರಾರಂಭ ಬಿಂದುವಾಗಬಹುದು. ಮುಗುಳ್ನಗುವಿನಲ್ಲಿಯೇ ಸ್ವತಃ ಅಂತರ್ನಿಹಿತವಾದ ಏನೋ ಒಂದಿರುತ್ತದೆ ಎಂದು ನನಗನಿಸುವುದಿಲ್ಲ, ಆದರೆ ಈ ಎಲ್ಲ ವಿಷಯಗಳು ರೂಢಿಗತ ಸಾಧನಗಳು, ಅವುಗಳ (ಹಾವಭಾವಗಳ) ಮೂಲಕ ಲೈಂಗಿಕತೆ ಪುರುಷನಲ್ಲಿ ಉದ್ರೇಕಗೊಳ್ಳುತ್ತದೆ. ಮತ್ತು ಸ್ತ್ರೀ ಅವುಗಳನ್ನು ಉಪಯೋಗಿಸುತ್ತಾಳೆ ಹಾಗೂ ಪುರುಷನೊಡನೆ ಸಂಪರ್ಕಕ್ಕೆ ಬರುವಾಗ ಅದನ್ನು ಪ್ರಜ್ಞಾರಹಿತವಾಗಿ ಇಲ್ಲವೆ ಕೇವಲ ರೂಢಿಯ ಮೂಲಕ ಕೈಕೊಳ್ಳುತ್ತಾಳೆ. ಪುರುಷನನ್ನು ಸಂತೋಷ ಪಡಿಸಬೇಕೆಂದಾಗಲಿ ಇಲ್ಲವೆ ಪ್ರಚೋದಿಸಬೇಕೆಂದಾಗಲಿ ಅವಳಲ್ಲಿ ಉದ್ದೇಶವಿರಬಹುದು ಇಲ್ಲವೆ ಇಲ್ಲದಿರಬಹುದು, ಆದಾಗ್ಯೂ ಅದು ಸಹಜ ಪ್ರವೃತ್ತಿಯ ಚಲನೆಯ ರೂಪದಲ್ಲಿ ಮೇಲೆ ಬರಬಹುದು. ಆದರೆ ಬಹಳ ಪ್ರಾಸಂಗಿಕವಾಗಿ ಸ್ತ್ರೀ ಮುಗುಳ್ನಗೆ ಬೀರಿದಾಗಲೂ, ಸಹಜ ಪ್ರವೃತ್ತಿಯ ಚಲನೆಯಿಂದ ಅದನ್ನು ಕೈಕೊಂಡಾಗಲೂ ಕೂಡ ಪುರುಷನ ಬದಿಯಲ್ಲಿ ಅವನು ಸ್ತ್ರೀ ಸಹಜ ಆಕರ್ಷಣೆಗೆ ಪ್ರತಿಸ್ಪಂದಿಸುವ ರೂಢಿಯಿಂದಾಗಿ ಅಲ್ಲಿ ಕಂಪನವಿರಬಹುದು. ಅವುಗಳ ಪ್ರಾರಂಭದಲ್ಲಿ ಈ ವಿಷಯಗಳು ಯಾಂತ್ರಿಕವಾಗಿರುತ್ತವೆ. ನಾನು ಈ ಮೊದಲು ಬರೆದ ಹಾಗೆ ಅದು ಭೌತಿಕ ಇಲ್ಲವೆ ಪ್ರಾಣಿಕ ಸ್ವಯಂಚಾಲಿತ ಪ್ರತಿ ಸ್ಪಂದನ (ಕಲ್ಪನೆ ಇತ್ಯಾದಿ), ಅದು ಅದನ್ನು ದೀರ್ಘಗೊಳಿಸುವುದು ಹಾಗೂ ಪರಿಣಾಮಕಾರಿಯಾಗುವಂತೆ

ಮಾಡುವುದು. ಹಾಗಿಲ್ಲದಿದ್ದರೆ ಸ್ವಲ್ಪ ಕಾಲದ ನಂತರ ಆ ಕಂಪನಗಳು ಮೃತವಾಗುವವು.

*

ಈಗ 'ಲೈಂಗಿಕ ಆಃಕರ್ಷಣೆ' ಎಂದು ಕರೆಯಲಾದುದರ ಸಹಾಯಕ್ಕಾಗಿ ಸ್ತ್ರೀ ತನ್ನ ಉಡುಪನ್ನು ಯಾವಾಗಲೂ ಉಪಯೋಗಿಸಿದ್ದಾಳೆ, ಪುರುಷ ಯಾವಾಗಲೂ ಅದರ ವಶಕ್ಕೆ ಒಳಗಾಗಿದ್ದಾನೆ. ಸ್ತ್ರೀಯರೂ ಕೂಡ ಉಡುಪು ಪುರುಷರಲ್ಲಿ ಆಕರ್ಷಣೆಗೆ ಒಂದು ಕಾರಣ ಎಂದು ಕಂಡುಕೊಂಡಿದ್ದಾರೆ (ಉದಾ: ಸೈನಿಕರ ಉಡುಪು). ಉಡುಪಿನಲ್ಲಿಯೂ ಕೂಡ ವಿಶಿಷ್ಟ ಅಭಿರುಚಿಗಳಿವೆ – ವಿಶಿಷ್ಟ ಬಣ್ಣದ ಸೀರೆ ಆಕರ್ಷಿಸಬೇಕೆಂಬುದು ಬಹಳ ಸಾಮಾನ್ಯ ಸಂಗತಿ. ಆಕರ್ಷಣೆ ಇಂದ್ರಿಯ ಹಾಗೂ ಪ್ರಾಣಿಕಗಳ ಮೇಲೆ ಕಾರ್ಯ ಕೈಕೊಳ್ಳುತ್ತದೆ, ಅದು ಹಾಗಿರುವಾಗ ಮನಸ್ಸು ಮನೋವೈಜ್ಞಾನಿಕ ದೋಷಗಳನ್ನು ಇಷ್ಟಪಡುವುದಿಲ್ಲ, ಅವು ತೆರೆದುಕೊಳ್ಳುವುದರಿಂದ ತಣ್ಣಗಾಗುತ್ತದೆ, ಅದರೆ ಮನಸ್ಸಿನ ಈ ತಿರಸ್ಕಾರ ಬಲವತ್ತರವಾದ ಪ್ರಾಣಿಕ ಆಕರ್ಷಣೆಯ ವಿರುದ್ಧ ಉಳಿದುಕೊಳ್ಳಲಾರದು.

ಮಮತೆ ಇತ್ಯಾದಿಗಳಿಗಾಗಿ ಇರುವ ಈ ಎಲ್ಲ ಬೇಡಿಕೆಗಳು ವಾಡಿಕೆಯಲ್ಲಿರುವ ಮೋಸಗೊಳಿಸುವಿಕೆಗಳು. ಅವುಗಳ ಮೂಲಕ ಸ್ತ್ರೀಯರು (ಪುರುಷರೂ ಕೂಡ) ಪ್ರಾಣಿಕ ಹಾಗೂ ಲೈಂಗಿಕ ವಿನಿಮಯಗಳಿಗೆ ಸಮೀಪಿಸುವುದನ್ನು ಮುಚ್ಚಿಡುವುದಾಗಿದೆ. ಕೆಲವೊಮ್ಮೆ ತಮ್ಮ ಕುತಂತ್ರವನ್ನು ತಿಳಿದುಕೊಂಡೇ ಉಪಯೋಗಿಸುತ್ತಾರೆ, ಕೆಲವೊಮ್ಮೆ ತಮ್ಮನ್ನು ಮೋಸಕ್ಕೆ ಒಳಪಡಿಸಿಕೊಳ್ಳುವುದು ಕೂಡ ಇರುತ್ತದೆ– ಬೇರೆ ಸಂದರ್ಭಗಳಲ್ಲಿ ಅವರು ಅದನ್ನು ನಂಬುತ್ತಾರೆ– ಅದು ಪ್ರಾಣಿಕ ಮನಸ್ಸನ್ನು ಆವರಿಸಿ ಅದನ್ನು ಭ್ರಾಂತಿಗೆ ಒಳಪಡಿಸುತ್ತದೆ. ಅದು ಯಾವುದು ಎಂಬುದು ಮಹತ್ವದ್ದಲ್ಲ.– ಆವರಣದ ಹಿಂದಿರುವ ವಾಸ್ತವ ಸಂಗತಿ ಮತ್ತು ಕೊನೆಯ ಪರಿಣಾಮ ಒಂದೇ ಆಗಿರುತ್ತವೆ. ಸಾಧಕರೂ ಕೂಡ ಲೈಂಗಿಕ ಶಕ್ತಿಯ ಸೆಳೆತಕ್ಕೆ ಒಳಗಾದಾಗ ತಮ್ಮ ಪ್ರಾಣಿಕದಿಂದ ಮೋಸಕ್ಕೊಳಗಾಗುತ್ತಾರೆ ಇಲ್ಲವೆ ತಮ್ಮನ್ನು ಮೋಸಗೊಳಿಸಲು ಪ್ರಯತ್ನಿಸುತ್ತಾರೆ, ಆಧ್ಯಾತ್ಮಿಕ ಮೈತ್ರಿ, ಚೈತ್ಯಾತ್ಮಿಕ ಕಟ್ಟು ಇಲ್ಲವೆ ತಮ್ಮ ಅವನತಿಯನ್ನು ಸಮರ್ಥಿಸಿಕೊಳ್ಳುವ ಯಾವುದಾದರೊಂದು ಕಾರಣ ಇಂತಹವುಗಳನ್ನು ನೆಪವನ್ನಾಗಿ ಮಾಡಿಕೊಳ್ಳುತ್ತಾರೆ, ಅದಕ್ಕೆ ಶರಣಾದರೆ (ಆಧ್ಯಾತ್ಮಿಕ) ಮಾರ್ಗದಿಂದ ಹೊರಗೆ ಬಹಳ ದೂರ ಹೋಗಬಲ್ಲರು.

*

ಲೈಂಗಿಕತೆಯ ಜೊತೆಗೆ ಸ್ಪರ್ಶದ ಸಹಯೋಗ ಪ್ರಾಣಿಕ ಭೌತಿಕವಾದದ್ದು, – ಹಾಗಿರದಿದ್ದರೆ ಸ್ಪರ್ಶದಿಂದ ಉಂಟಾಗುವ ಮಮತೆಯ ಅಭಿವ್ಯಕ್ತಿ ಮತ್ತು ಲೈಂಗಿಕತೆಯ ಭಾವನೆ ಇವುಗಳ ನಡುವೆ ಯಾವ ಸಂಪರ್ಕ ಇರುವುದಿಲ್ಲ. ಮಾತೆ, ಮಗ, ಸಹೋದರ, ಸಹೋದರಿ ಇವರು ಅಪ್ಪಿಕೊಳ್ಳುವ ವಾಡಿಕೆಯಲ್ಲಿರದ ಸಂದರ್ಭಗಳಲ್ಲಿ ಅವರಲ್ಲಿ ಲೈಂಗಿಕ ಭಾವನೆ ಇರುವುದಿಲ್ಲ. ಅದೊಂದು ಬಗೆಯ ರೂಢಿಗತ ಪರಿವರ್ತನೆ, ಭಾವನಾತ್ಮಕವಾದುದರಿಂದ ಭೌತಿಕವಾದುದರತ್ತ ಸಾಗಿ ಹೋಗುವುದಿರುತ್ತದೆ, ಅದು ಕೇವಲ ಒಂದು ರೂಢಿ, ಬಲವತ್ತರವಾಗಿದ್ದರೂ ಬದಲು ಮಾಡಬಹುದು.

*

## ಬ್ರಹ್ಮಚರ್ಯ

ಬ್ರಹ್ಮಚರ್ಯದ ಅರ್ಥ ಮೊದಲು "ಮದುವೆ ಮಾಡಿಕೊಳ್ಳದಿರುವಿಕೆ" ಎಂದಿದೆ._ ಅದನ್ನು ಯಾವ ಸ್ತ್ರೀಯೊಂದಿಗೂ ಭೌತಿಕವಾಗಿ ಲೈಂಗಿಕ ಸಂಬಂಧ ಹೊಂದಿರದೇ ಇರುವ ಸ್ಥಿತಿಗೆ ವಿಸ್ತರಿಸಬಹುದು, ಆದಾಗ್ಯೂ ಅದು ಅದರ ಯೋಗ್ಯ ಅರ್ಥವಲ್ಲ. ಅದು ಬ್ರಹ್ಮಚರ್ಯಕ್ಕೆ ಸರಿ ಸಮಾನವಾದುದಲ್ಲ. ಭಕ್ತಿಮಾರ್ಗ ಇಲ್ಲವೆ ಕರ್ಮಮಾರ್ಗದಲ್ಲಿ ಬ್ರಹ್ಮಚರ್ಯ ಬಂಧನಕಾರಿಯಾಗಿರುವುದಿಲ್ಲ, ಆದರೆ ವೈರಾಗ್ಯವಿರುವ ಜ್ಞಾನಯೋಗ, ಹಾಗೆಯೇ ರಾಜಯೋಗ, ಹಟಯೋಗಗಳಿಗೆ ಅವಶ್ಯವಾಗಿದೆ. ಗೃಹಸ್ಥ ಯೋಗಿಗಳಿಂದ ಅದನ್ನು ಒತ್ತಾಯದಿಂದ ಬೇಡಲಾಗಿಲ್ಲ. ಈ ಯೋಗ (ಸಮಗ್ರ ಯೋಗ) ದಲ್ಲಿ ಮನುಷ್ಯ ಲೈಂಗಿಕತೆಯ ಮೇಲೆ ಜಯ ಸಾಧಿಸಬೇಕೆಂಬ ದೃಷ್ಟಿಕೋನವಿದೆ. ಹಾಗಿಲ್ಲದಿದ್ದರೆ ನಿಮ್ನತರ ಪ್ರಾಣಿಕ ಹಾಗೂ ಭೌತಿಕ ಭಾಗಗಳ ಪರಿವರ್ತನೆ ಆಗುವುದಿಲ್ಲ. ಎಲ್ಲ ಭೌತಿಕ ಲೈಂಗಿಕ ಸಂಪರ್ಕ ನಿಂತುಹೋಗಬೇಕು, ಹಾಗಿಲ್ಲದಿದ್ದರೆ ಮನುಷ್ಯ ಗಂಭೀರ ಅಪಾಯಗಳಿಗೆ ತನ್ನನ್ನು ತೆರೆದಿರಿಸಿಕೊಳ್ಳುತ್ತಾನೆ. ಲೈಂಗಿಕತೆಯ ಒತ್ತಡದ ಮೇಲೆಯೂ ಕೂಡ ಜಯ ಸಾಧಿಸಬೇಕು, ಆದರೆ ಅದರ ಮೇಲೆ ಪೂರ್ತಿ ಜಯ ಸಾಧಿಸುವವರೆಗೆ ಯಾವ ಸಾಧನವೂ ಇರುವುದಿಲ್ಲ, ಯಾವ ಅನುಭವವೂ ಇರುವುದಿಲ್ಲ ಎಂಬುದು ವಾಸ್ತವ ಸಂಗತಿಯಲ್ಲ. ಕೇವಲ ಅ ಜಯ ಸಾಧಿಸದೆ ಮನುಷ್ಯ ಕೊನೆಯವರೆಗೂ ಸಾಗಿ ಹೋಗಲಾರ. ಮತ್ತು ಅದು (ಲೈಂಗಿಕತೆ) ಗಂಭೀರ ಅಡೆತಡೆಗಳಲ್ಲಿ ಒಂದು ಎಂದು ಮತ್ತು ಅದರಲ್ಲಿ ಲೋಲರಾಗುವುದು ಅಸಾಧಾರಣ ಕ್ಷೋಭೆಗೆ ಕಾರಣವೆಂದು ಸ್ಪಷ್ಟವಾಗಿ ಗುರುತಿಸುವ ಆವಶ್ಯಕತೆ ಇದೆ.

*

ಬ್ರಹ್ಮಚರ್ಯ ಒಂದು ವಿಷಯ ಮತ್ತು ಲೈಂಗಿಕತೆಯ ಒತ್ತಡಗಳಿಂದ ಮುಕ್ತಿ ದೊರಕಿಸುವುದು ಇನ್ನೊಂದು ವಿಷಯ. ಇವುಗಳ ಮೇಲೆ ಜಯ ಸಾಧಿಸಬೇಕು ಮತ್ತು ತೊಡೆದು ಹಾಕಬೇಕು, ಆದರೆ ಅವುಗಳಿಂದ ಮುಕ್ತಿ ಪಡೆಯುವುದನ್ನು ಯೋಗದಲ್ಲಿ ಸಾಗಿ ಹೋಗುವುದಕ್ಕೆ ಪರೀಕ್ಷೆ ಎಂದು ಭಾವಿಸಿದರೆ ನನ್ನ ಯೋಗಕ್ಕೆ ಎಷ್ಟು ಜನರು ತಕ್ಕವರಾಗಬಹುದೆಂಬುದನ್ನು ಕುರಿತು ನನ್ನಲ್ಲಿ ಕುತೂಹಲವಿದೆ. ಜಯ ಸಾಧಿಸುವುದಕ್ಕಾಗಿ ಸಂಕಲ್ಪವಿರಬೇಕು. ಆದರೆ ಲೈಂಗಿಕ ಪ್ರಚೋದನೆಯನ್ನು ತೆಗೆದು ಹಾಕುವುದು ಮಾನವ ಸ್ವಭಾವಕ್ಕೆ ಅತ್ಯಂತ ಕಠಿಣ ವಿಷಯಗಳಲ್ಲಿ ಒಂದು, ಮತ್ತು ಅದಕ್ಕೆ ಸಮಯ ಬೇಕಾಗುತ್ತಿದ್ದರೆ, ಅದು ಕೇವಲ ಸ್ವಾಭಾವಿಕವಾದದ್ದು.

**CWSA, 31/5347–52** **– ಶ್ರೀ ಅರವಿಂದರು**

*

## ಪುರುಷ ಮತ್ತು ಸ್ತ್ರೀ

### ಮದುವೆ

ಇಡೀ ಆಧ್ಯಾತ್ಮಿಕ ಜೀವನಕ್ಕೆ ಸತ್ತೆ ತಯಾರಾಗುವುದಕ್ಕಿಂತ ಮೊದಲು ಸರ್ವಸಾಧಾರಣ ಜೀವನವನ್ನು ಕೈಬಿಡುವುದು ಸಹಾಯಕವಾಗುವುದಿಲ್ಲ. ಹಾಗೆ ಮಾಡುವುದರ ಅರ್ಥ ಭಿನ್ನ ಅಂಶಗಳ ನಡುವೆ ಹೋರಾಟವನ್ನು ಎಸೆದು ಬಿಡುವುದಾಗಿದೆ, ಸ್ವಭಾವ ಸಹಿಸಿಕೊಳ್ಳಲಾರದಷ್ಟು ಒಂದು ಬಿಂದುವಿನವರೆಗೆ ತೀಕ್ಷ್ಣಗೊಳಿಸುವುದಾಗಿದೆ. ನಿಮ್ಮಲ್ಲಿರುವ ಪ್ರಾಣಿಕ ಅಂಶಗಳನ್ನು ಶಿಸ್ತುಪಾಲನೆಯಿಂದ ಮತ್ತು ಜೀವನದ ಅನುಭವದಿಂದ ಭೇಟಿ ಮಾಡಬೇಕು, ಆಗ ಆಧ್ಯಾತ್ಮಿಕ ಗುರಿಯನ್ನು ಗಮನದಲ್ಲಿರಿಸಿಕೊಂಡಿರಬೇಕು ಮತ್ತು ಜೀವನದ ಮೇಲೆ ಕರ್ಮಯೋಗದ ಮನೋಭಾವದಿಂದ ಪ್ರಗತಿಪರವಾಗಿ ಆಳಿಕೆ ನಡೆಸಬೇಕು.

ಈ ಕಾರಣದಿಂದಾಗಿ ನಿನ್ನ ಮದುವೆಗೆ ನಾವು ಸಮ್ಮತಿ ಸೂಚಿಸಿದೆವು.

ಸಾಧಾರಣವಾಗಿ ಮದುವೆಯ ಪ್ರಶ್ನೆ ಇರುವಾಗ ಆಧ್ಯಾತ್ಮಿಕ ಜೀವನಕ್ಕಾಗಿ ಬರುವವರಿಗೆ ಅದು ಸೂಕ್ತವೆಂದು ನಾವು ಪರಿಗಣಿಸುವುದಿಲ್ಲ. ಸಾಮಾನ್ಯವಾಗಿ ಮದುವೆಯ ಅರ್ಥ ಸಾಕಷ್ಟು ತೊಂದರೆ, ಭಾರವಾದ ಹೊರೆ, ಪ್ರಾಪಂಚಿಕ ಜೀವನಕ್ಕೆ ಬಂಧನ ಇವೆಲ್ಲ ಇರುವಂತಹದು, ಏಕಮುಖವಾದ ಆಧ್ಯಾತ್ಮಿಕ

ಪ್ರಯತ್ನದ ಮಾರ್ಗದಲ್ಲಿ ಭವ್ಯ ತೊಂದರೆಗಳಿರುವಂತಹದು. ಅದರ ಕೇವಲ ಸ್ವಾಭಾವಿಕ ಉದ್ದೇಶ, ಲೈಂಗಿಕ ಪ್ರವೃತ್ತಿಯ ಮೇಲೆ ಜಯ ಸಾಧಿಸುವುದು ಅಸಾಧ್ಯವಾದರೆ, ಅದಕ್ಕೆ ಸೀಮಿತ, ನಿಯಂತ್ರಣದಲ್ಲಿರುವ ತೃಪ್ತಿಯನ್ನು ಕೊಡುವು–ದಾಗಿರಬೇಕು. ಮನಸ್ಸನ್ನು ನಿಯಂತ್ರಣದಲ್ಲಿ ಹಾಗೂ ನಿಗ್ರಹದಲ್ಲಿ ಇರಿಸುವುದು ನಿನಗೆ ಯಾವ ರೀತಿಯಲ್ಲಿ ಸಹಾಯ ಮಾಡುವುದು ಎಂಬುದು ನನಗೆ ಕಂಡುಬರುತ್ತಿಲ್ಲ. ತಳಮಳದಲ್ಲಿರುವ ಮನಸ್ಸನ್ನು ಕೇವಲ ಅಂತರಂಗದಿಂದ ನಿಶ್ಚಲವಾಗಿರಿಸಬೇಕು.

*

ಒಮ್ಮೆ ಭಗವಂತನೆಡೆಗೆ ಹೊರಳಿಕೊಂಡ ನಂತರ ಯಾವುದೇ ಬಗೆಯ ಹತಾಶೆ ನಿನ್ನ ಮೇಲೆ ಹಿಡಿತ ಸಾಧಿಸುವುದಕ್ಕೆ ಅನುವು ಮಾಡಿಕೊಡುವುದು ಸರಿಯಲ್ಲ. ಕಷ್ಟಗಳೇನೇ ಇರಲಿ, ತೊಂದರೆಗಳೇನೇ ಇರಲಿ ಭಗವಂತನನ್ನು ನೆಚ್ಚಿಕೊಂಡಿರುವುದರಿಂದ, ಅವನು ಆದ್ಯಂತ ಕರೆದೊಯ್ಯುತ್ತಾನೆ ಎಂಬ ಗಾಢ ನಂಬಿಕೆಯನ್ನು ಕಾಪಾಡಿಕೊಂಡು ಬರಬೇಕು. ಈಗ ನೀನು ನಿನ್ನ ಪತ್ರದಲ್ಲಿ ಬರೆದು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡುತ್ತೇನೆ.

1. ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸಬೇಕೆಂಬುದು ನಿನ್ನ ನಿರ್ಧಾರವಾಗಿದ್ದರೆ ಮದುವೆ, ಕುಟುಂಬ ಜೀವನ ಕೇವಲ ಅಡ್ಡಲಾಗಿ ಬರಬಲ್ಲವು. ಕೆಲಕಾಲದವರೆಗೆ ನಿಯಂತ್ರಣದಲ್ಲಿರಿಸಿದ ವಿವೇಚನಾಶೀಲ ಲೋಲುಪತೆಯಲ್ಲಿದ್ದಾಗ ಲೈಂಗಿಕ ಒತ್ತಡವನ್ನು ನಿಧಾನಗತಿಯಿಂದ ಸಂಕಲ್ಪಕ್ಕೆ ಅಧೀನವಾದ ನಿಗ್ರಹಕ್ಕೆ ತರುವುದುದರ ಬಗ್ಗೆ ಭರವಸೆ ಇಲ್ಲದಿದ್ದರೆ ಮದುವೆ ಮಾಡಿಕೊಳ್ಳುವುದು ಸರಿಯಾದದ್ದು. ಆದರೆ ನೀನು ಹೇಳುತ್ತಿರುವಂತೆ ನಿನ್ನ ಮೇಲಿನ ಅದರ ಹಿಡಿತ ಕುಗ್ಗುತ್ತಿರುವುದರಿಂದ ಮದುವೆ ಅನಿವಾರ್ಯವಾಗಿರುವುದಿಲ್ಲ.

2. ಎಲ್ಲವನ್ನೂ ಬಿಟ್ಟುಕೊಟ್ಟು ಅಲ್ಲಿಂದ ದೂರ ಬರುವಂತಾಗಬೇಕಾದರೆ ಕೇವಲ ಅಲ್ಲಿ ಸ್ಪಷ್ಟ ಮತ್ತು ನೆಲೆಸಿದ ನಿರ್ಧಾರ ನಿನ್ನೊಳಗಿರಬೇಕು. ಪ್ರಚೋದನೆಯೊಂದರಿಂದ ಅದನ್ನು ಕೈಕೊಂಡರೆ ನೀನು ಇಲ್ಲಿಗೆ ಬಂದಾಗ ಸಾಧನೆಯಲ್ಲಿ ಎಲ್ಲ ಹಳೆಯ ವಿಷಯಗಳ ಎಳೆತಕ್ಕೊಳಗಾಗಬೇಕಾಗುವುದು. ಉಗ್ರ ಕ್ಷೋಭೆ ಹಾಗೂ ಹೋರಾಟಗಳ ಅಪರಾಧೀನಾನುಭೋಗಕ್ಕೆ ಒಳಗಾಗಬೇಕಾಗುವುದು. ಉಳಿದೆಲ್ಲ ವಿಷಯಗಳು ನಿನ್ನಿಂದ ಕಳಚಿ ಹೋದಾಗ ಇಲ್ಲವೆ ಕಡಿದುಕೊಂಡು ಹೋದಾಗ, ಆಗ ಅದನ್ನು

(ಸಾಧನೆಯನ್ನು) ಕೈಕೊಳ್ಳಬಹುದು. ನಿನ್ನ ಅಭೀಪ್ಸೆಯಲ್ಲಿ ಪಟ್ಟು ಹಿಡಿದು ಉಳಿದುಕೋ; ನಿನ್ನ ಪ್ರಾಣದ ಮೇಲೆ ನಂಬಿಕೆಯನ್ನು ಒತ್ತಾಯದಿಂದ ತಂದುಕೋ ಮತ್ತು ಬಹಳ ಅಚಂಚಲನಾಗಿರು. ಅದು ಬರುವುದು.

**CWSA, 31/543–44** – ಶ್ರೀ ಅರವಿಂದರು

**ಪುರುಷ ಹಾಗೂ ಸ್ತ್ರೀ ಇವರ ನಡುವಿರುವ ತಪ್ಪು ತಿಳಿವಳಿಕೆಯ ನಿವಾರಣೆ**

ಯಾವುದೇ ಸಂದರ್ಭದಲ್ಲಿ ನಿರ್ವಿವಾದವಾದ ವಾಸ್ತವ ಸಂಗತಿ ಉಳಿದುಕೊಳ್ಳುತ್ತದೆ: ಪುರುಷ ಹೆಚ್ಚಿನವನು ಎಂಬ ಭಾವನೆ ಹೊಂದಿರುತ್ತಾನೆ ಮತ್ತು ಸ್ತ್ರೀಯ ಮೇಲೆ ಪ್ರಾಬಲ್ಯ ಮೆರೆಸಲು ಬಯಸುತ್ತಾನೆ, ಸ್ತ್ರೀ ದಬ್ಬಾಳಿಕೆಗೆ ಒಳಗಾದ ಭಾವನೆ ತಂದುಕೊಳ್ಳುತ್ತಾಳೆ, ಬಹಿರಂಗವಾಗಿ ಇಲ್ಲವೆ ರಹಸ್ಯವಾಗಿ ಬಂಡಾಯವೇಳುತ್ತಾಳೆ. ಲಿಂಗ ಭೇದಗಳ ನಡುವಿರುವ ಜಗಳ ಯುಗಯುಗಾಂತರಗಳಿಂದ ಚಿರಸ್ಮರಣೀಯ–ವಾಗಿದೆ, ಸಾರದಲ್ಲಿ ಏಕರೂಪದ್ದಾಗಿದೆ, ರೂಪಗಳಲ್ಲಿ ಹಾಗೂ ವರ್ಣಗಳಲ್ಲಿ ಅನೇಕ ರೂಪಗಳದ್ದಾಗಿದೆ.

ಸಹಜವಾಗಿ ಪುರುಷ ಎಲ್ಲ ದೂಷಣೆಯನ್ನು ಸ್ತ್ರೀಯ ಮೇಲೆ ಚೆಲ್ಲಿಕೊಡುತ್ತಾನೆ, ಅದೇ ರೀತಿಯಲ್ಲಿ ಸ್ತ್ರೀ ಇಡೀ ದೂಷಣೆಯನ್ನು ಪುರುಷನ ಮೇಲೆ ಹೊರಿಸುತ್ತಾಳೆ. ಸತ್ಯ ಹೇಳುವುದಾದರೆ ಆ ದೂಷಣೆಯನ್ನು ಅವರಿಬ್ಬರಲ್ಲಿ ಸಮನಾಗಿ ಹಂಚಿಕೊಡಬೇಕು ಮತ್ತು ಯಾರೂ ತಾವು ಇನ್ನೊಬ್ಬರಿಗಿಂತ ಹೆಚ್ಚಿನವರೆಂದು ಜಂಬಕೊಚ್ಚಿಕೊಳ್ಳಬಾರದು. ಅಲ್ಲದೆ ಹೆಚ್ಚಿನವರಾಗಿರುವಿಕೆ ಮತ್ತು ಕೀಳಾಗಿರುವಿಕೆ ಇವುಗಳ ವಿಚಾರವನ್ನು ತೆಗೆದು ಹಾಕುವವರೆಗೆ ಏನೂ ಮತ್ತು ಯಾರೂ ಈ ತಪ್ಪು ತಿಳಿವಳಿಕೆಗೆ ಕೊನೆ ತಂದುಕೊಡಲಾರರು. ಈ ತಪ್ಪು ತಿಳಿವಳಿಕೆ ಮಾನವ ಜೀವಜಾತಿಯನ್ನು ಎರಡು ವಿರುದ್ಧ ಪಡೆಗಳಲ್ಲಿ ವಿಭಜಿಸುತ್ತದೆ, ಮತ್ತು ಸಮಸ್ಯೆ ಪರಿಹಾರ ಕಂಡುಕೊಳ್ಳಲಾರದು...

ಏಕೆಂದರೆ ಪುರುಷ ಹಾಗೂ ಸ್ತ್ರೀ ತಮ್ಮ ಪರಸ್ಪರ ಸಂಬಂಧದಲ್ಲಿ ಒಮ್ಮೆಗೆ ದಬ್ಬಾಳಿಕೆಯ ಸ್ವಭಾವದವರು ಮತ್ತು ಪರಸ್ಪರರಿಗೆ ದಯನೀಯ ಗುಲಾಮರು ಆಗಿರುತ್ತಾರೆ.

ಹೌದು, ಗುಲಾಮರು, ಏಕೆಂದರೆ ಮನುಷ್ಯನಲ್ಲಿ ಆಸೆಗಳು, ಆದ್ಯತೆಗಳು, ಮತ್ತು ಅಂಟಿಕೊಳ್ಳುವುವಿಕೆಗಳು ಇರುವವರೆಗೆ ಮನುಷ್ಯ ಈ ವಿಷಯಗಳ

ಗುಲಾಮನಾಗಿರುತ್ತಾನೆ ಮತ್ತು ತಮ್ಮ ತೃಪ್ತಿಗಾಗಿ ಯಾರ ಮೇಲೆ ಅವಲಂಬಿಸಿ–ರುತ್ತಾನೋ ಅವರ ಗುಲಾಮನಾಗಿರುತ್ತಾನೆ.

ಹೀಗೆ ಸ್ತ್ರೀ ಪುರುಷನಿಗೆ ಗುಲಾಮಳಾಗಿರುತ್ತಾಳೆ, ಏಕೆಂದರೆ ಪುರುಷನಿಗಾಗಿ ಅಕರ್ಷಣೆಯ ಭಾವನೆ ತಂದುಕೊಳ್ಳುತ್ತಾಳೆ, ಮನೆಯೊಂದಕ್ಕಾಗಿ ಹಾಗೂ ಅದು ತರುವ ಸುರಕ್ಷಿತತೆಗಾಗಿ ಅವಳಲ್ಲಿ ಆಸೆಯಿರುತ್ತದೆ ಮತ್ತು ಕೊನೆಯದಾಗಿ ತಾಯ್ತನಕ್ಕಾಗಿ ಆಸಕ್ತಿಯಿರುತ್ತದೆ. ಪುರುಷನೂ ಕೂಡ ತನ್ನ ಬದಿಯಿಂದ ಸ್ತ್ರೀಗೆ ಗುಲಾಮನಾಗಿರುತ್ತಾನೆ, ಏಕೆಂದರೆ ಅವನಲ್ಲಿ ವಶಪಡಿಸಿಕೊಳ್ಳುವ ಆಸಕ್ತಿಯಿರುತ್ತದೆ, ಸಾಮರ್ಥ್ಯಕ್ಕಾಗಿ, ಪ್ರಾಬಲ್ಯ ಮೆರೆಸುವುದಕ್ಕಾಗಿ ದಾಹವಿರುತ್ತದೆ. ಲೈಂಗಿಕ ಸಂಬಂಧಗಳಿಗಾಗಿ ಆಸೆಯಿರುತ್ತದೆ ಮತ್ತು ವೈವಾಹಿಕ ಜೀವನದ ಚಿಕ್ಕ ಪುಟ್ಟ ಸೌಲಭ್ಯಗಳಲ್ಲಿ ಹಾಗೂ ಅನುಕೂಲತೆಗಳಲ್ಲಿ ಆಸಕ್ತಿಯಿರುತ್ತದೆ.

ಆ ಕಾರಣದಿಂದಾಗಿ, ಯಾವ ನಿಯಮವೂ ಸ್ತ್ರೀಯರನ್ನು ಮುಕ್ತಗೊಳಿಸ–ಲಾರದು; ಅದೇ ರೀತಿಯಲ್ಲಿ ಪುರುಷರೂ ಕೂಡ, ಪ್ರಾಬಲ್ಯ ಮೆರೆಸುವ ಅವರ ಎಲ್ಲ ರೂಢಿಗಳಿದ್ದಾಗ್ಯೂ, ತಮ್ಮನ್ನು ಆಂತರಿಕ ಗುಲಾಮಗಿರಿಯಿಂದ ಮುಕ್ತಗೊಳಿಸಿದಾಗ ಮಾತ್ರ ಅವರು ಗುಲಾಮರಾಗುವುದು ನಿಂತು ಹೋಗುತ್ತದೆ.

ಮತ್ತು ಪರದೆಯ ಹಿಂದಿರುವ ಈ ಹೋರಾಟ, ಬಹಳಷ್ಟು ಸಲ ಅದನ್ನು ಒಪ್ಪಿಕೊಳ್ಳದಿದ್ದರೂ, ಅತ್ಯಂತ ಒಳ್ಳೆಯ ಸಂದರ್ಭಗಳಲ್ಲಿಯೂ ಕೂಡ, ಯಾವಾಗಲೂ ತಪ್ಪಿಸಿಕೊಳ್ಳಲಾಗದಂತಹದು; ಅದರಿಂದ ತಪ್ಪಿಸಿಕೊಳ್ಳಲು ಮಾನವ ಸತ್ತೆಗಳು ತಮ್ಮ ಸಾಮಾನ್ಯ ಪ್ರಜ್ಞೆಯಿಂದ ಮೇಲಕ್ಕೇರಿ ತಮ್ಮನ್ನು ಪರಿಪೂರ್ಣ ಪ್ರಜ್ಞೆಯೊಂದಿಗೆ ಗುರುತಿಸಿಕೊಳ್ಳಬೇಕು ಮತ್ತು ಪರಮೋಚ್ಚ ನೈಜತೆಯೊಂದಿಗೆ ಏಕವಾಗಬೇಕು. ಏಕೆಂದರೆ ಈ ಉಚ್ಚತರ ಪ್ರಜ್ಞೆಯನ್ನು ಸಿದ್ಧಿಸಿಕೊಂಡ ಕೂಡಲೆ ಪುರುಷ ಮತ್ತು ಸ್ತ್ರೀ ಇವರ ನಡುವಿನ ವ್ಯತ್ಯಾಸವೇ ಸ್ವತಃ ಕೇವಲ ಭೌತಿಕ ಭಿನ್ನತೆಗೆ ಕುಗ್ಗುತ್ತದೆ ಎಂದು ಮನುಷ್ಯ ಅರಿವಿಗೆ ತಂದುಕೊಳ್ಳುತ್ತಾನೆ.

**CWM, 12/1036-04** **– ಶ್ರೀಮಾತೆ**

*

## ಬ್ರಹ್ಮಚರ್ಯ ಹಾಗೂ ಮದುವೆ ಮಾಡಿಕೊಂಡ ಜೀವನ

**ಪ್ರಶ್ನೆ:** *ನನ್ನ ಕುಟುಂಬ ಜೀವನ ಯಾವ ರೀತಿಯದು ಆಗಿರಬೇಕೆಂಬುದನ್ನು ನಾನು ತಿಳಿದುಕೊಳ್ಳಲು ಬಯಸುತ್ತೇನೆ, ನಾನು ಬ್ರಹ್ಮಚರ್ಯವನ್ನು ಪಾಲಿಸಬೇಕಾಗುವುದೋ?*

**ಶ್ರೀ ಅ:** ಈ ಯೋಗದಲ್ಲಿ ನಾವು ನಿಯಮಗಳನ್ನು ಮಾಡುವುದಿಲ್ಲ ಸಹಜವಾಗಿ ನೇರವಾಗಿ ಅತಿಮಾನಸ ಯೋಗವನ್ನು ಅನುಸರಿಸಿದರೆ ಬ್ರಹ್ಮಚರ್ಯವನ್ನು ಪಾಲಿಸಲೇಬೇಕು. ತಯಾರಿಯ ರೂಪದಲ್ಲಿರುವ ಯೋಗದಲ್ಲಿಯೂ ಕೂಡ ನೀನು ಬ್ರಹ್ಮಚರ್ಯವನ್ನು ಪಾಲಿಸುವುದು ಹೆಚ್ಚು ಒಳ್ಳೆಯದು. ಮನುಕುಲದ ಮಟ್ಟದಿಂದ ನೀನು ಉಚ್ಚತರವಾದ ಏನೋ ಒಂದರತ್ತ ಬೆಳೆಯಬೇಕಾಗಿರುತ್ತದೆ ಮತ್ತು ಹಾಗಾಗಿ ಪಶುಸದೃಶ ಹಂತದಿಂದ ದೂರ ಸರಿದು ಹೋಗಬೇಕಾಗುವುದು. ಅತಿಮಾನಸ ಯೋಗದಲ್ಲಿ ನಿಮ್ನತರ ನಿಲುವಿನಿಂದ ಯಾವುದೇ ನಿಮ್ನತರ ಚಲನೆಗಳಲ್ಲಿ ಲೋಲನಾಗಬಾರದು.

**ಪ್ರಶ್ನೆ :** *(ಸಾಧಕ) : ಹಾಗಾಗಿ ಬ್ರಹ್ಮಚರ್ಯವನ್ನು ಪಾಲಿಸುವುದು ಹೆಚ್ಚು ಒಳ್ಳೆಯದು?*

**ಶ್ರೀ ಅ :** ಹೌದು ನೀನದನ್ನು ಪಾಲಿಸಬಲ್ಲೆಯಾದರೆ ಅದು ಒಳ್ಳೆಯದು, ಆದಾಗ್ಯೂ ಅದನ್ನು ಕುರಿತು ಕಟ್ಟುನಿಟ್ಟಾದ ನಿಯಮಗಳನ್ನು ಮಾಡಲಾಗದು. ಪ್ರಾಣಿಕ ಸ್ವಭಾವದಲ್ಲಿ ಮೂರು ವಿಷಯಗಳಿವೆ, ಅವು ಯೋಗದಲ್ಲಿ ಭವ್ಯ ಅಡೆತಡೆಗಳನ್ನುಂಟು ಮಾಡುತ್ತವೆ – ಅಲ್ಲಿ ಇನ್ನೂ ಇತರ ವಿಷಯಗಳಿವೆ, ಆದರೆ ಅವು ಕಡಿಮೆ ಮಹತ್ವದವಾಗಿರುತ್ತವೆ. 1. ಭೋಗಾಪೇಕ್ಷೆ, 2. ಗರ್ವ ಹಾಗೂ ಜಂಬ – ನಾನು ಶ್ರೇಷ್ಠ ಸಾಧಕ ಇತ್ಯಾದಿ, 3. ಯಶಸ್ಸಿಗಾಗಿ ಮಹತ್ವಾಕಾಂಕ್ಷೆ ಇಲ್ಲವೆ ಹಣಕ್ಕಾಗಿ ಅತ್ಯಾಶೆ.

(ಶ್ರೀ ಅರವಿಂದರೊಡನೆ ಸಾಯಂಕಾಲದ ಮಾತುಕತೆಗಳು, ಎ.ಬಿ ಪುರಾಣಿ, ಪು. 49)

*

25–11–1924

(D ಎಂಬುವವನು ಭವಿಷ್ಯತ್ತಿನಲ್ಲಿ ವಿಶೇಷವಾಗಿ ಯೋಗವನ್ನು ಆಚರಿಸಬೇಕೆಂದು–ಕೊಂಡಿದ್ದ.. ಅದಕ್ಕೆ ಸಂಬಂಧಿಸಿದಂತೆ ಮದುವೆ ಕುರಿತು ಶ್ರೀ ಅರವಿಂದರ ದೃಷ್ಟಿಕೋನವನ್ನು ತಿಳಿಸಲು ಅವರಿಗೆ ವಿನಂತಿ ಮಾಡಿಕೊಂಡಿದ್ದ, ಅತ್ಯುಚ್ಚ ಆಧ್ಯಾತ್ಮಿಕ

ಜೀವನವನ್ನು ಕೈಗೆತ್ತಿಕೊಳ್ಳಲು ಬಯಸುವವನು ಮದುವೆ ಕುರಿತು ಯಾವ ಮನೋಭಾವ ಹೊಂದಿರಬೇಕು ಎಂಬುದನ್ನು ತಿಳಿದುಕೊಳ್ಳಲು ಅವನು ಬಯಸಿದ್ದ. D ತನ್ನಲ್ಲಿ ಲೈಂಗಿಕ ಆಕರ್ಷಣೆ ಇದೆ, ಆದರೆ ಅದನ್ನು ಅದುಮಿ ಹಿಡಿಯುವುದರಲ್ಲಿ ಆಶ್ರಯ ಪಡೆಯುವುದು ತನಗಿಷ್ಟವಿಲ್ಲ ಎಂದು ಒಪ್ಪಿಕೊಂಡಿದ್ದ.)

**ಶ್ರೀ ಅ:** ಅದು ಉತ್ತರ ನೀಡುವುದಕ್ಕೆ ಬಹಳ ಸೂಕ್ಷ್ಮವಾದ ವಿಷಯ. ಬಹುಶಃ ಕೆಳಗೆ ಹೇಳಿರುವ ವಿಷಯಗಳನ್ನು ಅವನಿಗೆ ಕೊಡಬಹುದು.

1. ಸಾಮಾನ್ಯವಾಗಿ ಲೈಂಗಿಕ ಆಕರ್ಷಣೆ ಎಂದು ತಿಳಿದು ಬಂದಿರುವುದು ಮುಖ್ಯವಾಗಿ ಪ್ರಾಣಿಕದ ಮೇಲೆ ಮತ್ತು ಪುರುಷ ಹಾಗೂ ಸ್ತ್ರೀ ಇವರ ಭೌತಿಕ ಸ್ತರಗಳ ಮೇಲೆ ಒಂದು ಎಳೆತ. ಈ ಆಕರ್ಷಣೆ, ಸಾಮಾನ್ಯವಾಗಿ, ಉದ್ವೇಗ ಹಾಗೂ ಮಾನಸಿಕ ಸಂವೇದನೆ ಇವುಗಳೊಂದಿಗೆ ಮಿಶ್ರಣಕ್ಕೊಳಗಾಗಿರುತ್ತದೆ, ಅದನ್ನು ಪ್ರೇಮ ಇಲ್ಲವೆ ಚೈತ್ಯಾತ್ಮಿಕ ಸಂಬಂಧ ಎಂದು ತಪ್ಪಾಗಿ ತಿಳಿಯಲಾಗಿರುತ್ತದೆ.

ಜೀವನವನ್ನು ಒಟ್ಟಿನಲ್ಲಿ ಬಿಟ್ಟುಕೊಡಲು ಬಯಸುವವರಿಗೆ – ಎಂದರೆ ಸನ್ಯಾಸಿಗಳಂತಹರಿಗೆ – ಸಾಮಾನ್ಯ ಅರ್ಥದಲ್ಲಿ ಮದುವೆಯ ಪ್ರಶ್ನೆ ಇರುವುದಿಲ್ಲ. ಏಕೆಂದರೆ ಮದುವೆ ಮನುಷ್ಯನನ್ನು ಪ್ರಾಪಂಚಿಕ ಜೀವನಕ್ಕೆ ಬಲವತ್ತರವಾಗಿ ಕಟ್ಟಿ ಹಾಕುತ್ತದೆ. ಸ್ವಭಾವತಃ ಸ್ತ್ರೀಯಲ್ಲಿ ಪ್ರಾಪಂಚಿಕ ಜೀವನಕ್ಕೆ ಅಂಟಿಕೊಳ್ಳುವ ಅತ್ಯಂತ ಪ್ರಬಲ ಪ್ರವೃತ್ತಿ ಇರುತ್ತದೆ. ಅವಳು ಪುರುಷನನ್ನು ಕೆಳಗೆಳೆದು ಪ್ರಾಪಂಚಿಕ ಜೀವನಕ್ಕೆ ಕಟ್ಟಿ ಹಾಕುತ್ತಾಳೆ. ಮನುಕುಲ ಹಾಗೂ ಜೀವನ ಇವುಗಳ ಮುಂದುವರಿಕೆಗಾಗಿ ಸ್ವಭಾವದಲ್ಲಿ ವಿಶೇಷವಾದ ಉದ್ದೇಶವಿರುತ್ತದೆ.

2. ಎರಡನೆಯದಾಗಿ ಪುರುಷ ಹಾಗೂ ಸ್ತ್ರೀ ಇವರ ಚೈತ್ಯಗಳು ಭೇಟಿ ಮಾಡುವುದಿರುತ್ತದೆ – ಆತ್ಮದೊಂದಿಗೆ ಆತ್ಮ ಏಕವಾಗುವಿಕೆ. ಸಹಜವಾಗಿ ಇದನ್ನು ದೊರಕಿಸುವುದು ಕಠಿಣವಾದದ್ದು.

ಮೊದಲನೆಯ ವಿಷಯ ಪ್ರಾಣಿಕ ಹಾಗೂ ಭೌತಿಕ ಸ್ತರಗಳಲ್ಲಿರುವ ಸಾಮಾನ್ಯ ಜೀವನಕ್ಕೆ ಸಂಬಂಧಿಸಿದುದಾಗಿದೆ.

ಉಚ್ಚತರ ಜೀವನದಲ್ಲಿ ಎರಡು ಮಾದರಿಗಳಿವೆ, ಪುರುಷ ಹಾಗೂ ಸ್ತ್ರೀ ಭೇಟಿ ಮಾಡುವ ಎರಡು ಮುನ್ನಡೆಯ ಹಂತಗಳಿವೆ, ಚೈತ್ಯಾತ್ಮಿಕ ಏಕತೆ ಒಂದು, ಇನ್ನೊಂದು ಆಧ್ಯಾತ್ಮಿಕತೆಯದಾಗಿರುತ್ತದೆ.

ಕವಿ, ಕಲಾಕಾರರಂತಹ ಉಚ್ಚ ಆದರ್ಶವನ್ನಿಟ್ಟುಕೊಂಡಿರುವ ಪುರುಷನಲ್ಲಿ ಅಭಿವೃದ್ಧಿ ಹೊಂದಿದ ಚೈತ್ಯವಿರುತ್ತದೆ. ಸಾಮಾನ್ಯ ಮನುಷ್ಯನಲ್ಲಿ ಅದು ಅಭಿವೃದ್ಧಿ ಹೊಂದಿರುವುದಿಲ್ಲ. ಚೈತ್ಯಾತ್ಮಿಕವಾಗಿ ಅಭಿವೃದ್ಧಿ ಹೊಂದಿದ ಮನುಷ್ಯನಿಗೆ ಸರಿಯಾದ ಮಾದರಿಯ ಸ್ತ್ರೀ ದೊರಕುವುದು ಕಠಿಣವಾದದ್ದು. ಆದರೆ ಇಂತಹ ಏಕತೆ ಸಂಭವಿಸುವುದಾದರೆ, ಅವರಿಬ್ಬರಿಗೂ ಶ್ರೇಷ್ಠ ರೀತಿಯಲ್ಲಿ ಸಹಾಯಕವಾಗುತ್ತದೆ.

**ಪ್ರಶ್ನೆ:** *ಆಧ್ಯಾತ್ಮಿಕ ಜೀವನಕ್ಕಾಗಿ ಅಭೀಪ್ಸೆ ಪಡುತ್ತಿರುವ ಮನುಷ್ಯ ಮದುವೆ ಮಾಡಿಕೊಂಡರೆ ಅವನಿಗೆ ಏನು ಸಂಭವಿಸುವುದು?*

**ಶ್ರೀ ಅ:** ಅಂತಹ ಮನುಷ್ಯ ಮದುವೆ ಮಾಡಿಕೊಂಡರೆ ಮೂರು ವಿಷಯಗಳು ಸಂಭವಿಸಬಹುದು :

1. ಆದು ಸಾಧಾರಣ ಮಟ್ಟದ ಮದುವೆಯಾದರೆ ಪುರುಷ ನಿಮ್ನತರ ಪ್ರಜ್ಞೆಯ ಹಂತದತ್ತ ಎಳೆತಕ್ಕೆ ಒಳಗಾಗಬಹುದು, ಅಲ್ಲದೆ ಪ್ರಾಪಂಚಿಕ ಜೀವನದ ಕಾಳಜಿಗಳು, ತಳಮಳ ಹಾಗೂ ಜವಾಬ್ದಾರಿ ಇವೆಲ್ಲವುಗಳ ಭಾರ ಅವನ ಮೇಲಿರುತ್ತದೆ. ಆ ಸಂದರ್ಭದಲ್ಲಿ ಅವನು ಉಚ್ಚತರ ಜೀವನಕ್ಕಾಗಿರುವ ಅಭೀಪ್ಸೆಯನ್ನು ಕಳೆದುಕೊಳ್ಳಬಹುದು ಮತ್ತು ಅವನ ಮೇಲಾಗುವ ಸ್ತ್ರೀಯ ಪ್ರಭಾವದಿಂದಾಗಿ ಸಂಪೂರ್ಣವಾಗಿ ಬದಲಾಗಬಹುದು.

2. ಮದುವೆಯ ಕಾರಣದಿಂದಾಗಿ ಅವನು ಒಟ್ಟಿನಲ್ಲಿ ಆಧ್ಯಾತ್ಮಿಕವಾಗಿ ಹಾಳಾಗಬಹುದು.

3. ಇಲ್ಲವೆ ಅವನು ಸರಿಯಾದ ಮಾದರಿಯ ಸ್ತ್ರೀಯನ್ನು ದೊರಕಿಸಬಹುದು, ಅದು ಅವನಿಗೆ ದೊಡ್ಡ ಸಹಾಯವಾಗುತ್ತದೆ.

ನೀನು Dಗೆ ಬರೆದು ತಿಳಿಸಬಹುದು. ಸದ್ಯ ಸಮಾಜದಲ್ಲಿ ಹಾಗೂ ಸಂಸ್ಥೆಯ ರೂಪದಲ್ಲಿ ಅಸ್ತಿತ್ವದಲ್ಲಿರುವ ಮದುವೆಯಲ್ಲಿ ಶ್ರೀ ಅರವಿಂದರಿಗೆ ನಂಬಿಕೆಯಿಲ್ಲ. ಅದಕ್ಕೆ ಸಂಬಂಧಿಸಿದ ಮನುಷ್ಯ ಮದುವೆ ಮಾಡಿಕೊಳ್ಳಬೇಕೋ ಇಲ್ಲವೆ ಬೇಡವೋ ಎಂಬುದನ್ನು ಇಡಿಯಾಗಿ ಅವನಿಗೆ ಬಿಟ್ಟು ಕೊಡಬೇಕು.

(ಶ್ರೀ ಅರವಿಂದರೊಡನೆ ಸಾಯಂಕಾಲದ ಮಾತುಕತೆಗಳು: ಎ.ಬಿ. ಪುರಾಣಿ, ಪು 148–50)

*

## ಲೈಂಗಿಕತೆ, ನೈತಿಕತೆ ಮತ್ತು ಯೋಗ

ಶ್ರೀ ಅರವಿಂದರು: ನೈತಿಕವಾದಿಗಳು ನಂಬುತ್ತಿರುವಂತೆ ಲೈಂಗಿಕ ಕ್ರಿಯೆ, ಅದೇ ಸ್ವತಃ ಕೆಟ್ಟದಾದುದಲ್ಲ. ಅದು ಸ್ವಭಾವದ ಒಂದು ಚಲನೆಯಾಗಿದ್ದು, ಅದಕ್ಕೆ ಅದರದೇ ಉದ್ದೇಶವಿದೆ ಮತ್ತು ಅದು ಒಳ್ಳೆಯದೂ ಅಲ್ಲ, ಕೆಟ್ಟದಾದುದೂ ಅಲ್ಲ. ಆದರೆ ಯೌಗಿಕ ದೃಷ್ಟಿಕೋನದಿಂದ ಲೈಂಗಿಕ ಶಕ್ತಿ ಜಗತ್ತಿನಲ್ಲಿ ಅತ್ಯಂತ ಭವ್ಯ ಶಕ್ತಿ ಮತ್ತು ಅದನ್ನು ಸರಿಯಾಗಿ ಉಪಯೋಗಿಸಿದರೆ ಅದು ಸತ್ತೆಯನ್ನು ಪುನಃ ಸೃಷ್ಟಿಸಲು ಹಾಗೂ ಪುನರುಜ್ಜೀವನಗೊಳಿಸಲು ಸಹಾಯ ಮಾಡುತ್ತದೆ. ಆದರೆ ಅದರಲ್ಲಿ ಸರ್ವ ಸಾಧಾರಣ ರೀತಿಯಿಂದ ಲೋಲರಾದರೆ ಅದು ಎರಡು ಕಾರಣಗಳಿಂದಾಗಿ ದೊಡ್ಡ ಅಡೆತಡೆಯಾಗುತ್ತದೆ. ಮೊದಲನೆಯದಾಗಿ ಲೈಂಗಿಕ ಕ್ರಿಯೆ ದೊಡ್ಡ ಪ್ರಮಾಣದಲ್ಲಿ ಪ್ರಾಣಿಕ ಸತ್ತೆಯ ಹಾನಿಯನ್ನು ಒಳಗೊಂಡಿರುತ್ತದೆ ಮತ್ತು ಅದು ಮೃತ್ಯುವಿನತ್ತ ಕರೆದೊಯ್ಯುತ್ತದೆ, ಆದಾಗ್ಯೂ ಹೊಸ ಜೀವನದ ಸೃಷ್ಟಿಯ ಮೂಲಕ ನಷ್ಟ ಭರ್ತಿ ಮಾಡಿಕೊಡುತ್ತದೆ. ಅದು ಮೃತ್ಯುವಿನತ್ತ ಒಂದು ಚಲನೆ ಎಂಬುದನ್ನು ಆ ಕ್ರಿಯೆಯ ನಂತರ ಉಂಟಾಗುವ ದಣಿವು ಸಿದ್ಧಮಾಡಿತೋರಿಸುತ್ತದೆ, ಬಹಳಷ್ಟು ಜನರಿಗೆ ಅದು ಜುಗುಪ್ಸೆಯನ್ನುಂಟು ಮಾಡುತ್ತದೆ.

ಎರಡನೆಯ ಕಾರಣ ಹೀಗಿದೆ: ಸಾಮಾನ್ಯ ಲೈಂಗಿಕ ಕ್ರಿಯೆಯ ಜೊತೆಗಿರುವ ಉದ್ರೇಕ ಮನುಷ್ಯನ ಚೈತ್ಯಾತ್ಮಿಕ ಸಾಧ್ಯತೆಗಳನ್ನು ಹಾಳು ಮಾಡುತ್ತದೆ. ಅವನು ಉಚ್ಚತರ ಪ್ರಜ್ಞೆಗಳ ಕೇಂದ್ರಗಳಿಂದ ಪ್ರತ್ಯೇಕಗೊಳ್ಳುತ್ತಾನೆ, ಸಂಬಂಧ ಕಳೆದುಕೊಳ್ಳುತ್ತಾನೆ, ಕೆಳಸ್ತರಗಳಿಗಿಳಿದು ಹೋಗುತ್ತಾನೆ. ಜನರು ದೈವೀ ಶಕ್ತಿಯ ಮನೋಭಾವ, ತಮ್ಮ ಮೂಲಕ ಭೋಗವನ್ನು ಅನುಭವಿಸುತ್ತದೆ ಎಂದು ಹೇಳುತ್ತಾರೆ, ಆದರೆ ಅದು ಕೇವಲ ಮಾತನಾಡುವ ರೀತಿ. ಜನರು ನಿಮ್ನತರ ಚಲನೆಗಳಲ್ಲಿ ಲೋಲರಾಗುತ್ತಾರೆ ಹಾಗೂ ವಿರೋಧಿ ಶಕ್ತಿಗಳಿಗೆ ಶರಣಾಗತರಾಗುತ್ತಾರೆ ಮತ್ತು ಅದೇ ಸಮಯದಲ್ಲಿ ಯೋಗಿಗಳೆಂದು ಮುಂದೆ ಸಾಗುತ್ತಾರೆ. ವಿರೋಧಿ ಶಕ್ತಿಗಳಿಗೆ ಶರಣಾಗುವುದಕ್ಕೆ ವೇದಾಂತಿಕ ಮನೋಭಾವವನ್ನು ಒಂದು ನೆಪವನ್ನಾಗಿ ಮಾಡುತ್ತಾರೆ: "ಇವೆಲ್ಲವೂ ಮಾಯೆ, ಭ್ರಮೆ, ಸದ್ಗುಣ ಎಂಬುದಿಲ್ಲ, ದುರ್ಗುಣ ಎಂಬುದಿಲ್ಲ, ಪಾಪವೆಂಬುದಿಲ್ಲ, ಒಳ್ಳೆಯದೆಂಬುದಿಲ್ಲ, ಅನಿಷ್ಟವೆಂಬುದಿಲ್ಲ" ಎಂದು ಹೇಳುತ್ತಾರೆ, ನಿಮ್ನತರ ಪ್ರಾಣಿಕ ಶಕ್ತಿಗಳಿಗೆ ತಮ್ಮನ್ನು ಬಿಟ್ಟುಕೊಡುತ್ತಾರೆ.

**ಪ್ರಶ್ನೆ:** *ಆದರೆ ಸ್ವಭಾವದ ನಿಮ್ನತರ ಚಲನೆಗಳೇ ಸ್ವತಃ ವಿರೋಧಿ ಶಕ್ತಿಗಳಾಗಿರುವುದಿಲ್ಲವೆ?*

**ಶ್ರೀ ಅ:** ಇಲ್ಲ, ಆದರೆ ಅವು ವಿರೋಧಿ ಶಕ್ತಿಗಳಿಗೆ ತೆರೆದಿರಿಸಿಕೊಂಡಿರುತ್ತವೆ ಮತ್ತು ವಿರೋಧಿ ಶಕ್ತಿಗಳು ತಮ್ಮದೇ ಉದ್ದೇಶಕ್ಕಾಗಿ ಈ ನಿಮ್ನತರ ಚಲನೆಗಳನ್ನು ಉಪಯೋಗಿಸುತ್ತವೆ.

**ಪ್ರಶ್ನೆ:** *ಕೀಳ್ದೆಸೆಯ ಪರಿಣಾಮಗಳನ್ನುಂಟು ಮಾಡುವ ಲೈಂಗಿಕ ಕ್ರಿಯೆಯನ್ನು ಕುರಿತು ಮದುವೆ ಹಾಗೂ ಕಾಯ್ದೆಯ ಅನುಮತಿ ಯಾವುದೇ ವ್ಯತ್ಯಾಸವನ್ನು ಉಂಟು ಮಾಡುವುದೇ?*

**ಶ್ರೀ ಅ:** ಅಂತಹ ವ್ಯತ್ಯಾಸವೇನನ್ನೂ ಇಲ್ಲ. ಈ ನೈತಿಕ ಕಟ್ಟಳೆಗಳು ಸಮಾಜದ ವ್ಯವಸ್ಥೆಗಾಗಿ ಇರುತ್ತವೆ, ಜನ್ಮ ತಾಳಿದ ಮಕ್ಕಳ ಯೋಗಕ್ಷೇಮಕ್ಕಾಗಿ ಇರುತ್ತವೆ. ಆದರೆ ಯೌಗಿಕ ಜೀವನಕ್ಕೆ ಸಂಬಂಧಿಸಿದ ಹಾಗೆ, ಲೈಂಗಿಕ ಕ್ರಿಯೆ ಮನುಷ್ಯ ತನ್ನ ಹೆಂಡತಿಯೊಡನೆ ಕೈಕೊಂಡಿರಲಿ ಇಲ್ಲವೆ ಬೇರೆ ಸ್ತ್ರೀಯೊಡನೆ ಕೈಕೊಂಡಿರಲಿ ಅದು ಅಷ್ಟೇ ಹಾನಿಕಾರಕವಾದದ್ದು. ಮಾನವ ಮಟ್ಟಕ್ಕಿಂತ ಮೇಲೇರಿ ಹೋದ ಜನರು, ತಮ್ಮಲ್ಲಿ ಒಂದು ಬಗೆಯ ಆಧ್ಯಾತ್ಮಿಕ ಶಕ್ತಿಯನ್ನು ಹಾಗೂ ಪ್ರಾಣಿಕ ಶಕ್ತಿಯನ್ನು ಇರಿಸಿಕೊಂಡವರು ಬಹುಶಃ ಆಧ್ಯಾತ್ಮಿಕ ಉದ್ದೇಶಕ್ಕಾಗಿ ಲೈಂಗಿಕ ಕ್ರಿಯೆಯ ಸರಿಯಾದ ಉಪಯೋಗ ಮಾಡಬಹುದು. ನಿಮ್ನತರ ಹಂತದಲ್ಲಿರುವ ಸಾಧಕರು ಈ ವಿಷಯಗಳನ್ನು ಕೈಗೆತ್ತಿಕೊಂಡರೆ ನಿಶ್ಚಿತವಾಗಿ ಪತನಗೊಳ್ಳುವರು.

(ಶ್ರೀ ಅರವಿಂದರೊಡನೆ ಸಾಯಂಕಾಲದ ಮಾತುಕತೆಗಳು: ಎ.ಬಿ. ಪುರಾಣಿ, ಪು.118)

ಸ್ತ್ರೀಯರೊಡನೆ ನಿಮ್ಮ ಸಂಬಂಧ ಯೋಗ್ಯವಾಗಬೇಕಾದರೆ ನೀವು ಅವರನ್ನು ಸ್ತ್ರೀಯರು ಎಂಬುದನ್ನು ಮರೆತಿರಬೇಕು. ಮತ್ತು ಮಾನವ ಸತ್ತೆಗಳೆಂದು ಭೇಟಿ ಮಾಡಬೇಕು – ನಿಮ್ಮ ಭಾವನೆಯಲ್ಲಿ ಹಾಗೂ ಕ್ರಿಯೆಯಲ್ಲಿ ಅವರೊಡನೆ ಲೈಂಗಿಕ ಕ್ರಿಯೆಯನ್ನು ಮರೆತಿರಬೇಕು.

*

ನಿಮ್ನತರ ಪ್ರಾಣಿಕದಲ್ಲಿ ಬಲ ಹಾಗೂ ಪರಿಶುದ್ಧತೆ, ಹೃದಯದಲ್ಲಿ ವೈಶಾಲ್ಯ ಇವು ಇತರರನ್ನು, ವಿಶೇಷವಾಗಿ, ಸ್ತ್ರೀಯರನ್ನು ಭೇಟಿ ಮಾಡಲು ಅತ್ಯಂತ ಒಳ್ಳೆಯ

ಸ್ಥಿತಿಯನ್ನುಂಟು ಮಾಡುತ್ತವೆ, ಆ ಸ್ಥಿತಿ ಯಾವಾಗಲೂ ಇರುತ್ತಿದ್ದರೆ ಲೈಂಗಿಕತೆ ಹಣಿಕಿ ಹಾಕುವುದು ಅಸಂಭವ.

**CWSA, 31/350** **– ಶ್ರೀ ಅರವಿಂದರು**

*

**ಪ್ರಶ್ನೆ:** *ಹೊಸ ಜೀವನದಲ್ಲಿ ಪುರುಷ ಮತ್ತು ಸ್ತ್ರೀ ಯಾವ ಪಾತ್ರ ವಹಿಸುತ್ತಾರೆ. ಅವರಲ್ಲಿ ಯಾವ ಸಂಬಂಧವಿರುತ್ತದೆ ?*

**ಶ್ರೀಮಾತೆ:** ಅವರಿಬ್ಬರ ನಡುವೆ ವ್ಯತ್ಯಾಸ ಮಾಡುವುದೇಕೆ? ಅವರಿಬ್ಬರೂ ಮಾನವ ಸತ್ತೆಗಳು, ದೈವೀ ಕಾರ್ಯಕ್ಕಾಗಿ ಯೋಗ್ಯ ಉಪಕರಣಗಳಾಗಲು ಪ್ರಯತ್ನ ಮಾಡುತ್ತಾರೆ, ಅದು ಲೈಂಗಿಕತೆ, ಜಾತಿ, ಪಂಥ ಮತ್ತು ರಾಷ್ಟ್ರೀಯತೆ ಇವುಗಳಾಚೆಗೆ ಇರುತ್ತದೆ, ಅವರೆಲ್ಲರೂ ಅದೇ ಅನಂತ ದೈವೀ ಮಾತೆಯ ಮಕ್ಕಳು, ಏಕೈಕ, ಶಾಶ್ವತ ದೈವತ್ವದೆಡೆಗೆ ಅಭೀಪ್ಸೆ ಹೊಂದಿದವರು ಆಗಿರುತ್ತಾರೆ.

**CWM, 8/242** **– ಶ್ರೀಮಾತೆ**

*

## ಬ್ರಹ್ಮಚರ್ಯದ ತತ್ವ

### ಪುರಾತನ ಕಾಲದ ಆರ್ಯರ ಪದ್ಧತಿಗೆ ಆಧಾರ

ಪ್ರಾಚೀನ ಕಾಲದ ಆರ್ಯರು ಮನುಷ್ಯ ವಿಶ್ವದಿಂದ ಪ್ರತ್ಯೇಕನಾಗಿಲ್ಲ, ಆದರೆ ಸಮುದ್ರದಿಂದ ಉಂಟಾಗುವ ತೆರೆಯ ಹಾಗೆ ಕೇವಲ ಸಾಮರಸ್ಯದಿಂದಿರುವ ಭಾಗ ಎಂದು ತಿಳಿದುಕೊಂಡಿದ್ದರು. ಅನಂತ ಚೈತನ್ಯ, ಪ್ರಕೃತಿ, ಮಾಯಾ ಇಲ್ಲವೆ ದೈವೀ ಶಕ್ತಿ ವಿಶ್ವವನ್ನು ವ್ಯಾಪಿಸುತ್ತದೆ, ತನ್ನನ್ನು ಪ್ರತಿಯೊಂದು ನಾಮ ರೂಪಗಳಲ್ಲಿ ಸುರಿಯುತ್ತದೆ, ಮಣ್ಣು ಹೆಂಟೆ, ಸಸ್ಯ, ಹುಳ, ಪಶು, ಮನುಷ್ಯ ಇವರೆಲ್ಲರು ತಮ್ಮ ಗೋಚರ ಅಸ್ತಿತ್ವದಲ್ಲಿ ಈ ಚೈತನ್ಯದ ಕೇವಲ ಹೆಚ್ಚು ಕಡಿಮೆ ಪರಿಣಾಮಕಾರಿ ಆಧಾರಗಳಾಗಿರುತ್ತಾರೆ. ನಮ್ಮಲ್ಲಿ ಪ್ರತಿಯೊಬ್ಬರೂ ಡ್ಯಾನಮೋ **(dynamo)** ಆಗಿರುತ್ತೇವೆ, ಅದರಲ್ಲಿ ಆ ಚೈತನ್ಯದ ತೆರೆಗಳನ್ನು ಉತ್ಪಾದಿಸಲಾಗುತ್ತದೆ, ಶೇಖರಿಸಲಾಗುತ್ತದೆ ಮತ್ತು ನಿರಂತರವಾಗಿ ರಕ್ಷಿಸಿಕೊಂಡು ಬರಲಾಗುತ್ತದೆ,

ಉಪಯೋಗಿಸಲಾಗುತ್ತದೆ ಮತ್ತು ಮತ್ತೆ ತುಂಬಲಾಗುತ್ತದೆ. ತಾರೆಯಲ್ಲಿ ಹಾಗೂ ಗ್ರಹದಲ್ಲಿ ಇರುವ ಅದೇ ಶಕ್ತಿ ನಮ್ಮಲ್ಲಿ ಚಲಿಸುತ್ತದೆ ಮತ್ತು ನಮ್ಮ ಎಲ್ಲ ಯೋಚನೆಗಳು, ಕ್ರಿಯೆಗಳು, ಅದರ ಲೀಲೆ ಹಾಗೂ ಅದರ ಕಾರ್ಯಗತಿಗಳ ಸಂಕೀರ್ಣತೆ ಇವುಗಳಿಂದ ಜನಿಸಿ ಬಂದಿರುತ್ತವೆ. ಬೇರೆ ವಿಧಾನಗಳಿವೆ, ಅವುಗಳ ಮೂಲಕ ಮನುಷ್ಯ ತಾನು ಹಾಗೂ ವಿಶ್ವಂಭರ ಚೈತನ್ಯ ಇವುಗಳ ಸಂಪರ್ಕಕ್ಕೆ ಉಂಟಾಗುವ ಅಡೆತಡೆಗಳನ್ನು ತೆಗೆದು ಹಾಕಬಲ್ಲನು, ಹೆಚ್ಚಿನ ಶೇಖರಣೆ ಮಾಡಬಲ್ಲನು, ತನ್ನ ಆತ್ಮ, ಮಿದುಳು ಹಾಗೂ ದೇಹದಲ್ಲಿ ಸುರಿಯಬಲ್ಲನು. ಮುಂದುವರಿದುಕೊಂಡು ಹೋಗುವ ಆಧಾರದ ಈ ಸುಧಾರಣೆ, ಅದರ ಮೊತ್ತದಲ್ಲಿ ಹೆಚ್ಚಾಗುವಿಕೆ, ತಿಳಿಸುವ ಚೈತನ್ಯದ ಕ್ರಿಯೆಯಲ್ಲಿ ಹೆಚ್ಚಳವಾಗುವಿಕೆ ಇದೆಲ್ಲ ಉತ್ಕ್ರಾಂತಿಯ ಇಡೀ ಗುರಿಯಾಗಿದೆ. ಈ ಚೈತನ್ಯ ಅದರ ಬಗೆಯಲ್ಲಿ ಅತ್ಯುಚ್ಚವಾದಾಗ, ಮಾನವ ಆಧಾರದ ಕ್ಷಮತೆಗನುಗುಣವಾಗಿ ಮೊತ್ತದಲ್ಲಿ ಅತ್ಯಂತ ಪೂರ್ತಿಗೊಂಡಾಗ ಮತ್ತು ಆಧಾರವನ್ನೇ ಸ್ವತಃ ಚೈತನ್ಯದ ಒಳಹರಿಯುವಿಕೆಗೆ ಹಾಗೂ ಲೀಲೆಗೆ ತರಬೇತಿಗೊಳಪಡಿಸಿದಾಗ ಮನುಷ್ಯ ಸಿದ್ಧ ಪುರುಷನಾಗುತ್ತಾನೆ, ನೆರವೇರಿಕೆ ಕಂಡುಕೊಂಡವನು, ಪರಿಪೂರ್ಣನಾದವನು ಆಗುತ್ತಾನೆ, ಅವನ ಉತ್ಕ್ರಾಂತಿ ಪೂರ್ತಿಗೊಂಡಿರುತ್ತದೆ, ವ್ಯಕ್ತಿಯಲ್ಲಿ ಕಟ್ಟಕಡೆಯ ಅಭಿವೃದ್ಧಿಯನ್ನು ಪಡೆದಿರುತ್ತಾನೆ, ಈ ಅಭಿವೃದ್ಧಿಗಾಗಿ ಯುಗ ಯುಗಗಳಾದ್ಯಂತ ಮನುಕುಲದ ಮೊತ್ತ ಶ್ರಮಪಡುತ್ತಲಿದೆ.

ಈ ಸಿದ್ಧಾಂತ ಸರಿಯಾಗಿದ್ದರೆ, ಬುದ್ಧಿಮತ್ತೆಯ ಕಾರ್ಯಾಚರಣೆಯ ಆಧಾರದಲ್ಲಿದ್ದ ಚೈತನ್ಯ ನಮ್ಮಲ್ಲಿಯೇ ಇರಬೇಕು, ಅದು ಭವ್ಯ ವಿಸ್ತರಣೆಗೆ, ವ್ಯಾವಹಾರಿಕವಾಗಿ ಸೀಮಿತಗೊಳ್ಳದಂತೆ ಶ್ರೀಮಂತ ಉಪಯೋಗಕ್ಕಾಗಿ ಕ್ಷಮತೆ–ಯುಳ್ಳದ್ದಾಗಿರಬೇಕು. ಮತ್ತು ಇದು ಕೂಡ ಗಟ್ಟಿಮುಟ್ಟಾದ ತತ್ವವಾಗಿರಬೇಕು, ಅದರಿಂದಾಗಿ ನಾವು ಚೈತನ್ಯವನ್ನು ಹೆಚ್ಚು ವೃದ್ಧಿಪಡಿಸಿದಂತೆ, ಶ್ರೀಮಂತಗೊಳಿಸಿದಂತೆ, ಕಾರ್ಯರೂಪಕ್ಕೆ ಬರುವುದರ ವ್ಯಾಪ್ತಿ, ಸಾಮರ್ಥ್ಯ ಮತ್ತು ನಮ್ಮ ಮನಸ್ಸಿನ ಚಟುವಟಿಕೆಗಳ ಕಾರ್ಯ ವಿಧಾನಗಳು ಭವ್ಯವಾಗುತ್ತವೆ, ಪರಿಣಾಮವಾಗಿ ನಮ್ಮ ಬೌದ್ಧಿಕತೆಯ ಕ್ರಿಯಾಶೀಲತೆಯಿಂದ ಕೂಡಿದ ದೇಹಶಕ್ತಿ ಹಾಗೂ ನಮ್ಮ ಸಿದ್ಧಿಯ ಶ್ರೇಷ್ಠತೆ ಕೂಡ ಭವ್ಯವಾಗುತ್ತವೆ. ಪ್ರಾಚೀನ ಕಾಲದ ಆರ್ಯರು ಇದನ್ನು ಶಿಕ್ಷಣದ

ಪ್ರಥಮ ಆಧಾರವನ್ನಾಗಿ ಮಾಡಿದ್ದರು. ಬ್ರಹ್ಮಚರ್ಯದ ಪಾಲನೆಯಿಂದ ಅದನ್ನು ಚೈತನ್ಯದ ಹೆಚ್ಚಾಗಿಸಿದ ಶೇಖರಣೆಗೆ ಉಪಯೋಗಿಸಿದರು.

**CWSA, 1/370–71** **– ಶ್ರೀ ಅರವಿಂದರು**

*

**ದ್ವಿವಿಧ ತೊಂದರೆ**

ತೊಂದರೆ ಮನೋವೈಜ್ಞಾನಿಕ ಹಾಗೂ ದೈಹಿಕ ಎಂಬ ದ್ವಿವಿಧ ರೀತಿಯಲ್ಲಿದೆ, ಮೊದಲನೆಯದು ಜೀವನದ ಮೇಲೆ ಪುನರುಜ್ಜೀವನ ಕಂಡುಕೊಂಡಿರದ ಪಶುತ್ವ, ವಿಶೇಷವಾಗಿ ದೇಹದ ಒರಟಾದ ಹುಟ್ಟುಗುಣ, ಪ್ರಚೋದನೆಗಳು, ಆಸೆಗಳು ಇವುಗಳ ಒತ್ತಾಯದ ಮೂಲಕ ಆಗುವಂತಹದು, ಎರಡನೆಯದು ನಮ್ಮ ದೈಹಿಕ ರಚನೆ ಹಾಗೂ ಅಂಗಾಗಗಳ ಉಪಕರಣ ಸ್ವರೂಪ ಇವು ಉಚ್ಚತರ ದೈವೀ ಸ್ವಭಾವದ ಶಕ್ತಿಯ ಮೇಲೆ ತಮ್ಮ ಕಟ್ಟುನಿಟ್ಟುಗಳನ್ನು ಹೇರುವುದಾಗಿದೆ. ಇವೆರಡು ತೊಂದರೆಗಳಲ್ಲಿ ಮೊದಲನೆಯದರೊಡನೆ ವ್ಯವಹರಿಸುವುದು ಮತ್ತು ಜಯಿಸುವುದು ಸುಲಭವಾಗಿದೆ, ಏಕೆಂದರೆ ಇಲ್ಲಿ ಸಂಕಲ್ಪ ಮಧ್ಯೆ ಪ್ರವೇಶಿಸಬಹುದು ಮತ್ತು ದೇಹದ ಮೇಲೆ ಉಚ್ಚತರ ಸ್ವಭಾವದ ಸಾಮರ್ಥ್ಯವನ್ನು ಹೇರಬಹುದು. ಈ ಪ್ರಚೋದನೆಗಳು ಹಾಗೂ ಹುಟ್ಟುಗುಣಗಳಲ್ಲಿ ಕೆಲವು ವಿಶೇಷವಾಗಿ ಆಧ್ಯಾತ್ಮಿಕ ಅಭೀಪ್ಸೆಯಿದ್ದವರಿಗೆ ಹಾನಿಕಾರಕವೆಂದು ಕಂಡುಬಂದಿವೆ ಮತ್ತು ದೇಹವನ್ನು ತಿರಸ್ಕರಿಸುವತ್ತ ವೈರಾಗ್ಯದತ್ತ ಭಾರವಾದ ಎಳೆತಕ್ಕೊಳಗಾಗಿವೆ. ಪುರುಷ ಹಾಗೂ ಸ್ತ್ರೀ ನಡುವಿನ ಭೇದ, ಲೈಂಗಿಕತೆ ಮತ್ತು ಲೈಂಗಿಕತೆಯಿಂದ ಜಿಗಿದು ಬರುವುದೆಲ್ಲ ತನ್ನ ಅಸ್ತಿತ್ವವನ್ನು ಪ್ರಮಾಣ ಪೂರ್ವಕ ತಿಳಿಸಿಕೊಡುತ್ತದೆ, ಅದನ್ನು ಆಧ್ಯಾತ್ಮಿಕ ಜೀವನದಿಂದ ಹೊರಹಾಕಬೇಕು, ತ್ಯಜಿಸಬೇಕು, ಇದು ಕಠಿಣವಾದರೂ ಅಸಾಧ್ಯವಾದದ್ದೇನಲ್ಲ ಮತ್ತು ಆಧ್ಯಾತ್ಮಿಕತೆಯನ್ನು ಅರಸುವವನಿಗೆ ಅದನ್ನು ಪ್ರಧಾನವಾದ ಷರತ್ತನ್ನಾಗಿ ಮಾಡಬೇಕು. ವೈರಾಗ್ಯದ ಎಲ್ಲ ಆಚರಣೆಗಳಲ್ಲಿ ಇದು ಸ್ವಾಭಾವಿಕವಾದದ್ದು, ತಪ್ಪಿಸಿಕೊಳ್ಳಲಾರದಂತಹದು ಮತ್ತು ಈ ಷರತ್ತನ್ನು ಪಾಲಿಸುವುದು, ನೆರವೇರಿಕೆ ಕಂಡುಕೊಳ್ಳಲು ಮೊದಲು ಅಷ್ಟೊಂದು ಸುಲಭವಾಗಿರದಿದ್ದರೂ, ಕೆಲಕಾಲದ ನಂತರ ನಿರ್ವಹಿಸುವಂತಾಗುತ್ತದೆ. ಸ್ವ–ಪ್ರಭುತ್ವವನ್ನು ಸಿದ್ಧಿಸಿಕೊಳ್ಳಲು ಹಾಗೂ ಆಧ್ಯಾತ್ಮಿಕ ಜೀವನ ನಡೆಸಲು ಬಯಸುವವರೆಲ್ಲರಿಗೂ ಲೈಂಗಿಕ ಹುಟ್ಟುಗುಣ ಹಾಗೂ ಪ್ರಚೋದನೆ ಇವುಗಳ

ಮೇಲೆ ಜಯ ಸಾಧಿಸುವುದು ಬಂಧನವಾಗಿರುತ್ತದೆ. ಅದರ ಮೇಲೆ ಇಡಿಯಾದ ಪ್ರಭುತ್ವ ಎಲ್ಲ ಆಧ್ಯಾತ್ಮಿಕ ಅರಸುವವರಿಗೆ ಅವಶ್ಯವಾಗಿರುತ್ತದೆ, ಸಂಪೂರ್ಣ ವಿರಾಗಿಗಳು ಅದನ್ನು ಬೇರು ಸಹಿತ ಕಿತ್ತು ಹಾಕಬೇಕಾಗುತ್ತದೆ. ಇಷ್ಟನ್ನು ಗುರುತಿಸಬೇಕು ಮತ್ತು ಅದರ ಬಂಧಕವಾದ ಮಹತ್ವವನ್ನು ಹಾಗೂ ತತ್ವವನ್ನು ಕುಗ್ಗಿಸಬಾರದು.

*

## ಲೈಂಗಿಕ ಪ್ರಚೋದನೆಯ ಹಿಂದಿರುವ ತತ್ವ

ಲೈಂಗಿಕ ಪ್ರಚೋದನೆಯ ಒರಟಾದ ಲೋಲುಪತೆಯ ಹೊರತಾಗಿ ಲೈಂಗಿಕ ತತ್ವದ ಎಲ್ಲ ಗುರುತಿಸುವಿಕೆಯನ್ನು ಪೃಥ್ವಿಯ ಮೇಲಿನ ದೈವೀ ಜೀವನದಿಂದ ಪ್ರತ್ಯೇಕವಾಗಿರಿಸಲಾಗದು. ಅದು ಜೀವನದಲ್ಲಿದೆ, ದೊಡ್ಡ ಪಾತ್ರವನ್ನು ವಹಿಸುತ್ತದೆ ಮತ್ತು ಅದರೊಡನೆ ವ್ಯವಹರಿಸಬೇಕಾಗುತ್ತದೆ, ಅದನ್ನು ಸರಳವಾಗಿ ಅಲಕ್ಷಿಸಲಾಗುವುದಿಲ್ಲ, ಕೇವಲ ದಮನ ಮಾಡಲಿಕ್ಕಾಗುವುದಿಲ್ಲ, ಕೆಳಗೆ ಹಿಡಿದಿಡಲಾಗುವುದಿಲ್ಲ, ನೋಟದಿಂದ ದೂರ ಇರಿಸಲಾಗುವುದಿಲ್ಲ. ಮೊದಲನೆಯದಾಗಿ ಅದರ ಮುಖಗಳಲ್ಲೊಂದು, ವಿಶ್ವವ್ಯಾಪಿಯಾದದ್ದು ಹಾಗೂ ದೈವೀ ತತ್ವವಾದದ್ದು: ಈಶ್ವರ ಹಾಗೂ ದೈವೀಶಕ್ತಿಯ ಆಧ್ಯಾತ್ಮಿಕ ರೂಪವನ್ನು ತಾಳುತ್ತದೆ ಮತ್ತು ಅದರ ಹೊರತಾಗಿ ಜಗತ್ತಿನ ಸೃಷ್ಟಿಯಿರುವುದಿಲ್ಲ ಇಲ್ಲವೆ ಪುರುಷ ಹಾಗೂ ಪ್ರಕೃತಿ ಇವರ ವಿಶ್ವ ತತ್ವದ ಪ್ರಕಟಣೆ ಇರುವುದಿಲ್ಲ, ಸೃಷ್ಟಿಗಾಗಿ ಅವೆರಡೂ ಅವಶ್ಯವಾಗಿವೆ, ಲೀಲೆಗಾಗಿ ಅವುಗಳ ಸಹಯೋಗ ಹಾಗೂ ವಿನಿಮಯಕ್ಕಾಗಿಯೂ ಕೂಡ ಅವಶ್ಯವಾಗಿವೆ. ಲೀಲೆಯ ವಿಧಾನದಲ್ಲಿ ಮನೋವೈಜ್ಞಾನಿಕ ಕಾರ್ಯಗತಿ, ಆತ್ಮ ಮತ್ತು ಪ್ರಕೃತಿ ಎಂದು ಅವುಗಳ ಪ್ರಕಟಣೆ ಮೂಲಭೂತವಾಗಿರುತ್ತವೆ. ದೈವೀ ಜೀವನದಲ್ಲಿಯೇ ಸ್ವತಃ ಒಂದು ಅವತಾರ ಇಲ್ಲವೆ ಯಾವುದೇ ರೀತಿಯಲ್ಲಿ ಆ ಎರಡೂ ಸಾಮರ್ಥ್ಯಗಳ ಸಾನ್ನಿಧ್ಯ, ಇಲ್ಲವೆ ಅವರ ದೇಹ ತಾಳುವಿಕೆಯ ಮೂಲಕ, ಪ್ರತಿನಿಧಿಗಳ ಮೂಲಕ ಅವರ ಪ್ರಾರಂಭದ ಪ್ರಭಾವ ಹೊಸ ಸೃಷ್ಟಿಗಾಗಿ ಅತ್ಯಗತ್ಯವಾಗಿರುತ್ತದೆ. ಅದರ ಮಾನವ ಕ್ರಿಯೆಯಲ್ಲಿ ಮಾನಸಿಕ ಮತ್ತು ಪ್ರಾಣಿಕ ಹಂತಗಳಲ್ಲಿ ಲೈಂಗಿಕತೆ ಒಟ್ಟಿನಲ್ಲಿ ದೈವಿಕವಲ್ಲದ ತತ್ವವಲ್ಲ, ಅದಕ್ಕೆ ಅದರದೇ ಹೆಚ್ಚು ಉದಾತ್ತವಾದ ಮುಖಗಳಿವೆ, ಆದರ್ಶೀಕರಣಗಳಿವೆ ಮತ್ತು ಯಾವ ರೀತಿಯಲ್ಲಿ ಎಷ್ಟರ ಮಟ್ಟಿಗೆ ಹೊಸ ಹಾಗೂ ಹೆಚ್ಚು ವಿಸ್ತಾರವಾದ ಜೀವನದಲ್ಲಿ ಇವುಗಳನ್ನು ಒಪ್ಪಿಕೊಳ್ಳಬೇಕೆಂದು ನೋಡಬೇಕಾಗಿದೆ. ಎಲ್ಲ ಒರಟಾದ ಪಶುತರಹದ ಲೈಂಗಿಕ ಆಸೆ ಹಾಗೂ ಪ್ರಚೋದನೆಗಳಲ್ಲಿ

ಲೋಲುಪತೆಯನ್ನು ತೆಗೆದು ಹಾಕಬೇಕಾಗುವುದು. ಅದು ಉಚ್ಚತರ ಜೀವನಕ್ಕೆ ತಯಾರಾಗದೆ ಇರುವವರಲ್ಲಿ, ಇಲ್ಲವೆ ಸಂಪೂರ್ಣ ಆಧ್ಯಾತ್ಮಿಕ ಜೀವನಕ್ಕೆ ತಯಾರಾಗದೆ ಇರುವವರಲ್ಲಿ ಮಾತ್ರ ಮುಂದುವರಿದುಕೊಂಡು ಹೋಗಬಹುದು. ಉಚ್ಚತರ ಜೀವನಕ್ಕೆ ಅಭೀಪ್ಸೆ ಪಟ್ಟ ಎಲ್ಲರಲ್ಲಿ, ಆದರೆ ಅದನ್ನು ಪೂರ್ತಿಯಾಗಿ ಕೈಕೊಳ್ಳಲು ಸಾಧ್ಯವಾಗದೆ ಇರುವವರಲ್ಲಿ ಅದನ್ನು ಸುಸಂಸ್ಕೃತಗೊಳಿಸಬೇಕು, ಅದನ್ನು ಆಧ್ಯಾತ್ಮಿಕ ಇಲ್ಲವೆ ಚೈತ್ಯಾತ್ಮಿಕ ಪ್ರಚೋದನೆಗೆ ಅಧೀನಪಡಿಸಬೇಕು ಮತ್ತು ಉಚ್ಚತರ ಮನಸ್ಸು, ಉಚ್ಚತರ ಪ್ರಾಣಿಕ ಇವುಗಳ ನಿಯಂತ್ರಣದಲ್ಲಿರಿಸಬೇಕು, ಅದರ ಎಲ್ಲ ನಿಮ್ನತರ, ತುಚ್ಛ ಹಾಗೂ ಕೀಳಾದ ರೂಪಗಳನ್ನು ತೊಡೆದು ಹಾಕಬೇಕು, ಆದರ್ಶದ ಪರಿಶುದ್ಧತೆಯ ಸ್ಪರ್ಶದ ಭಾವನೆ ತಂದುಕೊಳ್ಳಬೇಕು. ಪ್ರೇಮ ಉಳಿದುಕೊಳ್ಳುತ್ತದೆ, ಪ್ರೇಮದ ಪರಿಶುದ್ಧ ಸತ್ಯದ ಎಲ್ಲ ರೂಪಗಳಲ್ಲಿ, ಉಚ್ಚತರ ಹೆಜ್ಜೆಗಳಲ್ಲಿ ತನ್ನ ಅತ್ಯುಚ್ಚ ಸ್ವಭಾವವನ್ನು ತಲುಪವವರೆಗೆ, ವಿಶ್ವಂಭರ ಪ್ರೇಮವಾಗಿ ವಿಸ್ತಾರಗೊಳ್ಳುವವರೆಗೆ, ಭಗವಂತನ ಪ್ರೇಮದಲ್ಲಿ ಲೀನವಾಗಿ ಹೋಗುವವರೆಗೆ ಉಳಿದುಕೊಳ್ಳುತ್ತದೆ. ಪುರುಷ ಮತ್ತು ಸ್ತ್ರೀ ಇವರ ಪ್ರೇಮ ಕೂಡ ಆ ಉಚ್ಚತರವಾಗುವಿಕೆಗೆ ಹಾಗೂ ಪರಾಕಾಷ್ಠೆಗೆ ಒಳಗಾಗುತ್ತದೆ, ಏಕೆಂದರೆ ಅದೆಲ್ಲವೂ ಆದರ್ಶದ ಒಂದು ಸ್ಪರ್ಶದ ಭಾವನೆ ತಂದುಕೊಳ್ಳುತ್ತದೆ ಮತ್ತು ಆಧ್ಯಾತ್ಮಿಕವಾದದ್ದು ದೈವೀ ನೈಜತೆಯನ್ನು ತಲುಪುವವರೆಗೆ ಆರೋಹಣದ ಮಾರ್ಗವನ್ನು ಅನುಸರಿಸಬೇಕು. ದೇಹ ಹಾಗೂ ಅದರ ಚಟುವಟಿಕೆಗಳನ್ನು ದೈವೀ ಜೀವನದ ಭಾಗವೆಂದು ಒಪ್ಪಿಕೊಳ್ಳಬೇಕು ಮತ್ತು ಈ ನಿಯಮದಡಿ ಸಾಗಿ ಹೋಗಬೇಕು, ಆದರೆ ಇನ್ನಿತರ ಉತ್ಕ್ರಾಂತಿಪರ ಸಂಕ್ರಾಂತಿಗಳಲ್ಲಿದ್ದ ಹಾಗೆ ದೈವೀ ಜೀವನವನ್ನು ಒಪ್ಪಿಕೊಳ್ಳದ್ದನ್ನು ಒಪ್ಪಿಕೊಳ್ಳಬಾರದು ಮತ್ತು ಅದು ಆರೋಹಣದ ಸ್ವಭಾವದಿಂದ ಕಳಚಿ ಹೋಗಬೇಕು.

**CWSA, 13/543–44** **– ಶ್ರೀ ಅರವಿಂದರು**

*

## ಲೈಂಗಿಕ ಲೋಲುಪತೆ ಹಾಗೂ ಸಮಗ್ರ ಯೋಗ

ತಾಂತ್ರಿಕ ಆಚರಣೆಗಳನ್ನು ಕುರಿತು ಯಾವುದೇ ಬಗೆಯ ಸೂಚನೆ ನಿಜವಾಗಿ ಪ್ರಾಣಿಕದ ಒಂದು ಕುತಂತ್ರವಾಗಿರುತ್ತದೆ. ಅವುಗಳಿಲ್ಲದೆ ಲೈಂಗಿಕ ಪ್ರಚೋದನೆಗಳನ್ನು ತೊಡೆದು ಹಾಕಬಹುದು. ಅವು ಪಟ್ಟುಹಿಡಿದು ಉಳಿದುಕೊಳ್ಳುತ್ತವೆ, ಏಕೆಂದರೆ

ಏನೋ ಒಂದು ಇನ್ನೂ ಅವುಗಳಿಗಾಗಿ ಸ್ಥಾನವೊಂದನ್ನು ಕಾದಿರಿಸಲು ಬಯಸುತ್ತದೆ. ಹಾಗಾಗಿ ನಮ್ಮ ಸಾಧನೆಯಲ್ಲಿ ಲೈಂಗಿಕ ತೃಪ್ತಿಗೆ ಯಾವ ಸ್ಥಾನವಿದೆ ಎಂಬ ಪ್ರಶ್ನೆಗೆ ಅತ್ಯಂತ ಒಳ್ಳೆಯ ಉತ್ತರ 'ಯಾವ ಸ್ಥಾನವೂ ಇಲ್ಲ' ಎಂಬುದಾಗಿದೆ. ಮನುಷ್ಯ ಲೈಂಗಿಕ ತೃಪ್ತಿಯನ್ನು ಬಿಟ್ಟುಕೊಡಬೇಕು ಮತ್ತು ದೈವೀ ಪ್ರೇಮ ಹಾಗೂ ಆನಂದಗಳಿಂದ ತೃಪ್ತಿ ಪಡೆಯಬೇಕು.

ತೆರೆದಿರಿಸಿದ್ದ ಇಲ್ಲವೆ ಆಳವಾದ ಪ್ರಣಯ ಸಾಹಸದ ಮಮತೆ ಎಂಬ ಸೋಗಿನಲ್ಲಿದ್ದ) ಲೈಂಗಿಕತೆ ಮತ್ತು ಈ ಯೋಗ ಒಟ್ಟಿಗೆ ಸಾಗಲಾರವು ಎಂಬುದಕ್ಕೆ ಸ್ಪಷ್ಟ, ತಪ್ಪು ಅರ್ಥ ಮಾಡಿಕೊಳ್ಳಲು ಅವಕಾಶ ನೀಡದ ನಿರ್ದೇಶನ ಇಲ್ಲದೆ ಇರುವುದು ಇಡೀ ತಪ್ಪಾಗಿದೆ. ಸಾಧನೆಗೆ ಲೈಂಗಿಕತೆ ಸಹಾಯ ಮಾಡಬಹುದು ಎಂಬ ವಿಚಾರ ಒಂದಿಲ್ಲೊಂದು ರೂಪದಡಿಯಲ್ಲಿ ಬಹಳಷ್ಟು ಜನರನ್ನು ಹಿಡಿದುಕೊಂಡಿದೆ ಮತ್ತು ಅದು ಅದರಲ್ಲಿ ಲೋಲರಾಗುವವರಿಗೆ ಎಡವುವಂತೆ ಮಾಡುವ ದೊಡ್ಡ ಅಡೆತಡೆ ಎಂದು ಸಿದ್ಧಮಾಡಿ ತೋರಿಸಿದೆ. ಅದು ಸತ್ತೆಯನ್ನು ಪ್ರಾಣಿಕದ ಕೆಳಗೆ ಕಟ್ಟಿಹಾಕುತ್ತದೆ ಮತ್ತು ಆಧ್ಯಾತ್ಮಿಕ ಮುಕ್ತಿಗೆ ತಡೆಯನ್ನುಂಟು ಮಾಡುತ್ತದೆ, ಆ ಮುಕ್ತಿ ಸ್ವಭಾವದ ಪರಿವರ್ತನೆಗೆ ಅವಶ್ಯವಾದ ಆಧಾರವಾಗಿರುತ್ತದೆ. ಉಚ್ಚತರ ಅನುಭವಗಳೂ ಕೂಡ ಲೈಂಗಿಕತೆಯ ಛಾಯೆಯೊಂದಿಗೆ ವರ್ಣ ಪಡೆಯಲು ಪ್ರಾರಂಭಿಸುತ್ತವೆ ಮತ್ತು ಅವುಗಳ ದ್ರವ್ಯದಲ್ಲಿ ತಪ್ಪಾಗುವಂತೆ ಮಾಡುತ್ತವೆ.

*

ಈ ವಿಚಾರ ಕುರಿತು ಶ್ರೀ ಮಾತೆಯವರು ನಿಮಗೆ ಈಗಾಗಲೆ ಹೇಳಿದ್ದಾರೆ. ಲೈಂಗಿಕ ಹಸಿವಿನಲ್ಲಿ ಪೂರ್ತಿ ಲೋಲರಾಗುವ ಮೂಲಕ ಅದು ಮುಗಿದು ಹೋಗುತ್ತದೆ ಮತ್ತು ಎಂದೆಂದಿಗೂ ಮಾಯವಾಗುತ್ತದೆ ಎಂಬುದು ಮೋಸಗೊಳಿಸುವ ನಟನೆ, ಮನಸ್ಸಿನ ಎದುರು ಪ್ರಾಣಿಕ ಅದನ್ನು ತೋರಿಸಿಕೊಡುತ್ತದೆ, ಅದರಿಂದಾಗಿ ಅದರ ಆಸೆಗೆ ಅನುಮತಿ ದೊರೆಯುವಂತಾಗುತ್ತದೆ– ಅದಕ್ಕೆ ಬೇರೆ ಯಾವ ಮೂಲಕಾರಣವಿಲ್ಲ ಇಲ್ಲವೆ ಸತ್ಯ ಇಲ್ಲವೆ ಸಮರ್ಥನೆ ಇಲ್ಲ. ಪ್ರಾಸಂಗಿಕ ಲೋಲುಪತೆಯೊಂದು ಲೈಂಗಿಕ ಆಸೆಯನ್ನು ಮೆಲಗುದಿಯಲ್ಲಿ ಕಾಪಾಡಿಕೊಂಡು ಬಂದರೆ ಪೂರ್ತಿಯಾದ ಲೋಲುಪತೆ ನಿಮ್ಮನ್ನು ಅದರ ಕೆಸರಿನಲ್ಲಿ ಮುಳುಗಿಸಿಬಿಡುವುದು. ಈ ಹಸಿವು ಉಳಿದ ಹಸಿವುಗಳ ಹಾಗೆ ತಾತ್ಕಾಲಿಕ ತೃಪ್ತಿಯ

ಮೂಲಕ ನಿಂತು ಹೋಗುವುದಿಲ್ಲ. ಅದು ತಾತ್ಕಾಲಿಕ ತಡೆಹಿಡಿದಿರುವಿಕೆಯ ನಂತರ ತನ್ನನ್ನು ನವೀಕರಿಸಿಗೊಳ್ಳುತ್ತದೆ, ಮತ್ತೆ ಲೋಲುಪತೆಯನ್ನು ಬಯಸುತ್ತದೆ. ಅದಕ್ಕೆ ಆಮಿಷವಾಗಲಿ, ಕಂಠಪೂರ್ತಿ ಮಾಡಿಕೊಳ್ಳುವುದಾಗಲಿ ಉಪಚಾರ ನೀಡಲಾರವು. ಸಾರಭೂತ ಚೈತ್ಯಾತ್ಮಿಕ ನಿರಾಕರಣೆ ಇಲ್ಲವೆ ಪೂರ್ತಿಯಾಗಿ ಆಧ್ಯಾತ್ಮಿಕ ತೆರೆದಿರಿಸಿ–ಕೊಳ್ಳುವಿಕೆ, ಅದನ್ನು ಬಯಸದ, ನಿಜವಾದ ಆನಂದವುಳ್ಳ ಹೆಚ್ಚುತ್ತಿರುವ ಅವರೋಹಣ ಇವುಗಳ ಮೂಲಕ ಮಾತ್ರ ಅದು ಹೊರಟು ಹೋಗಬಹುದು.

*

### ದೈವೀ ಆನಂದ ಮತ್ತು ಕೀಳು ಸ್ಥಿತಿಯಲ್ಲಿರುವ ಸಂತೋಷ ಇವುಗಳ ನಡುವೆ ಆಯ್ಕೆ ಮಾಡಿಕೊಳ್ಳುವುದು

ಭಯದ ಪ್ರಶ್ನೆ ಅದಲ್ಲ – ಅದು ದೈವೀ ಶಾಂತಿ ಹಾಗೂ ಆನಂದ ಮತ್ತು ಕೀಳು ಸ್ಥಿತಿಯ ಲೈಂಗಿಕ ಸಂತೋಷ, ಭಗವಂತ ಮತ್ತು ಸ್ತ್ರೀಯ ಆಕರ್ಷಣೆ ಇವುಗಳ ನಡುವೆ ಆಯ್ಕೆ ಮಾಡಿಕೊಳ್ಳುವುದರ ಪ್ರಶ್ನೆಯಾಗಿದೆ, ದೇಹಕ್ಕೆ ಆಧಾರ ನೀಡುವುದಕ್ಕಾಗಿ ಆಹಾರವನ್ನು ಸೇವಿಸಬೇಕಾಗುತ್ತದೆ, ಆದರೆ ಲೈಂಗಿಕ ತೃಪ್ತಿ ಅವಶ್ಯವಾದದ್ದಲ್ಲ. ಆಹಾರಕ್ಕಾಗಿ ಅತ್ಯಾಸೆ, ನಾಲಿಗೆ ರುಚಿಯ ಬಯಕೆ ಮಾಯವಾದಾಗ ಆಹಾರಕ್ಕಾಗಿರುವ ರಸವನ್ನು ಆಧ್ಯಾತ್ಮಿಕ ಷರತ್ತಿನೊಂದಿಗೆ ಸಾಮರಸ್ಯಗೊಳಿಸಬಹುದು. ಬೌದ್ಧಿಕ ಹಾಗೂ ಸೌಂದರ್ಯಾಭಿರುಚಿಯ ಆನಂದ ಕೂಡ, ಅದಕ್ಕೆ ಅಂಟಿಕೊಂಡಿದ್ದರೆ ಆಧ್ಯಾತ್ಮಿಕ ಪರಿಪೂರ್ಣತೆಗೆ ಒಂದು ಅಡೆತಡೆ–ಯಾಗಬಹುದು, ಆದಾಗ್ಯೂ ಅದು ಆಧ್ಯಾತ್ಮಿಕವಾದುದಕ್ಕೆ ಒರಟಾದ, ಪರಿವರ್ತನೆ ಹೊಂದಿರದ ದೈಹಿಕ ಹಸಿವಿಗಿಂತ ಹೆಚ್ಚು ಹತ್ತಿರವಿರಬಹುದು. ವಾಸ್ತವದಲ್ಲಿ ಆಧ್ಯಾತ್ಮಿಕ ಪ್ರಜ್ಞೆಯ ಭಾಗವಾಗುವುದಕ್ಕೆ ಬೌದ್ಧಿಕ ಹಾಗೂ ಸೌಂದರ್ಯಾಭಿರುಚಿಯ ಆನಂದ ಕೂಡ ಬದಲಾಗಬೇಕು, ಉಚ್ಚತರವಾದ ಏನೋ ಒಂದಾಗಬೇಕು. ಆದರೆ ರಸವುಳ್ಳ ಎಲ್ಲ ವಿಷಯಗಳನ್ನು ಕಾಪಾಡಿಕೊಂಡು ಬರಲಾಗದು. ಇತರರಿಗೆ ನೋವುಂಟು ಮಾಡುವುದರಲ್ಲಿ, ಅವರನ್ನು ಕೊಂದುಹಾಕುವುದರಲ್ಲಿ ಹಿಂಸಾನಂದದ ರಸವಿದೆ, ತನ್ನನ್ನೇ ಪೀಡೆಗೊಳಪಡಿಸಿಕೊಳ್ಳುವುದರಲ್ಲಿ ಸ್ವಪೀಡಾಸ್ವಾದದ ರಸವಿದೆ – ಆಧುನಿಕ ಮನೋವೈಜ್ಞಾನಿಕ ಶಾಸ್ತ್ರ ಇವೆರಡರಿಂದ ತುಂಬಿಕೊಂಡಿದೆ. ರಸವೊಂದಿದೆ ಎಂಬ ಕಾರಣಕ್ಕಾಗಿ ಅದನ್ನು ಆಧ್ಯಾತ್ಮಿಕ ಜೀವನದ ಭಾಗವೆಂದು ಇಟ್ಟುಕೊಳ್ಳುವುದಕ್ಕೆ ಸಾಕಷ್ಟು ಕಾರಣವನ್ನು ವಿಷಯಗಳು ಒದಗಿಸಲಾರವು.

*

## ಪ್ರಾಣಿಕ ವಿನಿಮಯ

ಈ ಯೋಗದ ಇಡೀ ತತ್ವ ಮನುಷ್ಯ ತನ್ನನ್ನು ಇಡಿಯಾಗಿ ಭಗವಂತನಿಗೆ ಅರ್ಪಿಸುವುದಾಗಿದೆ, ಮತ್ತಾರಿಗೋ, ಮತ್ತಾವ ವಿಷಯಕ್ಕೋ ಬಿಟ್ಟುಕೊಡುವುದಾಗಿಲ್ಲ. ಮತ್ತು ನಮ್ಮಲ್ಲಿಯೇ ಸ್ವತಃ ದೈವೀ ಮಾತೆಯೊಡನೆ ಅವರ ಸಾಮರ್ಥ್ಯದೊಡನೆ ಏಕತೆ ಪಡೆಯುವುದರೊಂದಿಗೆ ಎಲ್ಲ ವಿಶ್ವಾತೀತ ಪ್ರಕಾಶ, ಶಕ್ತಿ, ವಿಸ್ತಾರ, ಶಾಂತಿ, ಪರಿಶುದ್ಧತೆ, ಸತ್ಯಪ್ರಜ್ಞೆ ಮತ್ತು ಅತಿಮಾನಸ ಭಗವಂತನ ಆನಂದ ಇವುಗಳನ್ನು ಕೆಳಗಿಳಿಸಿ ತರುವುದಾಗಿದೆ. ಹಾಗಾಗಿ ಈ ಯೋಗದಲ್ಲಿ ಪ್ರಾಣಿಕ ಸಂಬಂಧಗಳಿಗಾಗಲಿ ಪ್ರಾಣಿಕ ವಿನಿಮಯಕ್ಕಾಗಲಿ ಸ್ಥಾನವಿರುವುದಿಲ್ಲ, ಯಾವುದೇ ಬಗೆಯ ಇಂತಹ ವಿನಿಮಯ ಕೂಡಲೆ ಆತ್ಮವನ್ನು ಕೆಳಗೆ ನಿಮ್ನತರ ಪ್ರಜ್ಞೆಯತ್ತ, ನಿಮ್ನತರ ಸ್ವಭಾವದತ್ತ ಕೆಡವುತ್ತದೆ, ಭಗವಂತನೊಡನೆ ನಿಜವಾದ ಹಾಗೂ ಪೂರ್ತಿ ಏಕತೆಗೆ ತಡೆಯನ್ನುಂಟು ಮಾಡುತ್ತದೆ, ಮತ್ತು ಅತಿಮಾನಸ ಪ್ರಜ್ಞೆಯತ್ತ ಸತ್ಯದತ್ತ ಆರೋಹಣಕ್ಕೆ ಮತ್ತು ಈಶ್ವರೀ ಶಕ್ತಿಯ ಅವರೋಹಣಕ್ಕೆ ತಡೆಯನ್ನುಂಟು ಮಾಡುತ್ತದೆ. ಈ ವಿನಿಮಯ ಲೈಂಗಿಕ ಸಂಬಂಧದ ಇಲ್ಲವೆ ಲೈಂಗಿಕ ಸಂತೋಷದ ರೂಪವನ್ನು ಪಡೆದಾಗ,– ಬಾಹ್ಯ ಕ್ರಿಯೆಯನ್ನು ದೂರವಿರಿಸಿದಾಗಲೂ ಕೂಡ ಇನ್ನೂ ಹೆಚ್ಚು ಕೆಟ್ಟದ್ದಾಗಿರುತ್ತದೆ, ಹಾಗಾಗಿ ಸಾಧನೆಯಲ್ಲಿ ಈ ವಿಷಯಗಳನ್ನು ಪರಿಪೂರ್ಣವಾಗಿ ನಿಷೇಧಿಸಲಾಗಿರುತ್ತದೆ. ಆ ಬಗೆಯ ಭೌತಿಕ ಕ್ರಿಯೆಗೆ ಅನುವು ಮಾಡಿಕೊಡುವುದಿಲ್ಲ. ಅಷ್ಟೇ ಅಲ್ಲ, ಆದರೆ ಅವುಗಳ ಸೂಕ್ಷ್ಮತರ ರೂಪಗಳಿಗೂ ಅದೇ ಅನ್ವಯವಾಗುತ್ತದೆ. ಅತಿಮಾನಸ ಭಗವಂತನೊಡನೆ ಏಕತೆ ಪಡೆದ ನಂತರ ಇತರರೊಡನೆ ನಿಜವಾದ ಆಧ್ಯಾತ್ಮಿಕ ಸಂಬಂಧವನ್ನು ಕಂಡುಕೊಳ್ಳಬಹುದು. ಆ ಉಚ್ಚತರ ಏಕತೆಯಲ್ಲಿ ಈ ಬಗೆಯ ಒರಟಾದ ನಿಮ್ನತರ ಪ್ರಾಣಿಕ ಚಲನೆಗೆ ಸ್ಥಾನವಿರುವುದಿಲ್ಲ.

*

## ಲೈಂಗಿಕ ಲೋಲುಪತೆಯ ಸೂಕ್ಷ್ಮ ರೂಪಗಳು

ಲೈಂಗಿಕ ಪ್ರಚೋದನೆಯ ಮೇಲೆ ಪ್ರಭುತ್ವ ಪಡೆಯುವುದಕ್ಕೆ – ಲೈಂಗಿಕ ಚೈತನ್ಯವನ್ನು ಮೇಲ್ಗಡೆಗೆ ಎಳೆಯುವುದಕ್ಕೆ ಬಾಹ್ಯದಲ್ಲಿ ಚೆಲ್ಲಿಕೊಡುವುದಕ್ಕಲ್ಲ, ಹಾಳುಮಾಡುವುದಕ್ಕಲ್ಲ ಲೈಂಗಿಕ ಕೇಂದ್ರದ ಮೇಲೆ ಅಷ್ಟೊಂದು ಪ್ರಭುತ್ವ ಪಡೆಯುವುದಕ್ಕೆ – ನಿಜವಾಗಿ ಬೀಜದಲ್ಲಿರುವ ಶಕ್ತಿ ಪುರಾತನ ಭೌತಿಕ ಚೈತನ್ಯವಾಗುವಂತೆ ತಿರುವು ಕೊಡಬಹುದಾದುದರಿಂದ ಅದು ಸಾಧ್ಯವಾಗುತ್ತದೆ. ಅದು ಇತರ ಶಕ್ತಿಗಳಿಗೆ

ಆಧಾರವಾಗಿರುತ್ತದೆ. ರೇತಸ್ಸು ಓಜಸ್ಸಾಗುತ್ತದೆ. ಆದರೆ ಲೈಂಗಿಕ ಆಸೆಯಲ್ಲಿ ಮತ್ತು ಅದರ ಒಂದು ಬಗೆಯ ಸೂಕ್ಷ್ಮ ತೃಪ್ತಿಯಲ್ಲಿ ಸಿಕ್ಕಿಹಾಕಿಕೊಳ್ಳುವಿಕೆಯನ್ನು ಒಪ್ಪಿಕೊಳ್ಳುವುದು ಮತ್ತು ಅದು ಸಾಧನೆಯ ಒಂದು ಭಾಗವೆಂದು ನೋಡುವುದು– ಇದಕ್ಕಿಂತ ಹೆಚ್ಚು ಅಪಾಯಕಾರಿಯಾದ ದೋಷ ಬೇರೊಂದಿಲ್ಲ. ಅದು ಆಧ್ಯಾತ್ಮಿಕ ಪತನದತ್ತ ನೇರವಾಗಿ ಮುಂದೆ ಸಾಗುವ ಮತ್ತು ಅತಿಮಾನಸದ ಅವರೋಹಣವನ್ನು ತಡೆಹಿಡಿಯುವ ಶಕ್ತಿಗಳನ್ನು ವಾತಾವರಣದಲ್ಲಿ ಚೆಲ್ಲಿಕೊಡುವ ಅತ್ಯಂತ ಪರಿಣಾಮಕಾರಿಯಾದ ರೀತಿ, ಅದರ ಸ್ಥಾನದಲ್ಲಿ ಬದಲಾಗಿ ವಿರೋಧೀ ಪ್ರಾಣಿಕ ಸಾಮರ್ಥ್ಯಗಳು ಅವರೋಹಣ ಮಾಡುವಂತಾಗುತ್ತದೆ, ಅವು ಕ್ಷೋಭೆ ಹಾಗೂ ದುರ್ಘಟನೆಗಳು ಹರಡಿಕೊಳ್ಳುವಂತೆ ಮಾಡುತ್ತವೆ. ಈ ಮಾರ್ಗಚ್ಯುತಿ ಸಂಭವಿಸಲು ಪ್ರಯತ್ನಿಸಿದರೆ ಅದನ್ನು ಪೂರ್ತಿಯಾಗಿ ಚೆಲ್ಲಿಕೊಡಬೇಕು, ದೈವೀ ಸತ್ಯವನ್ನು ಕೆಳಗಿಳಿಸಿ ತರಬೇಕಾದರೆ ಹಾಗೂ ಕಾರ್ಯ ಕೈಕೊಳ್ಳಬೇಕಾದರೆ ಅದನ್ನು ಪ್ರಜ್ಞೆಯಿಂದ ತೆಗೆದು ಹಾಕಬೇಕು.

ಭೌತಿಕ ಲೈಂಗಿಕ ಕ್ರಿಯೆಯನ್ನು ಬಿಟ್ಟುಕೊಟ್ಟಾಗಲೂ ಅದರ ಆಂತರಿಕ ಪುನಸ್ಸೃಷ್ಟಿ ಲೈಂಗಿಕ ಕೇಂದ್ರದ ಪರಿವರ್ತನೆ ಎಂದು ಕಲ್ಪನೆ ಮಾಡಿಕೊಳ್ಳುವುದು ತಪ್ಪು. ಪ್ರಕೃತಿಯಲ್ಲಿ ಪಶುವಿನ ಲೈಂಗಿಕ ಕ್ರಿಯೆ ಅವಿದ್ಯೆಯಲ್ಲಿ ಪ್ರಾಪಂಚಿಕ ಸೃಷ್ಟಿಯ ಆರ್ಥಿಕಸ್ಥಿತಿಯ ವಿಶೇಷ ಉದ್ದೇಶಕ್ಕಾಗಿ ಒಂದು ಉಪಾಯ. ಆದರೆ ಅದರ ಜೊತೆಗೆ ಬರುವ ಪ್ರಾಣಿಕ ಉದ್ರೇಕ ವಾತಾವರಣದಲ್ಲಿ ಬಹಳ ಅನುಕೂಲಕರ ಅವಕಾಶ ಮತ್ತು ಉದ್ರೇಕಗಳನ್ನುಂಟು ಮಾಡುತ್ತದೆ, ಅದರಿಂದಾಗಿ ಅತಿಮಾನಸ ದೈವೀ ಪ್ರಕಾಶದ ಅವರೋಹಣಕ್ಕೆ ತಡೆ ಉಂಟುಮಾಡುವುದನ್ನೇ ತಮ್ಮ ವ್ಯವಹಾರವನ್ನಾಗಿ ಮಾಡಿಕೊಂಡಿರುವ ಪ್ರಾಣಿಕ ಶಕ್ತಿಗಳ ಹಾಗೂ ಸತ್ತೆಗಳ ಒಳನುಗ್ಗುವಿಕೆ ಉಂಟಾಗುತ್ತದೆ. ಅದಕ್ಕೆ ಅಂಟಿಕೊಂಡ ಸಂತೋಷ ಕೀಳು–ಸ್ಥಿತಿಯದು ಮತ್ತು ದೈವೀ ಆನಂದದ ನಿಜವಾದ ರೂಪವಾಗಿರುವುದಿಲ್ಲ. ಭೌತಿಕದಲ್ಲಿ ನಿಜವಾದ ಆನಂದಕ್ಕೆ ಭಿನ್ನ ಗುಣಲಕ್ಷಣ, ಚಲನೆ ಹಾಗೂ ದ್ರವ್ಯಗಳಿರುತ್ತವೆ; ಸಾರದಲ್ಲಿ ಸ್ವ–ಅಸ್ತಿತ್ವದಲ್ಲಿರುವಂತಹದು, ಅದರ ಪ್ರಕಟಣೆ ಭಗವಂತನೊಡನೆ ಆಂತರಿಕ ಏಕತೆಯ ಮೇಲೆ ಮಾತ್ರ ಅವಲಂಬಿಸಿರುವಂತಹದು. ನೀನು ದೈವೀ ಆನಂದವನ್ನು ಕುರಿತು ಮಾತನಾಡಿರುವಿ, ಆದರೆ ದೈವೀ ಆನಂದ ಭೌತಿಕವನ್ನು ಸ್ಪರ್ಶಿಸಿದಾಗ ಒರಟಾದ ನಿಮ್ನ ಪ್ರಾಣಿಕ ಪ್ರವೃತ್ತಿಗಳನ್ನು ಜಾಗ್ರತಗೊಳಿಸುವುದಿಲ್ಲ; ಅವುಗಳಲ್ಲಿ ಲೋಲರಾಗುವುದು ದೈವೀ ಆನಂದವನ್ನು ನಿರಾಕರಿಸುವುದಾಗಿರುತ್ತದೆ ಮತ್ತು ಆ ಆನಂದ ಉಚ್ಚತರ

ಎತ್ತರಗಳತ್ತ ಹಿಂದೆಗೆದು ಹೋಗುವುದು, ಅದನ್ನು ಒರಟಾದ ಪ್ರಾಪಂಚಿಕ ಸೃಷ್ಟಿಯಲ್ಲಿ ಅದಾಗಲೇ ಎಳೆದು ತರುವುದು ಸಾಕಷ್ಟು ಕಠಿಣವಾಗಿರುತ್ತದೆ, ಆ ಸೃಷ್ಟಿಯನ್ನು ಆ ಆನಂದ ಮಾತ್ರ ಪರಿವರ್ತಿಸಬಲ್ಲದು. ದೈವೀ ಆನಂದ ಪ್ರವೇಶಿಸಲು ಒಪ್ಪಿಕೊಳ್ಳುವ ಒಂದೇ ದ್ವಾರದಿಂದ ಬರುವುದನ್ನು ಅರಸಬೇಕು, ಆ ದ್ವಾರ ಚೈತ್ಯಸತ್ತೆಯಾಗಿದೆ ಮತ್ತು ನಿಮ್ನ ಪ್ರಾಣಿಕ ದೋಷವನ್ನು ಚೆಲ್ಲಿಕೊಡಬೇಕು.

*

**ಸಾಧನೆಯಲ್ಲಿ ಲೈಂಗಿಕತೆಯ ಅಪಾಯ**

ಲೈಂಗಿಕ – ಆಸೆ ಮಾರ್ಗವನ್ನು ತಡೆಗಟ್ಟುತ್ತಿರುವವರೆಗೆ ಆರೋಹಣ ಅಸಾಧ್ಯ, ಲೈಂಗಿಕ ಆಸೆ ಪ್ರಾಣಿಕದಲ್ಲಿ ಸಾಮರ್ಥ್ಯಪೂರ್ಣವಾಗಿರುವವರೆಗೆ ಅವರೋಹಣ ಅಪಾಯಕಾರಿಯಾದದ್ದು. ಏಕೆಂದರೆ ಯಾವುದೇ ಕ್ಷಣದಲ್ಲಿ, ಕತ್ತರಿಸಿ ಹಾಕದಿರದ ಇಲ್ಲವೆ ಸುಪ್ತ ಲೈಂಗಿಕ ಆಸೆ ಮಿಶ್ರಣವೊಂದಕ್ಕೆ ಕಾರಣವಾಗಬಹುದು, ಈ ಮಿಶ್ರಣ ನಿಜವಾದ ಆರೋಹಣವನ್ನು ಹಿಂದೆ ಚೆಲ್ಲಿಕೊಡುತ್ತದೆ ಮತ್ತು ದೊರಕಿಸಿದ ಚೈತನ್ಯವನ್ನು ಇತರ ಉದ್ದೇಶಗಳಿಗಾಗಿ ಉಪಯೋಗಿಸುತ್ತದೆ ಇಲ್ಲವೆ ಪ್ರಜ್ಞೆಯ ಎಲ್ಲ ಕಾರ್ಯವನ್ನು ತಪ್ಪಾದ ಭ್ರಾಂತಿಯ ಹಾಗೂ ಗಲಿಬಿಲಿಯ ಅನುಭವದತ್ತ ಹೊರಳಿಸುತ್ತದೆ. ಆದ್ದರಿಂದ ಈ ಅಡೆತಡೆಯನ್ನು ತೆಗೆದು ಹಾಕಿ ಮಾರ್ಗವನ್ನು ನಿರ್ಮಲಗೊಳಿಸಬೇಕು. ಹಾಗಿರದೇ ಹೋದರೆ ಸಾಧನೆಯಲ್ಲಿ ಕೊನೆಯತ್ತ ರಕ್ಷಣೆಯಿರುವುದಿಲ್ಲ, ಇಲ್ಲವೆ ಮುಕ್ತ ಚಲನೆ ಇರುವುದಿಲ್ಲ.

**CWSA, 31/494–505** **– ಶ್ರೀ ಅರವಿಂದರು**

*

**ಆತ್ಮನಿಂದೆ**

ಶರೀರ ಶಾಸ್ತ್ರದ ಒಂದು ಆವಶ್ಯಕತೆ ಎಂದು ಮುಷ್ಟಿ ಮೈಥುನದ ಸಿದ್ಧಾಂತ ಅತ್ಯಂತ ಅಸಾಧಾರಣ ವಿಚಾರ. ಅದು ನರಗಳ ಶಕ್ತಿಯನ್ನು, ಸಮತೋಲನವನ್ನು ದುರ್ಬಲಗೊಳಿಸುತ್ತದೆ, ಅದು ಸ್ವಾಭಾವಿಕವಾದದ್ದು ಏಕೆಂದರೆ ಅದು ಕೃತ್ರಿಮ ಹಾಗೂ ಚೈತನ್ಯವನ್ನು ಇಡಿಯಾಗಿ ಹಾಳುಮಾಡುವಂತಹದು, ನಷ್ಟ ತುಂಬಿ–ಬರಲಾಗದಂತಹದು. ಅದು ಲೈಂಗಿಕ ಕೇಂದ್ರವನ್ನು ಅವ್ಯವಸ್ಥೆಗೆ ಒಳಪಡಿಸುತ್ತದೆ. ಅದರ ಚಪಲವನ್ನು ಮಿತಿಮೀರಿ ತೀರಿಸಿಕೊಳ್ಳುವವರು ತಮ್ಮ ನರಗಳ

ಸಮತೋಲನವನ್ನು ಒಟ್ಟಿನಲ್ಲಿ ಬುಡಮೇಲು ಮಾಡುತ್ತಾರೆ ಮತ್ತು ನರ ದೌರ್ಬಲ್ಯವನ್ನು ತಂದುಕೊಳ್ಳುತ್ತಾರೆ, ಇಲ್ಲವೆ ಅವರ ಸ್ಥಿತಿ ಇನ್ನೂ ಹೆಚ್ಚು ಕೆಟ್ಟದಾಗಿರುತ್ತದೆ. ಲೈಂಗಿಕ ಕೇಂದ್ರವನ್ನು ಹಾಗೂ ಲೈಂಗಿಕ ಕಾರ್ಯಗತಿಯನ್ನು ಅಸ್ತವ್ಯಸ್ತಗೊಳಿಸುವುದರ ಮೂಲಕ ಲೈಂಗಿಕ ಕ್ರಿಯೆಯ ಪರಿಣಾಮಗಳನ್ನು ತಪ್ಪಿಸಿಕೊಳ್ಳಬಾರದು, ಆದರೆ ಲೈಂಗಿಕತೆಯನ್ನೇ ಸ್ವತಃ ನಿಯಂತ್ರಿಸುವುದರ ಮೂಲಕ ಮಾಡಬೇಕು ಅದರಿಂದಾಗಿ ಅದು ಚೈತನ್ಯದ ಉಚ್ಚತರ ರೂಪಗಳತ್ತ ಹೊರಳಿಕೊಳ್ಳುವಂತಾಗುವುದು.

ಆ ರೂಢಿಯನ್ನು ನಿಲ್ಲಿಸುವುದು ಪರಿಪೂರ್ಣವಾಗಿ ಸಾಧ್ಯವಿದೆ. ಹಲವಾರು ವರ್ಷಗಳ ಕಾಲ ಆ ರೂಢಿಯನ್ನು ಇಟ್ಟುಕೊಂಡಿದ್ದವರಿಗೆ ಅದನ್ನು ಆದಾಗ್ಯೂ ನಿಲ್ಲಿಸಲು ಸಾಧ್ಯವಾಯಿತು.

ನೀನು ಹೇಳುವ ಆ ರೂಢಿ ಅತಿಯಾಗಿ ಹಾನಿಕಾರಕವಾಗಿದೆ ಹಾಗೂ ಅಪಾಯಕಾರಿಯಾಗಿದೆ. ಸಾಧನೆಗಾಗಿ ರಕ್ಷಿಸಿಕೊಂಡು ಬರಬೇಕಾದ ಚೈತನ್ಯವನ್ನು ಅದು ಹಾಳುಮಾಡುತ್ತದೆ, ಪ್ರಜ್ಞೆಯನ್ನು ಸ್ಥಳಾಂತರಗೊಳಿಸಿ ನರಗಳ ಸಾಮರ್ಥ್ಯವನ್ನು ಬರಿದು ಮಾಡುತ್ತದೆ, ಜೀವಶಕ್ತಿಯನ್ನು ಕುಗ್ಗಿಸುತ್ತದೆ. ದೇಹದಲ್ಲಿ ಜಡತ್ವ ಹಾಗೂ ನಿರ್ವೀರ್ಯತೆಯನ್ನು ಸೃಷ್ಟಿಸುತ್ತದೆ. ಅದರ ಜೊತೆಗೆ ಬರುವ ಉದ್ರೇಕಗಳು ಇತ್ಯಾದಿ ಏನನ್ನೂ ನಿರ್ಮಾಣ ಮಾಡುವುದಿಲ್ಲ, ಅವುಗಳ ಪ್ರವೃತ್ತಿ ವಿಭಜನೆ ಮಾಡುವುದಾಗಿದೆ. ಬಹಳಷ್ಟು ಸಲ ಈ ರೂಢಿಯ ಪರಿಣಾಮ ಆರೋಗ್ಯವನ್ನು ಹಾಳುಮಾಡುವುದಾಗಿದೆ ಮತ್ತು ಒಳಗೊಳಗೆ ಇರುವ ಅನಾರೋಗ್ಯಗಳನ್ನು ತರುವುದಾಗಿದೆ. – ಕಟ್ಟುನಿಟ್ಟಿಲ್ಲದ ಲೋಲುಪತೆ ಇದ್ದಾಗ ಅದು ಯಾವಾಗಲೂ ಹಾಗೆ ಮಾಡುತ್ತದೆ.

ಅದನ್ನು ತಂದುಕೊಂಡ ಜನರು ಕೈಕೊಳ್ಳಬೇಕಾದ ಒಂದೇ ವಿಷಯವಿದೆ – ಆ ರೂಢಿಯನ್ನು ಇಡಿಯಾಗಿ, ರಾಜೀಮಾಡಿಕೊಳ್ಳದೆ ಮುರಿದು ಹಾಕಬೇಕು ಮತ್ತು ಎಂದೆಂದಿಗೂ ಲೈಂಗಿಕ ಕೇಂದ್ರವನ್ನು ಸ್ಪರ್ಶಿಸಬಾರದು.

**CWSA, 31/531–32** **– ಶ್ರೀ ಅರವಿಂದರು**

*

**ಪ್ರಭುತ್ವ ಮತ್ತು ಅದುಮಿ ಹಿಡಿದಿರುವಿಕೆ ಇವುಗಳ ನಡುವಿರುವ ವ್ಯತ್ಯಾಸ**

ನಿನ್ನ ವಿರೋಧೀ ಅಭಿಪ್ರಾಯದಲ್ಲಿರುವ ವಿಚಾರ ಎಂದರೆ ಲೈಂಗಿಕತೆ ಮನುಷ್ಯನ ಇಡಿಯಾದ ಪ್ರಾಣಿಕದ ಸ್ವಾಭಾವಿಕ ಭಾಗ, ಆಹಾರ ಮತ್ತು ನಿದ್ರೆಗಳಿರುವ ರೀತಿಯಲ್ಲಿ ಒಂದು ಆವಶ್ಯಕತೆ ಮತ್ತು ಅದರ ಇಡಿಯಾದ ನಿರೋಧ ಅಸಮತೋಲನದತ್ತ, ಮತ್ತು ಗಂಭೀರ ಅಸ್ತವ್ಯಸ್ತತೆಯತ್ತ ಕರೆದೊಯ್ಯುಬಹುದು. ಬಾಹ್ಯ ಕ್ರಿಯೆಯಲ್ಲಿ ಅದುಮಿಹಿಡಿದ ಲೈಂಗಿಕತೆ, ಆದರೆ ಇತರ ರೀತಿಯಲ್ಲಿ ಅದರಲ್ಲಿ ಲೋಲವಾಗುವಿಕೆ ದೈಹಿಕ ಪದ್ಧತಿಯ ಅಸ್ತವ್ಯಸ್ತತೆ ಮತ್ತು ಮಿದುಳಿನ ತೊಂದರೆಗಳು ಇವುಗಳತ್ತ ಕರೆದೊಯ್ಯುಬಹುದು ಎಂಬುದು ವಾಸ್ತವ ಸಂಗತಿ. ಲೈಂಗಿಕ ನಿಗ್ರಹವನ್ನು ಎದೆಗುಂದಿಸುವ ವೈದ್ಯಕೀಯ ಸಿದ್ಧಾಂತಕ್ಕೆ ಇದು ಬೇರಿನ ಹಾಗಿದೆ. ನನ್ನ ಅವಲೋಕನದ ಪ್ರಕಾರ ಸಾಮಾನ್ಯ ಲೈಂಗಿಕತೆಯ ಸ್ಥಾನದಲ್ಲಿ ವಿಕೃತ ಬಗೆಯ ರಹಸ್ಯ ಲೋಲುಪತೆ ಕಾಲ್ಪನಿಕವಾಗಿ ಇದ್ದಾಗ ಇಲ್ಲವೆ ಅಗೋಚರ ರಹಸ್ಯ ಬಗೆಯ ಪ್ರಾಣಿಕ ವಿನಿಮಯವಿದ್ದಾಗ ಈ ವಿಷಯಗಳು ಸಂಭವಿಸುತ್ತವೆ. ಪ್ರಭುತ್ವ ಮತ್ತು ಸಂಯಮ ಇವುಗಳನ್ನು ಪಡೆಯಲು ನಿಜವಾದ ಆಧ್ಯಾತ್ಮಿಕ ಪ್ರಯತ್ನವಿದ್ದಾಗ ಎಂದಾದರೂ ಹಾನಿಯಾಗಬಹುದು ಎಂದು ನನಗನಿಸುವುದಿಲ್ಲ.

ಪ್ರಭುತ್ವದ ವಿಧಾನ ಕುರಿತು ಹೇಳುವುದಾದರೆ ಅದನ್ನು ಭೌತಿಕ ಸಂಯಮದ ಮೂಲಕ ಮಾತ್ರ ದೊರಕಿಸಲಾಗುವುದಿಲ್ಲ – ನಿರಾಸಕ್ತಿ ಹಾಗೂ ನಿರಾಕರಣೆ ಇವುಗಳ ಸಂಯೋಜನೆಯಿರುವ ವಿಧಾನದಿಂದ ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ, ಲೈಂಗಿಕ ಪ್ರಚೋದನೆಯಿಂದ ಪ್ರಜ್ಞೆ ಹಿಂದೆ ಸರಿದು ನಿಲ್ಲಬೇಕಾಗುತ್ತದೆ, ಅದು ತನ್ನದು ಎಂಬ ಭಾವನೆ ಹೊಂದುವುದಿಲ್ಲ, ಪ್ರಕೃತಿಯ ಶಕ್ತಿ ಅದರ ಮೇಲೆ ಚೆಲ್ಲಿಕೊಟ್ಟ ಪರಕೀಯವಾದ ಏನೋ ಒಂದು ಎಂದು ಭಾವಿಸುತ್ತದೆ, ಅದಕ್ಕೆ ಒಪ್ಪಿಗೆ ಕೊಡುವುದನ್ನು ಹಾಗೂ ಅದರೊಡನೆ ಗುರುತಿಸಿಕೊಳ್ಳುವುದನ್ನು ನಿರಾಕರಿಸುತ್ತದೆ – ಪ್ರತಿಯೊಂದು ಸಲ ನಿರಾಕರಣೆಯ ಒಂದು ವಿಶಿಷ್ಟ ಚಲನೆ ಹೆಚ್ಚು ಹೆಚ್ಚಾಗಿ ಚೆಲ್ಲಿಕೊಡುತ್ತದೆ, ಮನಸ್ಸು ಪರಿಣಾಮಕ್ಕೊಳಗಾಗದೆ ಉಳಿದುಕೊಳ್ಳುತ್ತದೆ; ಕೆಲ ಸಮಯದ ನಂತರ ಮುಖ್ಯ ಆಧಾರವಾದ ಪ್ರಾಣಿಕ ಅದರಿಂದ ಅದೇ ರೀತಿಯಲ್ಲಿ ಹಿಂದೆ ಸರಿಯುತ್ತದೆ, ಕೊನೆಗೆ ಇನ್ನು ಮುಂದೆ, ಭೌತಿಕ ಪ್ರಜ್ಞೆ ಆಧಾರ ನೀಡುವುದಿಲ್ಲ. ಅದನ್ನು ಇನ್ನು ಮುಂದೆ ಅವಚೇತನ ಕೂಡ ಕನಸಿನಲ್ಲಿ ಎಚ್ಚರಿಸದಂತಾಗುತ್ತದೆ ಮತ್ತು ಬಾಹ್ಯ ಪ್ರಕೃತಿಯ ಶಕ್ತಿಯಿಂದ ಇನ್ನೂ ಹೆಚ್ಚಿನ ಚಲನೆ ಬರುವುದಿಲ್ಲ, ಅದು

ಈ ನಿಮ್ನತರ ಜ್ವಾಲೆಯನ್ನು ಹೊತ್ತಿಸುವುದಿಲ್ಲ. ಲೈಂಗಿಕ ಪ್ರವೃತ್ತಿ ಹಟಮಾರಿತನದಿಂದ ಅಂಟಿಕೊಳ್ಳುತ್ತಿದ್ದಾಗ ಅನುಸರಿಸಬೇಕಾದ ಮಾರ್ಗ ಇದಾಗಿದೆ. ಆದರೆ ಕೆಲವರಿದ್ದಾರೆ ಅವರು ಅದನ್ನು ಸ್ವಭಾವದಿಂದ ನಿರ್ಧಾರಪೂರ್ವಕವಾಗಿ ತೀವ್ರಗತಿಯಿಂದ ಮೂಲಭೂತವಾಗಿ ಬಿಟ್ಟುಕೊಡಬಲ್ಲವರಾಗಿರುತ್ತಾರೆ. ಅಂತಹದು ಅಪರೂಪಕ್ಕೆ ಕಂಡುಬರುತ್ತದೆ.

ಲೈಂಗಿಕ ಪ್ರಚೋದನೆಯನ್ನು ಇಡಿಯಾಗಿ ತೊಡೆದು ಹಾಕುವುದು ಸಾಧನೆಯಲ್ಲಿ ಅತ್ಯಂತ ಕಠಿಣ ವಿಷಯಗಳಲ್ಲಿ ಒಂದು ಎಂಬುದನ್ನು ಹೇಳಲೇಬೇಕು, ಮತ್ತು ಅದಕ್ಕೆ ಸಮಯ ನೀಡಲು ಮನುಷ್ಯ ತಯಾರಾಗಿರಬೇಕು. ಅವಚೇತನದಿಂದ ಪ್ರಾಸಂಗಿಕವಾಗಿ ಕನಸಿನಲ್ಲಿ ಚಲನೆಗಳಾಗುವುದು ಸಾಮಾನ್ಯ ಸಂಗತಿ, ಇಂತಹದರ ಮೂಲಕ ಅದರ ಇಡಿಯಾದ ಮಾಯವಾಗುವಿಕೆಯನ್ನು ಸಿದ್ಧಿಸಿಕೊಳ್ಳಲಾಗಿದೆ ಮತ್ತು ವ್ಯಾವಹಾರಿಕ ಮುಕ್ತಿಯನ್ನು ದಾಟಿ ಹೋಗಲಾಗಿದೆ.

*

**ಲೈಂಗಿಕತೆಯ ನಿಷೇಧ ಹಾಗೂ ಪರಿವರ್ತನೆ**

. . . ಆ ಸಮಸ್ಯೆಯನ್ನು ಸರಿಯಾಗಿ ಬಹಳ ಮೂರ್ತರೂಪದಲ್ಲಿ ಇರಿಸುವ ವಿಷಯಗಳಲ್ಲಿ ಒಂದು: ಒಟ್ಟಿನಲ್ಲಿ ಸ್ವಾಭಾವಿಕವೆನಿಸುವ, ಸ್ವಯಂಪ್ರೇರಣೆಯ–ದೆನಿಸುವ, ನಾನು ಹೇಳುವ ಹಾಗೆ ನ್ಯಾಯಯುತವಾದ ರೀತಿಯಲ್ಲಿ ಮನುಕುಲ ಲೈಂಗಿಕ ಪ್ರಚೋದನೆಯನ್ನು ಹೊಂದಿದೆ. ಪಶುತ್ವ ಮಾಯವಾದಾಗ ಈ ಪ್ರಚೋದನೆ ಸ್ವಾಭಾವಿಕವಾಗಿ, ಸ್ವಯಂಪ್ರೇರಣೆಯಿಂದ ಮಾಯವಾಗುತ್ತದೆ. ಬಹಳಷ್ಟು ಇತರ ಸಂಗತಿಗಳು ಮಾಯವಾಗುತ್ತವೆ, ಉದಾಹರಣೆಗೆ ಆಹಾರ ಸೇವಿಸುವ ಆವಶ್ಯಕತೆ, ನಾವು ಈಗ ನಿದ್ರೆ ಮಾಡುತ್ತಿರುವ ರೀತಿಯಲ್ಲಿರುವ ನಿದ್ರೆ, ಇತ್ಯಾದಿ. ಆದರೆ ಶ್ರೇಷ್ಠತರ ಮನುಕುಲದಲ್ಲಿ ಅತ್ಯಂತ ಸಂತೋಷ ನೀಡುವ ಪ್ರಚೋದನೆ ನಿಶ್ಚಿತವಾಗಿ ಲೈಂಗಿಕ ಚಟುವಟಿಕೆಯಾಗಿದೆ, ಅದನ್ನು ದಿವ್ಯಾನಂದ ಎಂದು ಹೇಳುವುದು ಸರಿಯಾಗದು, ಆದರೆ ಸಂತೋಷ ನೀಡುವಂತಹದು. ಆದರೆ ಆ ರೀತಿಯಲ್ಲಿ ಸೃಷ್ಟಿ ಮಾಡುವ ಆವಶ್ಯಕತೆ ಇಲ್ಲದೆ ಹೋದಾಗ ಪ್ರಕೃತಿಯ ಕಾರ್ಯಗತಿಗಳಲ್ಲಿ ಅದು ಅಸ್ತಿತ್ವದಲ್ಲಿರುವುದಕ್ಕೆ ಕಾರಣವಿರುವುದಿಲ್ಲ. ಹಾಗಾಗಿ ಜೀವನದ ಸಂತೋಷದೊಂದಿಗೆ ಸಂಬಂಧ ಹೊಂದಿದ ಕ್ಷಮತೆ ಒಂದು ಹೆಜ್ಜೆ ಮೇಲಕ್ಕೇರಿ ಹೋಗುತ್ತದೆ ಇಲ್ಲವೆ ಭಿನ್ನ ನಿರ್ದೇಶನವನ್ನು ಪಡೆಯುತ್ತದೆ. ಆದರೆ

ಪ್ರಾಚೀನಕಾಲದ ಆಧ್ಯಾತ್ಮಿಕ ಅಭೀಪ್ಸೆ ಪಡುವವರು ತಾತ್ವಿಕವಾಗಿ ಲೈಂಗಿಕ ನಿಷೇಧವನ್ನು ಹುಡುಕಿದ್ದರು, ಅದು ಅಸಂಗತ ವಿಷಯ, ಏಕೆಂದರೆ ಇದು ಈ ಹಂತವನ್ನು ದಾಟಿಹೋದವರಿಗಾಗಿ ಮಾತ್ರ ಇರಬೇಕು, ಅವರಲ್ಲಿ ಪಶುತ್ವ ಉಳಿದುಕೊಂಡಿರಬಾರದು. ಅದು ಸ್ವಾಭಾವಿಕವಾಗಿ ಕಳಚಿ ಹೋಗಬೇಕು, ಅದಕ್ಕಾಗಿ ಪ್ರಯತ್ನವಾಗಲಿ, ಹೋರಾಟವಾಗಲಿ ಇರಬಾರದು. ಅದನ್ನು ಸಂಘರ್ಷದ ಹಾಗೂ ಹೋರಾಟದ ಕೇಂದ್ರವನ್ನಾಗಿ ಮಾಡುವುದು ಹಾಸ್ಯಾಸ್ಪದವಾದದ್ದು. ಪ್ರಜ್ಞೆ ಕೇವಲ ಮನುಷ್ಯನದಾಗಿ ಉಳಿದುಕೊಳ್ಳುವುದು ನಿಂತು ಹೋದ ನಂತರ ಅದು ಬಹಳ ಸಹಜವಾಗಿ ಕಳಚಿ ಹೋಗುತ್ತದೆ. ಇಲ್ಲಿಯೂ ಕೂಡ ಸಂಕ್ರಮಣವೊಂದಿದೆ, ಅದು ಸ್ವಲ್ಪ ಮಟ್ಟಿಗೆ ಕಠಿಣವಾಗಬಹುದು. ಏಕೆಂದರೆ ಸಂಕ್ರಮಣದಲ್ಲಿರುವ ಸತ್ತೆಗಳು ಯಾವಾಗಲೂ ಅಸ್ಥಿರ ಸಮತೋಲನದಲ್ಲಿರುತ್ತಾರೆ. ಆದರೆ ಮನುಷ್ಯನ ಅಂತರಂಗದಲ್ಲಿ ಒಂದು ಬಗೆಯ ಜ್ವಾಲೆಯಿರುತ್ತದೆ ಮತ್ತು ಒಂದು ಆವಶ್ಯಕತೆ ಇರುತ್ತದೆ, ಅವು ಅದನ್ನು ನೋವಿನಿಂದ ಕೂಡಿರುವಂತೆ ಮಾಡುವುದಿಲ್ಲ – ಅದು ನೋವಿನಿಂದ ಕೂಡಿದ ಪ್ರಯತ್ನವಲ್ಲ, ಅದು ಮುಗುಳ್ನಗೆಯಿಂದ ಕೈಕೊಳ್ಳಬಹುದಾದ ಏನೋ ಒಂದು. ಈ ಸಂಕ್ರಮಣಕ್ಕೆ ತಯಾರಾಗಿರದವರ ಮೇಲೆ ಅದನ್ನು ಹೊರಿಸುವುದು ಅಸಂಗತವಾದದ್ದು.

ಅದು ಸಾಮಾನ್ಯ ಜ್ಞಾನ. ಅವರು ಮಾನವರಾಗಿರುತ್ತಾರೆ, ಆದರೆ ತಾವು ಮಾನವರಲ್ಲ ಎಂದು ನಟನೆ ಮಾಡಬಾರದು. ಕೇವಲ ಸ್ವಯಂಪ್ರೇರಣೆಯಿಂದ ಆ ಪ್ರಚೋದನೆ ನಿಮಗೆ ಅಸಾಧ್ಯವಾದಾಗ, ಅದು ನೋವು ತಂದುಕೊಡುವ ಏನೋ ಒಂದು ಎಂಬ ಭಾವನೆ ಬಂದಾಗ ಮತ್ತು ನಿಮ್ಮ ಆಳಾತಿ ಆಳದ ಆವಶ್ಯಕತೆಗೆ ವಿರುದ್ಧವಾದದ್ದು ಎಂದೆನಿಸಿದಾಗ, ಅದು ಸುಲಭವಾಗುತ್ತದೆ; ಸರಿ, ಆಗ ಬಾಹ್ಯದಲ್ಲಿ ಈ ಎಲ್ಲ ಬಂಧನಗಳನ್ನು ಕಡಿದು ಹಾಕುತ್ತೀರಿ ಮತ್ತು ಅದು ಮುಗಿದು ಹೋಗಿರುತ್ತದೆ.

**CWM, 11/27–28** **– ಶ್ರೀಮಾತೆ**

*

**ಚೈತನ್ಯದ ರೂಪ ಪರಿವರ್ತನೆ**

ಬ್ರಹ್ಮಚರ್ಯದ ಪಾಲನೆ ಮೊದಲ ಹಾಗೂ ಅತ್ಯಂತ ಅವಶ್ಯವಾದ ಷರತ್ತು, ಅದು ಅಂತರಂಗದಲ್ಲಿಯ ಶಕ್ತಿಯನ್ನು ಹೆಚ್ಚಿಸಲು ಮತ್ತು ಅದನ್ನು ಹೊಂದಿದವರು ಹಾಗೂ ಮನುಕುಲ ಇವರಿಗೆ ಲಾಭದಾಯಕವಾಗುವಂತಹ ಉಪಯೋಗಗಳತ್ತ

ಹೊರಳಿಸಲು ಸಹಾಯ ಮಾಡುತ್ತದೆ. ಎಲ್ಲ ಮಾನವ ಚೈತನ್ಯಕ್ಕೆ ಭೌತಿಕ ಆಧಾರವಿದೆ.

ಭೌತಿಕವಾದುದನ್ನು ಆಧ್ಯಾತ್ಮಿಕವಾದುದರತ್ತ ಬ್ರಹ್ಮಚರ್ಯ ಮೇಲಕ್ಕೇರಿಸುತ್ತದೆ, ಏಕೆಂದರೆ ಅವೆರಡರ ನಡುವಿನ ಭೇಟಿಯಿಂದ ಒಂದರಿಂದ ಪ್ರಾರಂಭವಾಗುವ ಚೈತನ್ಯ ಮತ್ತೊಂದನ್ನು ಉತ್ಪಾದಿಸುವಂತಹದು, ಆ ಚೈತನ್ಯದಲ್ಲಿ ಹೆಚ್ಚಳವಾಗುತ್ತದೆ ಮತ್ತು ಅದು ತನ್ನ ನೆರವೇರಿಕೆ ಕಂಡುಕೊಳ್ಳುತ್ತದೆ.

ಇದು ತತ್ವ ಮೀಮಾಂಸೆಯ ಸಿದ್ಧಾಂತ. ಚೈತನ್ಯದ ಮಾನವ ಪಾತ್ರೆಯ ಭೌತಿಕ ಹಾಗೂ ಮನೋವೈಜ್ಞಾನಿಕ ಸರಿಯಾದ ತಿಳಿವಳಿಕೆಗನುಗುಣವಾಗಿ ಈ ಅನ್ವಯ ಅವಲಂಬಿಸಿರುತ್ತದೆ. ಮೂಲಭೂತ ಭೌತಿಕದ ಏಕಾಂಶ ರೇತಸ್ಸಾಗಿರುತ್ತದೆ, ಮನುಷ್ಯನಲ್ಲಿರುವ ಶಾಖ, ಪ್ರಕಾಶ ಹಾಗೂ ವಿದ್ಯುತ್ ಇವು ತೊಡಗಿಕೊಂಡಿರುತ್ತವೆ ಮತ್ತು ಅಡಗಿರುತ್ತವೆ. ಎಲ್ಲ ಚೈತನ್ಯ ರೇತಸ್ಸಿನಲ್ಲಿ ಗುಪ್ತವಾಗಿರುತ್ತದೆ. ಈ ಚೈತನ್ಯವನ್ನು ಖರ್ಚು ಮಾಡಬಹುದು ಇಲ್ಲವೆ ರಕ್ಷಿಸಿಕೊಂಡು ಬರಬಹುದು. ಚೈತನ್ಯ ತನ್ನನ್ನು ಒರಟು ರೂಪದಲ್ಲಿ ಇಲ್ಲವೆ ಉದಾತ್ತವಾದ ಸೂಕ್ಷ್ಮತರ ರೂಪದಲ್ಲಿ ಎಲ್ಲ ಭಾವೋದ್ರೇಕ, ಕಾಮ, ಆಸೆ ಇವುಗಳಲ್ಲಿ ದೇಹದ ಹೊರಗೆ ಸುರಿಯುವುದರ ಮೂಲಕ ಹಾಳಾಗುತ್ತದೆ. ಕ್ರಿಯೆಯಲ್ಲಿಯ ಅನೈತಿಕತೆ ಅದನ್ನು ಒರಟು ರೂಪದಲ್ಲಿ, ಯೋಚನೆಯಲ್ಲಿಯ ಅನೈತಿಕತೆ ಅದನ್ನು ಸೂಕ್ಷ್ಮ ರೂಪದಲ್ಲಿ ಹೊರಗೆ ಹಾಕುತ್ತದೆ. ಎರಡೂ ಸಂದರ್ಭಗಳಲ್ಲಿ ಅಪವ್ಯಯವಿರುತ್ತದೆ ಮತ್ತು ಶೀಲವಿಲ್ಲದಿರುವಿಕೆ ಮನಸ್ಸಿನದು, ಮಾತಿನದು ಹಾಗೂ ದೇಹದ್ದಾಗಿರುತ್ತದೆ. ಇನ್ನೊಂದೆಡೆಗೆ ಎಲ್ಲ ಸ್ವ–ನಿಯಂತ್ರಣ ರೇತಸ್ಸಿನಲ್ಲಿರುವ ಚೈತನ್ಯವನ್ನು ರಕ್ಷಿಸುತ್ತದೆ ಮತ್ತು ರಕ್ಷಿಸುವಿಕೆ ಯಾವಾಗಲೂ ತನ್ನೊಡನೆ ಹೆಚ್ಚಾಗುವಿಕೆಯನ್ನು ತರುತ್ತದೆ. ಆದರೆ ಭೌತಿಕ ದೇಹದ ಆವಶ್ಯಕತೆಗಳು ಸೀಮಿತವಾಗಿರುತ್ತವೆ ಮತ್ತು ಚೈತನ್ಯದಲ್ಲಿಯ ಹೆಚ್ಚಳ ಮಿಕ್ಕದ್ದನ್ನು ಸೃಷ್ಟಿಸಬೇಕು, ಅದು ಭೌತಿಕವಲ್ಲದ ಬೇರೆ ಯಾವುದೋ ಉಪಯೋಗದತ್ತ ತನ್ನನ್ನು ಹೊರಳಿಸಬೇಕು. ಪ್ರಾಚೀನ ಕಾಲದ ಸಿದ್ಧಾಂತದ ಪ್ರಕಾರ ರೇತಸ್ ಜಲವಾಗಿರುತ್ತದೆ, ಅದು ಪ್ರಕಾಶದಿಂದ, ಶಾಖದಿಂದ ಮತ್ತು ವಿದ್ಯುತ್ತಿನಿಂದ ತುಂಬಿಕೊಂಡಿರುತ್ತದೆ. ಒಂದೇ ಶಬ್ದದಲ್ಲಿ ಹೇಳುವುದಾದರೆ ಅದು ತೇಜಸ್ಸಿನ ಜಲವಾಗಿರುತ್ತದೆ. ರೇತಸ್ಸಿನಲ್ಲಿಯ ಹೆಚ್ಚಳ ಮೊದಲು ಶಾಖವಾಗುವತ್ತ ಇಲ್ಲವೆ ತಪಸ್ ಆಗುವತ್ತ ಹೊರಳುತ್ತದೆ, ಅದು ಇಡೀ ವ್ಯವಸ್ಥೆಯನ್ನು ಉತ್ತೇಜಿತವಾದದ್ದನ್ನಾಗಿ ಮಾಡುತ್ತದೆ ಮತ್ತು ಈ

ಕಾರಣಕ್ಕಾಗಿ ಸ್ವ–ನಿಯಂತ್ರಣದ ಎಲ್ಲ ರೂಪಗಳು ಹಾಗೂ ವೈರಾಗ್ಯ ಇವುಗಳನ್ನು ತಪಸ್ ಇಲ್ಲವೆ ತಪಸ್ಯಾ ಎಂದು ಕರೆಯಲಾಗಿದೆ, ಏಕೆಂದರೆ ಅವು ಶಾಖ ಇಲ್ಲವೆ ಉತ್ತೇಜನವನ್ನು ಉತ್ಪಾದಿಸುತ್ತವೆ, ಅದು ಸಾಮರ್ಥ್ಯಪೂರ್ಣ ಕ್ರಿಯೆ ಮತ್ತು ಯಶಸ್ಸಿನ ಮೂಲವಾಗಿರುತ್ತದೆ, ಎರಡನೆಯದಾಗಿ ಅದು ಸ್ವತಃ ತೇಜಸ್ಸೇ ಆಗಿರುತ್ತದೆ, ಪ್ರಕಾಶ ಹಾಗೂ ಚೈತನ್ಯವಾಗಿರುತ್ತದೆ, ಅದು ಎಲ್ಲ ಜ್ಞಾನದ ಮೂಲದಲ್ಲಿರುತ್ತದೆ. ಮೂರನೆಯದಾಗಿ ಅದು ವಿದ್ಯುತ್ತಾಗುವತ್ತ ಹೊರಳುತ್ತದೆ, ಅದು ಭೌತಿಕವಾದ ಇಲ್ಲವೆ ಬೌದ್ಧಿಕವಾದ ಎಲ್ಲ ಶಕ್ತಿಯುತ ಕ್ರಿಯೆಯ ಆಧಾರದಲ್ಲಿರುತ್ತದೆ. ವಿದ್ಯುತ್ತಿನಲ್ಲಿ ಮತ್ತೆ ಓಜಸ್ಸು ಇಲ್ಲವೆ ಪ್ರಾಣಶಕ್ತಿ ತೊಡಗಿ–ಕೊಂಡಿರುತ್ತದೆ, ಆಕಾಶದ್ರವ್ಯ (ether) ದಿಂದ ಆದಿಮೂಲ ಶಕ್ತಿ ಹೊರಬರುತ್ತದೆ. ಜಲದಿಂದ ರೇತಸ್ಸ್ ಸಂಸ್ಕರಣ ಹೊಂದಿ ತಪಸ್, ತೇಜಸ್ಸ್ ಮತ್ತು ವಿದ್ಯುತ್ತಾಗುತ್ತದೆ ಮತ್ತು ವಿದ್ಯುತ್ತಿನಿಂದ ಓಜಸ್ಸಾಗುತ್ತದೆ, ದೇಹ–ವ್ಯವಸ್ಥೆಯನ್ನು ಭೌತಿಕ ಬಲ, ಚೈತನ್ಯ ಹಾಗೂ ಮಿದುಳಿನ ಸಾಮರ್ಥ್ಯದಿಂದ ತುಂಬುತ್ತದೆ ಮತ್ತು ಅದರ ಕೊನೆಯ ರೂಪದಲ್ಲಿ ಓಜಸ್ಸು ಮಿದುಳಿನತ್ತ ಏರಿ ಹೋಗಿ ಅದಕ್ಕೆ ಆ ಆದಿಮೂಲ ಚೈತನ್ಯದ ಬಗ್ಗೆ ತಿಳಿಸಿಕೊಡುತ್ತದೆ, ಆ ಚೈತನ್ಯ ಭೌತದ್ರವ್ಯದ ಅತ್ಯಂತ ಸಂಸ್ಕರಣ ಹೊಂದಿದ ರೂಪ ಮತ್ತು ಅದು ಆತ್ಮಕ್ಕೆ ಬಹಳ ಹತ್ತಿರವಾಗಿರುತ್ತದೆ. ಓಜಸ್ಸು ಆಧ್ಯಾತ್ಮಿಕ ಶಕ್ತಿಯನ್ನು ಇಲ್ಲವೆ ವೀರ್ಯವನ್ನು ಸೃಷ್ಟಿಸುತ್ತದೆ, ಅದರ ಮೂಲಕ ಮನುಷ್ಯ ಆಧ್ಯಾತ್ಮಿಕ ಜ್ಞಾನ, ಆಧ್ಯಾತ್ಮಿಕ ಪ್ರೇಮ ಮತ್ತು ನಂಬಿಕೆ, ಆಧ್ಯಾತ್ಮಿಕ ಬಲ ಇವುಗಳನ್ನು ಸಿದ್ಧಿಸಿಕೊಳ್ಳುತ್ತಾನೆ. ಇದರಿಂದ ತಿಳಿದು ಬರುವುದೇನೆಂದರೆ ಬ್ರಹ್ಮಚರ್ಯದಿಂದ ತಪಸ್ಸಿನ, ತೇಜಸ್ಸಿನ, ವಿದ್ಯುತ್ತಿನ ಮತ್ತು ಓಜಸ್ಸಿನ ಸಂಗ್ರಹವನ್ನು ಹೆಚ್ಚಿಸಿದ ಹಾಗೆ ನಮ್ಮನ್ನು ದೇಹದ, ಹೃದಯದ ಮನಸ್ಸಿನ ಹಾಗೂ ಆತ್ಮದ ಕಾರ್ಯಗಳಿಗಾಗಿ ಅತ್ಯಂತ ಹೆಚ್ಚಿನ ಚೈತನ್ಯದಿಂದ ತುಂಬಿಕೊಳ್ಳುತ್ತೇವೆ.

**CWSA, 1/372–73** **– ಶ್ರೀ ಅರವಿಂದರು**

*

**ಲೈಂಗಿಕ ಚೈತನ್ಯಗಳನ್ನು ಪ್ರಗತಿಗೆ ಅವಶ್ಯವಾಗಿರುವ ಶಕ್ತಿಗಳನ್ನಾಗಿ ರೂಪಾಂತರ ಪಡಿಸುವುದು**

**ಪ್ರಶ್ನೆ :** *ಪುಸ್ತಕದಲ್ಲಿರುವ ಈ ಪದಚ್ಛೇದದ ಅರ್ಥ ನನಗೆ ತಿಳಿಯಲಿಲ್ಲ: "ಹಾಗಾಗಿ ಬ್ರಹ್ಮಚರ್ಯ ಪ್ರಗತಿಗಾಗಿ ಅಭೀಪ್ಸೆಪಡುವವರಿಗೆಲ್ಲ ನಿಬಂಧನೆಯಾಗಿರುತ್ತದೆ. ಆದರೆ*

*ವಿಶೇಷವಾಗಿ ತಮ್ಮನ್ನು ಅತಿಮಾನಸದ ಪ್ರಕಟಣೆಗಾಗಿ ತಯಾರು ಮಾಡಿಕೊಳ್ಳಬೇಕು ಎನ್ನುವವರಿಗೆ ಈ ಸ್ಥಾನದಲ್ಲಿ ಇಡಿಯಾದ ಇಂದ್ರಿಯ ನಿಗ್ರಹವಿರಬೇಕು, ಅದನ್ನು ಒತ್ತಾಯದಿಂದ, ದಮನದಿಂದ ಸಿದ್ಧಿಸಿಕೊಳ್ಳಬಾರದು, ಆದರೆ ಒಂದು ಬಗೆಯ ಆಂತರಿಕ ರಸವಿದ್ಯೆಯ ಮೂಲಕ ಕೈಕೊಳ್ಳಬೇಕು, ಪರಿಣಾಮವಾಗಿ ಸಂತಾನ ಪಡೆಯುವ ಸಾಮಾನ್ಯ ಕ್ರಿಯೆಯ ಚೈತನ್ಯಗಳು ಪ್ರಗತಿಗಾಗಿರುವ ಹಾಗೂ ಸಮಗ್ರ ಪರಿವರ್ತನೆಗಾಗಿರುವ ಚೈತನ್ಯಗಳಾಗಿ ರೂಪಾಂತರಗೊಳ್ಳುತ್ತವೆ."*

**ಶ್ರೀಮಾತೆ :** ಭಾರತದ ಯೌಗಿಕ ಶಿಸ್ತುಪಾಲನೆಗಳಲ್ಲಿ ಇದು ಹೆಚ್ಚು ಪರಿಚಿತವಾಗಿದೆ. ಮನುಷ್ಯ ತನ್ನ ಚೈತನ್ಯಗಳ ಬಗ್ಗೆ ಅರಿವು ತಂದುಕೊಳ್ಳಲು ಮತ್ತು ಅವುಗಳ ಮೇಲೆ ಪ್ರಭುತ್ವ ಪಡೆಯಲು ಪ್ರಾರಂಭಿಸಿದಾಗ ಆ ಶಿಸ್ತುಪಾಲನೆಗಳನ್ನು ಅನುಸರಿಸಬೇಕು. ಭಿನ್ನ ಶಕ್ತಿ ಕೇಂದ್ರಗಳ ಬಗ್ಗೆ ನಿಮಗೆ ತಿಳಿದಿದೆಯಲ್ಲವೆ? ಅವುಗಳಲ್ಲಿ ಚೈತನ್ಯಗಳು ಕೇಂದ್ರೀಕರಿಸುತ್ತವೆ. ಸಾಮಾನ್ಯವಾಗಿ ಅವುಗಳ ಸಂಖ್ಯೆ ಐದು ಎಂದು ಹೇಳಲಾಗಿದೆ, ಆದರೆ ನಿಜವಾಗಿ ಏಳು ಇಲ್ಲವೆ ಹನ್ನೊಂದು, ಹನ್ನೆರಡೂ ಕೂಡ ಆಗಿರಬಹುದು. ಅದೇನೇ ಇರಲಿ, ಇವು ಚೈತನ್ಯವನ್ನು ಸಂಗ್ರಹಿಸಿ ಇಡುವ ಕೇಂದ್ರಗಳು, ಕೆಲವೊಂದು ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಹೀಗೆ ಲೈಂಗಿಕ ಕೇಂದ್ರದಲ್ಲಿ ಚೈತನ್ಯದ ಒಂದು ಸಂಗ್ರಹವಿದೆ, ಅದು ಚೈತನ್ಯದ ಭವ್ಯ ಸಂಗ್ರಹ. ಈ ಚೈತನ್ಯಗಳ ಮೇಲೆ ನಿಯಂತ್ರಣ–ವಿದ್ದವರು ಅವುಗಳ ಮೇಲೆ ಪ್ರಭುತ್ವ ಪಡೆಯುವುದರಲ್ಲಿ ಯಶಸ್ವಿಯಾಗುತ್ತಾರೆ, ಮತ್ತು ಅವುಗಳನ್ನು ಮೇಲಕ್ಕೆತ್ತಿ ತರುತ್ತಾರೆ ಮತ್ತು ಅವುಗಳನ್ನು ಇಲ್ಲಿ (ಶ್ರೀಮಾತೆಯವರು ಎದೆಯ ಮಧ್ಯಭಾಗವನ್ನು ತೋರಿಸುತ್ತಾರೆ). ಇಲ್ಲಿ ಪ್ರಗತಿಯ ಚೈತನ್ಯಗಳ ಕೇಂದ್ರವಿದೆ. ಇದನ್ನು ಅಗ್ನಿಯ ಸ್ಥಾನವೆಂದು ಕರೆಯುತ್ತಾರೆ, ಆದರೆ ಇಲ್ಲಿರುವುದು ಪ್ರಗತಿಗಾಗಿ ಇರುವ ಚೈತನ್ಯಗಳು ಹಾಗೂ ಪ್ರಗತಿಗಾಗಿ ಸಂಕಲ್ಪ. ಹೀಗೆ ಲೈಂಗಿಕ ಕೇಂದ್ರದಲ್ಲಿ ಕೇಂದ್ರೀಕರಿಸಿದ ಚೈತನ್ಯಗಳನ್ನು ಮೇಲಕ್ಕೆಳೆದು ಇಲ್ಲಿ ಇರಿಸಲಾಗಿರುತ್ತದೆ. ಅವು ಅಸಾಧಾರಣ ರೀತಿಯಲ್ಲಿ ಹೆಚ್ಚಾಗುತ್ತವೆ, ಹಾಗಾಗಿ ಲೈಂಗಿಕ ಕೇಂದ್ರ ಪರಿಪೂರ್ಣವಾಗಿ ಸ್ಥಿರವಾಗುತ್ತದೆ, ಶಾಂತಿಯಿಂದಿರುತ್ತದೆ ಹಾಗೂ ನಿಶ್ಚಲವಾಗಿರುತ್ತದೆ.

ಈ ಚೈತನ್ಯಗಳನ್ನು ನಿಯಂತ್ರಿಸುವ ಸಾಮಾನ್ಯ ಆಚರಣೆ ಬೆನ್ನೆಲುಬಿನ ಕೆಳಗೆ ಆಧಾರದಲ್ಲಿ ಸುತ್ತಿಕೊಂಡಿರುವ ಕುಂಡಲಿನಿಯನ್ನು ಜಾಗ್ರತಗೊಳಿಸುವುದಾಗಿದೆ ಮತ್ತು ಆ ಚೈತನ್ಯಗಳನ್ನು ಬೆನ್ನುಹುರಿಯ ಮೂಲಕ ಭಿನ್ನ ಕೇಂದ್ರಗಳತ್ತ ಮೇಲಕ್ಕೆತ್ತಿ ಒಯ್ಯುವುದಾಗಿದೆ, ಆ ಕೇಂದ್ರಗಳನ್ನು ಜಾಗ್ರತಗೊಳಿಸುವುದಾಗಿದೆ, ತೆರೆದಿರಿಸುವು–

ದಾಗಿದೆ ಮತ್ತು ಅವು ಒಂದರ ನಂತರ ಒಂದರಂತೆ ಚಲನೆಯಲ್ಲಿರುವಂತೆ ಶಿರದವರೆಗೆ ಹೋಗುವಂತೆ ಮಾಡುವುದಾಗಿದೆ, ಮತ್ತು ಅಲ್ಲಿಂದ ಹೊರಗೆ ಹೋಗುವಂತೆ ಮಾಡುವುದಾಗಿದೆ. ಮತ್ತು ಇದನ್ನು ಕೈಕೊಳ್ಳುವುದರಲ್ಲಿ ಮನುಷ್ಯ ಯಶಸ್ವಿಯಾದಾಗ (ಇದು ಮೊದಲ ಆಚರಣೆ) ಕುಂಡಲಿನಿ ತನ್ನ ಸುತ್ತನ್ನು ಬಿಡಿಸಿಕೊಂಡಾಗ ನಂತರದ ಕಾರ್ಯವೆಂದರೆ ಅದರ ಮೇಲೆ ಪ್ರಭುತ್ವ ಪಡೆಯಬೇಕು, ಅದಕ್ಕೆ ಮಾರ್ಗದರ್ಶನ ಮಾಡಬೇಕು, ಅಭಿವೃದ್ಧಿಪಡಿಸಬೇಕು, ಎಲ್ಲ ಕೇಂದ್ರಗಳತ್ತ ಮಾರ್ಗದರ್ಶನ ಮಾಡಬೇಕು, ಅವುಗಳನ್ನು ಅಭಿವೃದ್ಧಿಪಡಿಸಬೇಕು, ಈ ಎಲ್ಲ ಕೇಂದ್ರಗಳನ್ನು ಜಾಗ್ರತಗೊಳಿಸಬೇಕು. ಒಮ್ಮೆ ಇದನ್ನು ಕೈಕೊಂಡಾಗ ಮನುಷ್ಯ ಅದರ ಕಾರ್ಯಗತಿಯ ಪ್ರಭುವಾಗಿರುತ್ತಾನೆ, ಕಾರ್ಯಗತಿಯ ಮೇಲೆ ಪ್ರಭುತ್ವ ಪಡೆದ ನಂತರ ಚೈತನ್ಯಗಳನ್ನು ಅವು ಉಪಯೋಗವಾಗದ ಸ್ಥಳದಲ್ಲಿ ಬಿಟ್ಟುಕೊಡುವುದರ ಬದಲಾಗಿ ಅವುಗಳನ್ನು ಮೇಲಕ್ಕೆಳೆದು ಉಪಯೋಗವಾಗುವ ಸ್ಥಳದಲ್ಲಿ ಇರಿಸಬೆಕು, ಮತ್ತು ಈ ರೀತಿಯಲ್ಲಿ ಅವುಗಳನ್ನು ಪರಿವರ್ತನೆಗಾಗಿ ಉಪಯೋಗಿಸಬೇಕು.

ಇದೆಲ್ಲ ಜ್ಞಾನೋದಯ ಪಡೆದು, ನಿಷ್ಠೆಯಿಂದ ಹಾಗೂ ಬಹಳ ತಾಳ್ಮೆಯಿಂದ ಕೈಕೊಂಡ ಆಚರಣೆಯ ಪರಿಣಾಮವಾಗಿರುತ್ತದೆ, ಅದನ್ನು ಹೇಗೋ ಮಾಡಲಾಗುವುದಿಲ್ಲ. ಬೇರೆ ವಿಷಯಗಳನ್ನು ಕುರಿತು ಯೋಚಿಸುತ್ತ, ಅವುಗಳೊಡನೆ ಆಟವಾಡುತ್ತ ಮಾಡಲಾಗದು. ಇವು ಶಿಸ್ತುಪಾಲನೆಗಳು. ಸ್ವಾಭಾವಿಕವಾಗಿ ಒಮ್ಮೆ ಅದರ ಕಾರ್ಯಗತಿ ಕುರಿತು ಮನುಷ್ಯ ಪ್ರಭುತ್ವ ಪಡೆದಾಗ ಅದು ಬಹಳ ಸ್ವಾರಸ್ಯಕರವಾಗುತ್ತದೆ. ಆದರೆ ಅವಶ್ಯವಾದದ್ದನ್ನು ಕೈಕೊಳ್ಳದೆ ಕ್ಷಣ ಮಾತ್ರದಲ್ಲಿ ಮಾಡಲಾಗುವುದಿಲ್ಲ.

**CWM, 6/76–77** **– ಶ್ರೀಮಾತೆ**

*

**ಲೈಂಗಿಕ ಚೈತನ್ಯದ ಪರಿವರ್ತನೆ**

ಅದನ್ನು (ರೇತಸ್ಸಿನ ಚೈತನ್ಯವನ್ನು ಓಜಸ್ಸನ್ನಾಗಿ ಬದಲು ಮಾಡುವುದು) ಒಂದು ವಿಧಾನದಿಂದ ಮಾಡಬೇಕಾದರೆ ಅದನ್ನು ತಪಸ್ಸಿನ (ಮನಸ್ಸು, ಮಾತು, ಕ್ರಿಯೆ ಇವುಗಳ ಮೇಲೆ ಸ್ವ–ನಿಯಂತ್ರಣ) ಮೂಲಕ ಮತ್ತು ಸಂಕಲ್ಪದ ಮೂಲಕ ರೇತಸ್ಸಿನ ಚೈತನ್ಯವನ್ನು ಮೇಲ್ಗಡೆಗೆ ಎಳೆಯುವುದರ ಮೂಲಕ ಮಾಡ–ಬೇಕಾಗುವುದು. ಆದರೆ ಅದನ್ನು ಹೆಚ್ಚು ಒಳ್ಳೆಯ ರೀತಿಯಲ್ಲಿ ಕೈಕೊಳ್ಳಲು ಲೈಂಗಿಕ ಕೇಂದ್ರದ ಮೇಲೆ ದೈವೀ ಶಕ್ತಿಯ ಅವರೋಹಣ ಮತ್ತು ಅದರ ಪರಿಣಾಮವಾಗಿ

ಪರಿವರ್ತನೆಯಾಗುವಂತೆ ಮಾಡಬೇಕು, ಈ ಯೋಗದಲ್ಲಿ ಎಲ್ಲ ಇತರ ವಿಷಯಗಳಿಗೆ ಇದೇ ಅನ್ವಯವಾಗುತ್ತದೆ.

**CWSA, 31/508** **– ಶ್ರೀ ಅರವಿಂದರು**

*



(ಮಾನವ ಸಂಬಂಧದ) ಈ ತೊಂದರೆಗಳು ಒಂದಿಲ್ಲೊಂದು ರೀತಿಯಲ್ಲಿ ಎಲ್ಲರ ಭಾವನೆಗೆ ಬಂದಿರುತ್ತವೆ – ಆದರೆ ಅವುಗಳ ಮೂಲ ಲೈಂಗಿಕತೆಗೆ ಸಂಬಂಧಿಸಿದುದಾದಾಗ ಅವು ಬಲವತ್ತರವಾದ ರೂಪ ತಾಳುತ್ತವೆ. ಅವು ಮರಳಿ ಹಟಮಾರಿತನದೊಂದಿಗೆ ಬರುವುದಕ್ಕೆ ಭೌತಿಕದ ಮಬ್ಬುತನ ಕಾರಣವಾಗಿರುತ್ತದೆ, ಅದು ಯಾವಾಗಲೂ ಸ್ವಭಾವದ ಹಳೆಯ ರೂಢಿಗೆ ಪ್ರತಿಸ್ಪಂದಿಸುತ್ತದೆ (ಮನಸ್ಸು ಅದನ್ನು ನಿರಾಕರಿಸಿದಾಗಲೂ) ಮತ್ತು ಈ ಮಬ್ಬುತನ ಹಾಗೂ ರೂಢಿಗೆ ಅಧೀನತೆ ಇವುಗಳಿರುವುದರ ಅನುಕೂಲತೆಯನ್ನು ಆ ತೊಂದರೆ ಮರುಕಳಿಸುವಂತೆ ಮಾಡಲು ವಿರೋಧೀ ಪ್ರಾಣಿಕ ಶಕ್ತಿಗಳು ಉಪಯೋಗಿಸುತ್ತವೆ.

**CWSA, 31/519** **– ಶ್ರೀ ಅರವಿಂದರು**

*

## ಬ್ರಹ್ಮಚರ್ಯದ ಪಾಲನೆ

### ನಿಗ್ರಹ ಹಾಗೂ ಸಂಯಮ

ನಿಗ್ರಹ ಹಾಗೂ ಸಂಯಮ ಇವುಗಳ ನಡುವಿರುವ ಭೇದವೆಂದರೆ ಮೊದಲನೆಯದರ ವಿಧಾನದಲ್ಲಿ ಕೆಳಗೆ ಇಳಿಸಿ ತರಲು ಹಿಂಸಾತ್ಮಕ ಹೋರಾಟವಿರುತ್ತದೆ, ಒತ್ತಾಯಪಡಿಸುವುದಿರುತ್ತದೆ, ಸಾಧ್ಯವಾದರೆ ಪ್ರವೃತ್ತಿಯನ್ನು ತುಳಿದು ಹಾಕುವುದಿರುತ್ತದೆ,

ಆದರೆ ಅದರ ನೈಜತೆಯನ್ನು ಪ್ರಶ್ನಿಸುವಂತಿರುವುದಿಲ್ಲ, ಆದರೆ ಎರಡನೆಯ ವಿಧಾನದಲ್ಲಿ ಅದನ್ನು ಮೃತ ಇಲ್ಲವೆ ಮೃತವಾಗಲಿರುವ ಶಕ್ತಿ ಎಂದು ಆಲೋಚಿಸಲಾಗುತ್ತದೆ, ಅದು ಪ್ರಾಸಂಗಿಕವಾಗಿ ಜುಗುಪ್ಸೆಯೊಂದಿಗೆ ಮರಳಿ ಬರುತ್ತದೆ, ನಂತರ ತಾಳ್ಮೆ ಕಳೆದುಕೊಳ್ಳುವಿಕೆ ಇರುತ್ತದೆ, ಕೊನೆಗೆ ಅದು ಕೇವಲ ದೆವ್ವ ಎನ್ನುವ ರೀತಿಯಲ್ಲಿ ಉದಾಸೀನತೆಯಿಂದ ಅದನ್ನು ನೋಡಲಾಗುತ್ತದೆ, ಮೊದಲು ನೈಜವಾಗಿದ್ದು ಈಗ ಮಹತ್ವ ಕಳೆದುಕೊಂಡ ಪ್ರತಿಧ್ವನಿಯೊಂದರ ಕುರುಹು ಇಲ್ಲವೆ ಮಸುಕಾದ ಸ್ಥಿತಿ ಎಂದು ಅದನ್ನು ನೋಡಲಾಗುತ್ತದೆ. ಹೀಗೆ ಮರಳಿ ಬರುವುದನ್ನು, ಬಯಸಲು ಯೋಗ್ಯವಾಗಿರದ ಮತ್ತು ಮಾಯವಾಗುತ್ತಿರುವ ಮೊತ್ತವನ್ನು ತೊಡೆದು ಹಾಕುವುದು ಪ್ರಕೃತಿಯ ವಿಧಾನದ ಒಂದು ಭಾಗವಾಗಿರುತ್ತದೆ.

ಶಕ್ತಿ, ಗುಣಲಕ್ಷಣ ಇಲ್ಲವೆ ಪ್ರವೃತ್ತಿ ಇವುಗಳ ಬಾಲ್ಯದಲ್ಲಿ ಇಲ್ಲವೆ ಹುರುಪಿನಲ್ಲಿ ಅವುಗಳಿಗೆ ಸಲ್ಲತಕ್ಕ ಸಂತೋಷ ಹಾಗೂ ಪೂರ್ತಿ ಚಟುವಟಿಕೆ ಇರುವುದರ ಮೊದಲು ಸಂಯಮ ಕಾಲೋಚಿತವಾದದ್ದಲ್ಲ. ಒಮ್ಮೆ ಒಂದು ವಿಷಯ ಜನ್ಮ ತಾಳಿದಾಗ ಅದರ ತಾರುಣ್ಯ, ಬೆಳವಣಿಗೆ, ಸಂತೋಷಪಡುವಿಕೆ, ಜೀವನ, ಕೊನೆಗೆ ಕ್ಷೀಣವಾಗುವಿಕೆ ಮತ್ತು ಮೃತ್ಯುವಿರಬೇಕು, ಪ್ರಕೃತಿ ತನ್ನ ಸೃಷ್ಟಿಗೆ ರಭಸವನ್ನಿತ್ತಾಗ, ಅದರ ವೇಗ ಸ್ವಾಭಾವಿಕವಾಗಿ ಬರಿದು ಮಾಡುವುದರ ಮೂಲಕ ಖರ್ಚಾಗಲಿ ಎಂದು ಒತ್ತಾಯಪಡಿಸುತ್ತದೆ. ಅದು ನಿಂತುಹೋಗುವ ಮೊದಲು, ಶಕ್ತಿ ಉಪಯೋಗಿಸಿ ಬೆಳವಣಿಗೆಯನ್ನು ಇಲ್ಲವೆ ವೇಗವನ್ನು ಅಕಾಲಿಕವಾಗಿ ಬಂಧನದಲ್ಲಿರಿಸುವುದು ನಿಗ್ರಹ, ಅದು ಕಾಲವೊಂದರಲ್ಲಿ ಪರಿಣಾಮಕಾರಿಯಾಗಬಹುದು, ಶಾಶ್ವತವಾಗಿ ಅಲ್ಲ. ಎಲ್ಲ ವಿಷಯಗಳು ಅವುಗಳ ಸ್ವಭಾವದ ಆಳಿಕೆಗೆ ಒಳಗಾಗಿರುತ್ತವೆ, ಅವುಗಳ ಸ್ವಭಾವಕ್ಕೆ ಮರಳಿ ಹೋಗುತ್ತವೆ, ಅವುಗಳ ನಿಗ್ರಹ ಫಲಪ್ರದವಾಗುವುದಿಲ್ಲ. ಆಗ ಸಂಭವಿಸು–ವುದೇನೆಂದರೆ ಸಮಯೋಚಿತವಾಗಿರದೆ ಇದ್ದಾಗ ಹಿಂಸೆಯಿಂದ ಹನನವಾದದ್ದು ನಿಜವಾಗಿ ಮೃತವಾಗಿರುವುದಿಲ್ಲ. ಅಷ್ಟೇ ಅಲ್ಲ. ಅದನ್ನು ಕಳಿಸಿಕೊಟ್ಟ ಪ್ರಕೃತಿಯಲ್ಲಿ ಕೆಲಕಾಲದವರೆಗೆ ಹಿಂದೆ ಸರಿದಿರುತ್ತದೆ, ಭವ್ಯ ಶಕ್ತಿಯನ್ನು ಒಟ್ಟುಗೂಡಿಸುತ್ತದೆ, ಅಸಾಧಾರಣ ಹಿಂಸೆಯಿಂದ ಮರಳಿ ಬರುತ್ತದೆ, ಅದಕ್ಕೆ ನಿರಾಕರಿಸಲಾಗಿದ್ದ ಸಂತೋಷ ಪಡುವಿಕೆಗಾಗಿರುವ ಹಕ್ಕನ್ನು ಲೂಟಿ ಮಾಡುತ್ತದೆ: ನಾವು ಯೋಗದ ಮಾರ್ಗದಲ್ಲಿ ಪ್ರಥಮ ಹೆಜ್ಜೆ ಇರಿಸಿದಾಗ ನಾವಿದನ್ನು ನಮ್ಮ ಅನಿಷ್ಟ ಸಂಸ್ಕಾರಗಳನ್ನು ಸಹಯೋಗಗಳನ್ನು ತೊಡೆದು ಹಾಕುವ ಪ್ರಯತ್ನದಲ್ಲಿ ಕಾಣುತ್ತೇವೆ ಮತ್ತು ಅದನ್ನು

ಸ್ವ–ನಿಯಂತ್ರಣ ಎಂದು ಕರೆಯುತ್ತೇವೆ, ಆದರೆ ಅಂತಿಮವಾಗಿ ಅತೃಪ್ತಿಗೊಳಗಾದ ಪ್ರಕೃತಿ ನಮ್ಮನ್ನು ಹಿಡಿದುಕೊಳ್ಳುತ್ತದೆ ಮತ್ತು ಭಾವೋದ್ರೇಕ ಅನಿರೀಕ್ಷಿತ ಕ್ಷಣದಲ್ಲಿ ಆಶ್ಚರ್ಯವನ್ನುಂಟು ಮಾಡುವ ಶಕ್ತಿಯೊಂದಿಗೆ ಮರಳಿ ಬರುತ್ತದೆ.

**CWSA, 13/33–34** **– ಶ್ರೀ ಅರವಿಂದರು**

*

**ಗುಲಾಮಗಿರಿಗೆ ಒಳಪಡಿಸುವ ಭಾವೋದ್ರೇಕವನ್ನು ತೊಡೆದು ಹಾಕುವ ಎರಡು ರೀತಿಗಳು**

ನಮ್ಮನ್ನು ಗುಲಾಮಗಿರಿಗೆ ಅರಸುತ್ತಿರುವ ಭಾವೋದ್ರೇಕದ ಮೇಲೆ ಪರಿಣಾಮಕಾರಿಯಾಗಿ ಜಯ ಸಾಧಿಸಲು ಎರಡು ಮಾರ್ಗಗಳಿವೆ. ಒಂದು ಅದು ಮೇಲೆದ್ದು ಬಂದಾಗ ಅದರ ಸ್ಥಾನದಲ್ಲಿ ಅದಕ್ಕೆ ವಿರುದ್ಧವಾದುದನ್ನು ಇರಿಸುವುದು, ಬದಲಿ ಬಳಕೆ. ಕ್ರೋಧವನ್ನು ಕ್ಷಮಾಗುಣ, ಪ್ರೇಮ, ಹಾಗೂ ಸೈರಿಸಿಕೊಳ್ಳುವಿಕೆ ಇವುಗಳ ಮೂಲಕ, ಕಾಮವನ್ನು ಪರಿಶುದ್ಧತೆಯನ್ನು ಕುರಿತು ಧ್ಯಾನ ಮಾಡುವುದರ ಮೂಲಕ, ಗರ್ವವನ್ನು ವಿನಮ್ರತೆ ಹಾಗೂ ನಮ್ಮ ದೋಷಗಳನ್ನು ಕುರಿತು ಯೋಚನೆಯ ಮೂಲಕ ಇಲ್ಲವೆ ನಮ್ಮಲ್ಲಿ ಏನೂ ಇಲ್ಲದ ಭಾವನೆಯ ಮೂಲಕ ಜಯಿಸಬೇಕು. ಇದು ರಾಜಯೋಗದ ವಿಧಾನ, ಆದರೆ ಅದು ಕಠಿಣವಾದದ್ದು, ನಿಧಾನಗತಿಯದು, ನಿಶ್ಚಿತ ಪರಿಣಾಮ ಕೊಡದೆ ಇರುವಂತಹ ವಿಧಾನ; ಏಕೆಂದರೆ ಪ್ರಾಚೀನ ಕಾಲದ ಸಂಪ್ರದಾಯಗಳು ಹಾಗೂ ಆಧುನಿಕ ಅನುಭವಗಳು ತೋರಿಸಿಕೊಡುವುದೇನೆಂದರೆ ಬಹಳ ವರ್ಷಗಳ ಕಾಲದ ಆಚರಣೆಯಿಂದ ಸಿದ್ಧಿಸಿಕೊಂಡ, ಎಲ್ಲ ಕಾಲಕ್ಕೂ ಅಧೀನದಲ್ಲಿದೆ ಎಂದುಕೊಂಡ ಅತ್ಯುಚ್ಚ ಸ್ವಪ್ರಭುತ್ವವಿದ್ದ ಜನರು ಎಂದೆಂದಿಗೂ ಮೃತವಾಗಿದೆ ಎಂದುಕೊಂಡದ್ದು ಹಠಾತ್ತನೆ ಮರಳಿ ಬಂದು ಅವರಿಗೆ ಆಶ್ಚರ್ಯವನ್ನುಂಟು ಮಾಡುತ್ತದೆ. ಆದಾಗ್ಯೂ ಈ ಬದಲು ಮಾಡುವಿಕೆ ನಿಧಾನಗತಿಯದಾದರೂ ಸಾಮಾನ್ಯವಾಗಿ ಅನುಸರಿಸಲಾಗುವ ಪ್ರಕೃತಿಯ ವಿಧಾನಗಳಲ್ಲೊಂದು ಮತ್ತು ಹೆಚ್ಚಾಗಿ ಈ ಸಾಧನದ ಮೂಲಕ, ಬಹಳಷ್ಟು ಸಲ ಪ್ರಜ್ಞಾರಹಿತವಾಗಿ ಇಲ್ಲವೆ ಅರ್ಧ ಪ್ರಜ್ಞೆಯಿಂದ ಕೈಕೊಂಡಾಗ ಮನುಷ್ಯನ ಚಾರಿತ್ರ್ಯ ಜೀವನದಿಂದ ಜೀವನದಲ್ಲಿ ಬದಲಾಗುತ್ತದೆ, ಅಭಿವೃದ್ಧಿ ಹೊಂದುತ್ತದೆ, ಇಲ್ಲವೆ ಏಕೈಕ ಜೀವನ ಕಾಲದ ಮಿತಿಯಲ್ಲಿ ಕೂಡ ಅದಾಗಬಹುದು. ಅದು ವಿಷಯಗಳನ್ನು ಅವುಗಳ ಬೀಜ ರೂಪದಲ್ಲಿ ನಾಶಮಾಡುವುದಿಲ್ಲ.

ಯೋಗದ ಮೂಲಕ ಬೀಜ ಬೂದಿಯಾಗದಿದ್ದರೆ ಅದು ಮತ್ತೆ ಚಿಗುರೊಡೆದು ಹೆಮ್ಮರವಾಗುವ ಕ್ಷಮತೆ ಹೊಂದಿರುತ್ತದೆ. ಎರಡನೆಯ ವಿಧಾನ ಭಾವೋದ್ರೇಕಕ್ಕೆ ಭೋಗವನ್ನೊದಗಿಸುವುದಾಗಿದೆ, ಅದರಿಂದಾಗಿ ಅದನ್ನು ತೀವ್ರಗತಿಯಿಂದ ತೊಡೆದು ಹಾಕಬಹುದು. ಅತಿಯಾದ ಸಂತೋಷ ಪಡುವಿಕೆಯ ಮೂಲಕ ಅತಿಯಾದ ತೃಪ್ತಿ ಪಡೆದಾಗ ಅದರ ಸೇವಿಸುವಿಕೆ ಅತಿಯಾದಾಗ ಅದು ದುರ್ಬಲವಾಗುತ್ತದೆ, ಖಾಲಿಯಾಗುತ್ತದೆ ಮತ್ತು ಒಂದು ಪ್ರತಿಕ್ರಿಯೆ ಅರಸಿಕೊಂಡು ಬರುತ್ತದೆ. ಅದು ಒಂದು ಸಮಯದವರೆಗೆ ವಿರೋಧೀ ಶಕ್ತಿ ಪ್ರವೃತ್ತಿ ಹಾಗೂ ಗುಣಲಕ್ಷಣ ಇವುಗಳನ್ನು ಸ್ಥಾಪಿಸುತ್ತದೆ. ಆ ಕ್ಷಣವನ್ನು ಯೋಗಿ ನಿಗ್ರಹಕ್ಕಾಗಿ ಹಿಡಿದುಕೊಂಡರೆ, ಪ್ರತಿಯೊಂದು ಯೋಗ್ಯವಾದ ಅವಕಾಶದಲ್ಲಿ ಆ ರೀತಿ ಪುನರಾವರ್ತಿಸಿದಾಗ ವ್ಯಕ್ತಿಯ ಬಲವನ್ನು ಹಾಗೂ ಚೈತನ್ಯವನ್ನು ಕುಗ್ಗಿಸುವಷ್ಟರಮಟ್ಟಿಗೆ ಪರಿಣಾಮಕಾರಿಯಾಗುತ್ತದೆ, ಅದು ಕೊನೆಯ ಸನ್ಯಾಸಕ್ಕೆ ಅನ್ವಯಿಸಲು ಸಾಕಾಗುತ್ತದೆ. ಸಂತೋಷ ಪಡುವಿಕೆ ಹಾಗೂ ಅದಕ್ಕೆ ಪ್ರತಿಕ್ರಿಯೆ ಇವುಗಳ ವಿಧಾನ ಪ್ರಕೃತಿಗೆ ಅಚ್ಚು ಮೆಚ್ಚಿನದು, ಆದರೆ ಅದು ತನ್ನಲ್ಲಿಯೇ ಎಂದಿಗೂ ಪೂರ್ತಿಯಾಗದು. ಶಾಶ್ವತ ಶಕ್ತಿಗಳಿಗೆ, ಗುಣಲಕ್ಷಣಗಳಿಗೆ ಅನ್ವಯಿಸಿದಾಗ ವಿರೋಧೀ ಪ್ರವೃತ್ತಿಗಳ ತೂಗುತೊಲೆಯಾಟ(see-saw)ವನ್ನು ಸ್ಥಾಪಿಸುತ್ತದೆ, ಅದು ಪ್ರಕೃತಿಯ ಕಾರ್ಯಾಚರಣೆಗೆ ಅತ್ಯಂತ ಉಪಯುಕ್ತವಾದದ್ದು, ಆದರೆ ಸ್ವ–ಪ್ರಭುತ್ವದ ದೃಷ್ಟಿಕೋನದಿಂದ ನಿರುಪಯುಕ್ತವಾದದ್ದು, ಅನಿಶ್ಚಿತವಾದದ್ದು. ಕೇವಲ ಈ ವಿಧಾನವನ್ನು ಸಂಯಮ ಅನುಸರಿಸಿ ಹೋದಾಗ ಅದು ಪರಿಣಾಮ–ಕಾರಿಯಾಗುತ್ತದೆ. ಯೋಗಿ ವೃತ್ತಿಯನ್ನು ಪ್ರಕೃತಿಯ ಕೇವಲ ಒಂದು ಲೀಲೆ ಎಂದು ಪರಿಗಣಿಸುತ್ತಾನೆ, ಅದರೊಡನೆ ಅವನು ಸಂಬಂಧವಿರಿಸಿಕೊಳ್ಳುವುದಿಲ್ಲ, ಅದನ್ನು ಕುರಿತು ಅವನು ಕೇವಲ ಪ್ರೇಕ್ಷಕ; ಕ್ರೋಧ, ಕಾಮ, ಗರ್ವ ಅವನವಾಗಿರುವುದಿಲ್ಲ, ಪ್ರಕೃತಿ ವಿಶ್ವಮಾತೆಯದು, ಅವಳು ಅದರೊಡನೆ ಕಾರ್ಯ ಮಾಡುತ್ತಾಳೆ, ನಿಲ್ಲಿಸುತ್ತಾಳೆ, ಅದು ಅವಳ ಉದ್ದೇಶಕ್ಕಾಗಿ ಇರುತ್ತದೆ. ಹಾಗಿದ್ದಾಗ್ಯೂ ವೃತ್ತಿ ಬಲಿಷ್ಠವಾಗಿದ್ದಾಗ, ಪ್ರಭುತ್ವ ನಡೆಸುತ್ತಿದ್ದಾಗ, ಖಾಲಿಯಾಗದೆ ಇದ್ದಾಗ, ಈ ಮನೋಭಾವವನ್ನು ನಿಷ್ಕಾಪಟ್ಯದಿಂದ ಕಾಪಾಡಿಕೊಂಡು ಬರಲಾಗದು, ಅದರ ಬಗ್ಗೆ ನಿಷ್ಕಾಪಟ್ಯದ ಭಾವನೆ ತಂದುಕೊಳ್ಳದೆ ಬೌದ್ಧಿಕವಾಗಿ ಹಿಡಿದುಕೊಳ್ಳಲು ಪ್ರಯತ್ನಿಸಿದರೆ ಅದು ಮಿಥ್ಯಾಚಾರ, ಮಿಥ್ಯೆಯ ಶಿಸ್ತುಪಾಲನೆ ಇಲ್ಲವೆ ಕಪಟಾಚಾರ (hypocrisy). ಪುನರಾವರ್ತಿಸುವ ಸಂತೋಷ ಪಡುವಿಕೆ ಹಾಗೂ ದಬ್ಬಾಳಿಕೆ ಇವುಗಳಿಂದ ಸ್ವಲ್ಪ ಮಟ್ಟಿಗೆ ದಣಿದುಕೊಂಡಾಗ ಪ್ರಕೃತಿ ಪುರುಷನ ಆಜ್ಞೆಯಿಂದ

ನಿಜವಾಗಿ ತನ್ನದೇ ಸೃಷ್ಟಿಯೊಂದಿಗೆ ವ್ಯವಹರಿಸಬಲ್ಲದು. ಮೊದಲು ಅದರೊಂದಿಗೆ ಪ್ರಕೃತಿ ಜುಗುಪ್ಸೆಯ ಅತ್ಯಂತ ಒರಟು ರೂಪದಲ್ಲಿರುವ ವೈರಾಗ್ಯದ ಮೂಲಕ ವ್ಯವಹರಿಸುತ್ತದೆ, ಆದರೆ ಅದು ಶಾಶ್ವತವಾಗಲು ಬಹಳ ಹಿಂಸಾತ್ಮಕ ಭಾವನೆಯಾಗಿರುತ್ತದೆ, ಆದಾಗ್ಯೂ ಅದರ ಕಾರಣವನ್ನು ತೊಡೆದು ಹಾಕಲು ಆಳಾತಿ ಆಳದಲ್ಲಿರುವ ಬಯಕೆಯಲ್ಲಿ ಗುರುತೊಂದನ್ನು ಬಿಟ್ಟುಕೊಡುತ್ತದೆ, ಅದು ಭಾವೋದ್ರೇಕ ಮರಳಿ ಬಂದಾಗ, ತಾತ್ಕಾಲಿಕ ಆಳಿಕೆ ನಡೆಸಿದಾಗ ಉಳಿದುಕೊಳ್ಳುತ್ತದೆ. ನಂತರ ಅದರ ಬರುವಿಕೆಯನ್ನು ತಾಳ್ಮೆಯಿಲ್ಲದ ದೃಷ್ಟಿಕೋನದಿಂದ ನೋಡಲಾಗುವುದು, ಆದರೆ ಅಸಹನೆಯ ತೀಕ್ಷ್ಣ ಭಾವನೆಯಿಂದಲ್ಲ. ಕೊನೆಗೆ ಪರಮೋಚ್ಚ ಉದಾಸೀನತೆಯನ್ನು ಗಳಿಸಲಾಗುತ್ತದೆ, ಪ್ರಕೃತಿಯ ಸಾಧಾರಣ ವಿಧಾನದ ಮೂಲಕ ಪ್ರವೃತ್ತಿಯ ಕೊನೆಯ ಹೊರಟು ಹೋಗುವಿಕೆಯನ್ನು ಸಂಯಮಿಯ ನಿಜವಾದ ಮನೋಭಾವದಿಂದ ಗಮನಿಸಲಾಗುತ್ತದೆ. ತಾನು ಸಾಕ್ಷಿಯಾಗಿ ನೋಡುವ ಆತ್ಮವಾಗಿದ್ದು, ಗೋಚರ ಸಂಗತಿ ನಿಂತುಹೋಗುವುದಕ್ಕಾಗಿ ತನ್ನನ್ನು ಬೇರ್ಪಡಿಸಬೇಕು ಎಂಬ ಜ್ಞಾನ ಸಂಯಮಿಯಲ್ಲಿರುತ್ತದೆ.

**CWSA, 13/33–34** **– ಶ್ರೀ ಅರವಿಂದರು**

*

**ಪಟ್ಟು ಹಿಡಿದು ಗುರಿ ಸಾಧಿಸಿರಿ**

ಆ ಬಗೆಯ ಚಲನೆ ಸಂಭವಿಸಿದಾಗ (ಸ್ತ್ರೀಯರನ್ನು ಕುರಿತು ಆಕರ್ಷಣೆ) ಸಾಧಾರಣವಾಗಿ ಅದಕ್ಕೆ ಒಳ್ಳೆಯ ಕಾರಣವಿರುತ್ತದೆ. ಭೌತಿಕ ಪ್ರಜ್ಞೆಯಲ್ಲಿ ಏನನ್ನೋ ಕುರಿತು ವ್ಯವಹರಿಸಬೇಕಾಗಿರುತ್ತದೆ. ಅಸ್ತವ್ಯಸ್ತತೆಗೆ ಒಳಗಾಗುವುದರ ಬದಲಾಗಿ ಇಲ್ಲವೆ ಎದೆಗುಂದುವುದರ ಬದಲಾಗಿ ಈ ದೃಷ್ಟಿಕೋನದಿಂದ ಅವಲೋಕಿಸಬೇಕು ಮತ್ತು ಕೈಕೊಳ್ಳಬೇಕಾದುದೇನು ಎಂಬುದನ್ನು ನೋಡಬೇಕು.

ವಿಷಯಗಳು ಮರಳಿ ಬರುತ್ತವೆಂದು ಈ ರೀತಿ ಎದೆಗುಂದುವುದರಲ್ಲಿ ಅರ್ಥವಿಲ್ಲ. ಅವು ಯಾವಾಗಲೂ ಹಾಗೆ ಮಾಡುತ್ತವೆ. ನಾವು ಕೈಗೆತ್ತಿಕೊಂಡಿರುವ ಪರಿವರ್ತನೆಯ ಚಲನೆಗಳನ್ನು ಒಂದೇ ಕಾಲಕ್ಕೆ ತೊಡೆದು ಹಾಕಲಾಗುವುದಿಲ್ಲ. ಅವು ಸ್ವಭಾವದ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಇಳಿದು ಹೋಗುತ್ತವೆ. ಅವುಗಳನ್ನು ಭೌತಿಕ ಮತ್ತು ಅವಚೇತನ ತೊಡೆದು ಹಾಕಿದಾಗ ಮನುಷ್ಯ “ಅದನ್ನು ಕೈಕೊಳ್ಳಲಾಯಿತು” ಎಂದು ಹೇಳಬಲ್ಲ. ಈ ಮರುಕಳಿಸುವಿಕೆಗಳು ವಿಫಲತೆಗೆ

ಪ್ರಮಾಣ ಎಂದು ಪರಿಗಣಿಸುವುದಾದರೆ ಆಶ್ರಮದಲ್ಲಿ ಕಡಿಮೆ ಜನರಿದ್ದಾರೆ ಅವರನ್ನು ವಿಫಲತೆಗೊಂಡವರು ಎಂದು ಉಚ್ಚರಿಸಲಾಗದು. ಇಬ್ಬರು, ಮೂವರು ಜನರ ಹೊರತಾಗಿ ಲೈಂಗಿಕ ಮೊಂದರೆಯ ಮೇಲೆ ಸ್ವಲ್ಪ ತೊಂದರೆಯ ಮೇಲೆ ಜಯ ಸಾಧಿಸಿದವರಿಲ್ಲ, ಜನರು ಮುಂದುವರಿದಿದ್ದರೂ ಅದು ಒಂದಿಲ್ಲೊಂದು ರೀತಿಯಲ್ಲಿ ಉಳಿದುಕೊಳ್ಳುತ್ತದೆ, – ಅದು ಇಲ್ಲಿಯವರು ಹೇಳುವ ಹಾಗಿದೆ. ಅದು ಏಕೆಂದರೆ ಮನುಷ್ಯನ ಸ್ವಭಾವದಲ್ಲಿ ಲೈಂಗಿಕತೆ ಅತಿ ಬಲಿಷ್ಠ ವಿಷಯಗಳಲ್ಲೊಂದು, ಅದನ್ನು ಅವಚೇತನದಿಂದ ಹೊರಗೆ ಹಾಕುವವರೆಗೆ ಅದರ ಮೇಲೆ ಜಯ ಸಾಧಿಸಲಾಗುವುದಿಲ್ಲ. ಹಾಗಾಗಿ ನಿನ್ನ ಸಂದರ್ಭ ಬಹಳ ಅನನ್ಯವಾಗಿದೆ ಎಂದು ನೀನು ಏಕೆ ಪರಿಗಣಿಸಬೇಕು ಮತ್ತು ಅದರ ಮೇಲೆ ವೈಯಕ್ತಿಕ ಅಸಾಧ್ಯತೆಯ ಇಲ್ಲವೆ ಯೋಗ್ಯನಾಗಿರದೆ ಇರುವ ವಿಚಾರವನ್ನು ನಿರ್ಮಾಣ ಮಾಡುತ್ತಿರುವಿ! ಕೈಬಿಟ್ಟುಬಿಡುವ ವಿಚಾರದಲ್ಲಿ ಲೋಲನಾಗುವುದು ನಿರುಪಯುಕ್ತವಾದದ್ದು. ನೀನು ಕೈಬಿಟ್ಟುಬಿಡಲಾರೆ. ಹಾಗಾಗಿ ನೀನು ಕೈಕೊಳ್ಳಬೇಕಾದ ಒಂದೇ ವಿಷಯವೆಂದರೆ ನಿನ್ನನ್ನು ಸ್ವಾಧೀನಪಡಿಸಿಕೋ, ಈ ವಿಷಯಗಳತ್ತ ನಿರಾಸಕ್ತಿಯಿಂದ ನೋಡು, ಬರುತ್ತಿದ್ದ ಆತ್ಮವನ್ನು ಸಿದ್ಧಿಸಿಕೊಳ್ಳುವುದರತ್ತ ಮುನ್ನಡೆದುಕೊಂಡು ಹೋಗು.

**CWSA, 31/497** **– ಶ್ರೀ ಅರವಿಂದರು**

*

**ಲೈಂಗಿಕ ತೊಂದರೆಯತ್ತ ಸರಿಯಾದ ಮನೋಭಾವ**

ಆ ಇನ್ನೊಂದು ವಿಷಯ ಕುರಿತು ಹೇಳುವುದಾದರೆ ಅದಕ್ಕಾಗಿರುವ ಸರಿಯಾದ ಮನೋಭಾವ ಲೈಂಗಿಕತೆಯ ದೌರ್ಬಲ್ಯ ಕುರಿತು ಯಾವಾಗಲೂ ಚಿಂತೆ ಮಾಡದೆ ಇರುವುದು ಮತ್ತು ಅದರ ಮಹತ್ವ ಕುರಿತು ಗೀಳು ಹಿಡಿದುಕೊಂಡಿರಬಾರದು, ಅದರಿಂದಾಗಿ ಸತತ ಹೋರಾಟ ಮತ್ತು ಖಿನ್ನತೆಗಳಲ್ಲಿ ಇರುವಂತಾಗುವುದು ಮತ್ತು ಅದು ಬೆಳೆಯಲು ಅವಕಾಶ ಒದಗಿಸುವ ರೀತಿಯಲ್ಲಿ ಅದರ ಬಗ್ಗೆ ನಿಷ್ಕಾಳಜಿಯಿಂದ ಇರಬಾರದು. ಅದನ್ನು ಇಡಿಯಾಗಿ ತೊಡೆದು ಹಾಕುವುದು ಬಹುಶಃ ಎಲ್ಲ ಕಾರ್ಯಗಳಲ್ಲಿ ಬಹಳ ಕಠಿಣವಾದದ್ದು, ಮನುಷ್ಯ ಅಚಂಚಲನಾಗಿ ಅದರ ಮಹತ್ವವನ್ನು ಹಾಗೂ ತೊಂದರೆಯನ್ನು ಗುರುತಿಸಬೇಕು. ಚಿಕ್ಕ ಗುಣಲಕ್ಷಣಗಳುಳ್ಳ ಪ್ರತಿಕ್ರಿಯೆಗಳು ಉಳಿದುಕೊಂಡರೆ, ಅದು ಕ್ಷೋಭೆಗೊಳ–ಪಡಿಸುವಷ್ಟು ಹೆಚ್ಚಾಗುವಂತೆ ಇಲ್ಲವೆ ಮನಸ್ಸಿನ ಮತ್ತು ಉಚ್ಚತರ ಪ್ರಾಣಿಕ ಸತ್ತೆಯ

ಕಟ್ಟಿನಲ್ಲಿರಿಸುವ ಸಂಕಲ್ಪಕ್ಕೆ ಅತಿ ಬಲಿಷ್ಠವಾಗುವಂತೆ ಹೆಚ್ಚಾಗಲು ಅನುಮತಿ ನೀಡಬಾರದು.

*

ಲೈಂಗಿಕತೆ ಕುರಿತು ಬಹಳಷ್ಟು ಯೋಚನೆ ಮಾಡುವುದರಿಂದ ಆ ಯೋಚನೆ ಅದರ ದಮನಕ್ಕಿದ್ದಾಗಲೂ ಕೂಡ ಅದನ್ನು ಇನ್ನೂ ಹೆಚ್ಚು ಕೆಟ್ಟದ್ದನ್ನಾಗಿ ಮಾಡುತ್ತದೆ. ನೀನು ಹೆಚ್ಚಾಗಿ ಧನಾತ್ಮಕ ಅನುಭವಕ್ಕೆ ತೆರೆದಿರಿಸಿಕೊಂಡಿರಬೇಕು. ಎಲ್ಲ ಸಮಯವನ್ನು ನಿಮ್ನತರ ಪ್ರಾಣಿಕದೊಂದಿಗೆ ಹೋರಾಡುವುದರಲ್ಲಿ ಕಳೆಯುವುದು ನಿಧಾನಗತಿಯ ವಿಧಾನವಾಗಿರುತ್ತದೆ.

*

**ಯೋಗದ ಪರಿಶುದ್ಧಗೊಳಿಸುವ ಅಗ್ನಿ ತೆರೆದಿರಿಸಿದ ಪ್ರಚೋದನೆಗಳನ್ನು ಎದುರಿಸುವುದು**

ಯೋಗ ಅದರ ಪರಿಶುದ್ಧಗೊಳಿಸುವ ವಿಧಾನದಲ್ಲಿ ನಿಮ್ಮಲ್ಲಿ ಅಡಗಿರುವ ಎಲ್ಲ ಪ್ರಚೋದನೆಗಳನ್ನು ಹಾಗೂ ಆಸೆಗಳನ್ನು ಹೊರಗೆಡಹುತ್ತದೆ. ಮತ್ತು ನೀವು ವಿಷಯಗಳನ್ನು ಬಚ್ಚಿಡದೆ ಇರುವುದನ್ನು, ಜಯಿಸುವುದನ್ನು, ಅವುಗಳಿಗೆ ಮರು ಎರಕ ಕೊಡುವುದನ್ನು ಕಲಿತುಕೊಳ್ಳಬೇಕು. ಹಾಗಿದ್ದರೂ ಯೋಗದ ಮೊದಲ ಪರಿಣಾಮ ಮಾನಸಿಕ ನಿಯಂತ್ರಣವನ್ನು ತೆಗೆದು ಹಾಕುವುದಾಗಿದೆ, ಸುಪ್ತವಾಗಿ ಬಿದ್ದುಕೊಂಡಿರುವ ಹಸಿವುಗಳನ್ನು ಹಠಾತ್ತನೆ ಮುಕ್ತಗೊಳಿಸುವುದಾಗಿದೆ, ಅವು ರಭಸದಿಂದ ಮೇಲೆದ್ದು ಬಂದು ಸತ್ತೆಯ ಮೇಲೆ ಮುತ್ತಿಗೆ ಹಾಕುತ್ತವೆ. ಈ ಮಾನಸಿಕ ನಿಯಂತ್ರಣದ ಸ್ಥಾನದಲ್ಲಿ ದೈವೀ ನಿಯಂತ್ರಣ ಬರುವವರೆಗೆ ಸಂಕ್ರಮಣದ ಒಂದು ಅವಧಿಯಿರುತ್ತದೆ, ಆಗ ನಿಮ್ಮ ನಿಷ್ಕಾಪಟ್ಯ ಹಾಗೂ ಶರಣಾಗತಿ ಇವು ಪರೀಕ್ಷೆಗೆ ಒಳಪಡುತ್ತವೆ. ಲೈಂಗಿಕ ಪ್ರಚೋದನೆಯಂತಹ ಪ್ರಚೋದನೆಗಳ ಬಲ, ಜನರು ಅವುಗಳನ್ನು ಕುರಿತು ಬಹಳ ಗಮನ ಹರಿಸುತ್ತಾರೆ ಎಂಬ ವಾಸ್ತವ ಸಂಗತಿಯ ಮೇಲೆ ಇರುತ್ತದೆ, ಅವರು ಬಹಳ ಜೋರಾಗಿ ಪ್ರತಿಭಟಿಸುತ್ತಾರೆ, ಮತ್ತು ಒತ್ತಡದಿಂದ ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾರೆ, ಅವುಗಳನ್ನು ಒಳಗೆ ಹಿಡಿದಿಟ್ಟುಕೊಂಡು ಅವುಗಳ ಮೇಲೆ ಕುಳಿತುಕೊಳ್ಳುತ್ತಾರೆ. ನೀವು ಒಂದು ವಿಷಯ ಕುರಿತು ಬಹಳ ಯೋಚನೆ ಮಾಡಿ "ನನಗೆ ಅದು ಬೇಡ, ಅದು ನನಗೆ ಬೇಡ" ಎಂದು ಹೇಳಿದಾಗ ನೀವು ಅದಕ್ಕೆ ಹೆಚ್ಚಿನ ರೀತಿಯಲ್ಲಿ ಬಂಧನಕ್ಕೊಳಗಾಗುತ್ತೀರಿ.

ನೀವು ಕೈಕೊಳ್ಳಬೇಕಾದುದು ಏನೆಂದರೆ ಆ ವಿಷಯವನ್ನು ನಿಮ್ಮಿಂದ ದೂರವಿರಿಸಬೇಕು, ಅದರ ಸಹವಾಸ ಕಳೆದುಕೊಳ್ಳಬೇಕು, ಸಾಧ್ಯವಿದ್ದಷ್ಟು ಅದರತ್ತ ಕಡಿಮೆ ಗಮನ ಹರಿಸಬೇಕು, ನೀವು ಅದನ್ನು ಕುರಿತು ಯೋಚಿಸುವ ಸಂದರ್ಭ ಬಂದಾಗಲೂ ಉದಾಸೀನವಾಗಿ, ಸಂಬಂಧರಹಿತವಾಗಿ ಉಳಿದುಕೊಳ್ಳಬೇಕು.

ಯೋಗದ ಒತ್ತಡದ ಮೂಲಕ ಮೇಲೆದ್ದು ಬರುವ ಪ್ರಚೋದನೆಗಳು ಮತ್ತು ಆಸೆಗಳು ಇವುಗಳನ್ನು ಅನಾಸಕ್ತಿಯ ಮನೋಭಾವದಿಂದ ಹಾಗೂ ಪ್ರಶಾಂತತೆ–ಯಿಂದ ಎದುರಿಸಬೇಕು, ಅವು ನಿಮಗೆ ಪರಕೀಯವಾದವುಗಳು ಇಲ್ಲವೆ ಬಾಹ್ಯ ಜಗತ್ತಿಗೆ ಸೇರಿದವುಗಳು ಎಂದು ಭಾವಿಸಬೇಕು. ಅವುಗಳನ್ನು ಭಗವಂತನಿಗೆ ಅರ್ಪಿಸಬೇಕು, ಅದರಿಂದಾಗಿ ಅವುಗಳನ್ನು ಅವನು ಕೈಗೆತ್ತಿಕೊಳ್ಳುವಂತೆ ಹಾಗೂ ರೂಪಪರಿವರ್ತನೆ ಮಾಡುವಂತಾಗುವುದು.

**CWM, 3/5** **– ಶ್ರೀಮಾತೆ**

*

ಇದು ಒಂದು ತೊಂದರೆಯ ಮೇಲೆ ಕುಳಿತುಕೊಳ್ಳುವುದಕ್ಕಿಂತ ಹೆಚ್ಚು ಕಠಿಣ–ವಾದದ್ದು. ತೊಂದರೆಯಿಂದ ಹಿಂದೆ ಸರಿದು ನಿಂತುಕೊಳ್ಳುವುದು ಹೆಚ್ಚು ಕಠಿಣವಾದದ್ದು, ನಿಮಗೆ ಅದರ ಸಂಬಂಧವೇ ಇಲ್ಲ ಎನ್ನುವ ರೀತಿಯಲ್ಲಿ ಅದನ್ನು ನೋಡುವುದು, ಅದರಲ್ಲಿ ನಿಮಗೆ ಅಭಿರುಚಿಯಿಲ್ಲ ಎಂದುಕೊಳ್ಳುವುದು, ನಿಮಗೆ ಸೇರಿದುದಲ್ಲ ಎಂದು ಭಾವಿಸುವುದು, ಅದು ಜಗತ್ತಿಗೆ ಸೇರಿದೆ ನಿಮಗಲ್ಲ ಎನ್ನುವುದು ಕಠಿಣವಾದದ್ದು.– ಆದರೆ ಇದನ್ನು ಕೈಕೊಳ್ಳುವುದರಿಂದ ಮಾತ್ರ ನೀವು ಯಶಸ್ವಿಯಾಗುವಿರಿ. ಈ ಒತ್ತಾಯದ ಬೇಡಿಕೆ ಒಂದು ಬಗೆಯ ಆಂತರಿಕ ಮುಕ್ತಿಯಾಗಿರುತ್ತದೆ ಮತ್ತು ನಿಮ್ಮ ಆಂತರಿಕ ಸತ್ತೆಯಲ್ಲಿರಿಸಿದ ಗಾಢ ನಂಬಿಕೆಯಾಗಿರುತ್ತದೆ: ನೀವು ಸರಿಯಾದ ಮನೋಭಾವವನ್ನು ಇರಿಸಿಕೊಂಡರೆ ನಿಮಗೆ ಅತ್ಯಂತ ಒಳ್ಳೆಯದೆ ಸಂಭವಿಸುವುದು ಎಂದು ನಂಬಿಕೊಂಡಿರಬೇಕು, ಆದರೆ ಅಸಂತೋಷಕರವಾದ ಏನೋ ಒಂದು ಸಂಭವಿಸಿದಾಗ ಭಯಪಟ್ಟರೆ, ಆಗ ಏನೂ ಮಾಡಲಾರಿರಿ, ತೊಂದರೆಯೇನೇ ಇರಲಿ, ಅಡೆತಡೆ ಏನೇ ಇರಲಿ ನಿಮ್ಮಂತರಂಗದಲ್ಲಿ ಈ ಗಾಢ ನಂಬಿಕೆ ಇರಬೇಕು. ಅಸಂತೋಷಕರವಾದ ಏನೋ ಒಂದು ಸಂಭವಿಸಿದಾಗ ನೀವು ಹೇಳುತ್ತೀರಿ: "ಅದು ಹೆಚ್ಚಾಗುತ್ತ ಹೋಗುವುದೇ, ಇನ್ನೂ ಬೇರೆ ಯಾವ ಅಪಘಾತಗಳಾಗಲಿವೆ ಇತ್ಯಾದಿ!" "ಈ ವಿಷಯಗಳು ನನ್ನವಲ್ಲ, ಅವು ಅವಚೇತನದ

ಜಗತ್ತಿಗೆ ಸೇರಿದವುಗಳಾಗಿವೆ, ಸ್ವಾಭಾವಿಕವಾಗಿ ಅವುಗಳೊಡನೆ ನಾನು ಕೈಕೊಳ್ಳುವುದು ಏನೂ ಇಲ್ಲ, ಮತ್ತು ಅವು ಮತ್ತೆ ನನ್ನನ್ನು ಹಿಡಿದುಕೊಳ್ಳಲು ಬಂದರೆ, ಅವುಗಳೊಡನೆ ಹೋರಾಡುವೆ" ಎಂದು ನೀವು ಹೇಳಬೇಕು. "ಇದು ಹೇಳಲು ಸುಲಭವಾದದ್ದು, ಆದರೆ ಕೈಕೊಳ್ಳುವುದು ಕಠಿಣವಾಗಿರುತ್ತದೆ" ಎಂದು ನೀವು ಉತ್ತರ ನೀಡುತ್ತೀರಿ. ಆದರೆ ನೀವು ನಿಜವಾಗಿ ಗಾಢ ನಂಬಿಕೆಯ ಈ ಮನೋಭಾವವನ್ನು ಇಟ್ಟುಕೊಂಡರೆ ನೀವು ಜಯ ಸಾಧಿಸಲಾಗದ ಯಾವ ತೊಂದರೆಯೂ ಇರುವುದಿಲ್ಲ. ತಳಮಳ ತೊಂದರೆ ಹೆಚ್ಚಾಗುವಂತೆ ಮಾಡುತ್ತದೆ.

**CWM, 4/73** **– ಶ್ರೀಮಾತೆ**

*

**ಅನಾಸಕ್ತಿ ಹಾಗೂ ನಿರಾಕರಣೆಗಳ ಮೂಲಕ ಪ್ರಭುತ್ವ**

ಲೈಂಗಿಕ ಪ್ರಚೋದನೆ ಕುರಿತು: ಅದು ಪಾಪವನ್ನು ತರುವಂತಹ ಏನೋ ಒಂದು, ಭಯಾನಕ ಮತ್ತು ಅದೇ ವೇಳೆಗೆ ಆಕರ್ಷಣೀಯವಾದದ್ದು ಎಂದು ಪರಿಗಣಿಸುವುದು ಬೇಡ, ಆದರೆ ಅದೊಂದು ತಪ್ಪು, ನಿಮ್ಮ ಸ್ವಭಾವದ ತಪ್ಪಾದ ಚಲನೆ ಎಂದು ಭಾವಿಸಬೇಕು. ಅದನ್ನು ಇಡಿಯಾಗಿ ನಿರಾಕರಿಸಿರಿ, ಹೋರಾಟ ಮಾಡುವುದರ ಮೂಲಕವಲ್ಲ ಆದರೆ ಅದರಿಂದ ಹಿಂದೆ ಸರಿದುಕೊಳ್ಳುವುದರ ಮೂಲಕ, ಅನಾಸಕ್ತರಾಗಿರಿ, ಒಪ್ಪಿಗೆ ನೀಡುವುದು ಬೇಡ; ಅದು ನಿಮ್ಮದಲ್ಲ ಎನ್ನುವ ರೀತಿಯಲ್ಲಿ ಅದರತ್ತ ನೋಡಿರಿ, ಹೊರಗಿರುವ ಪ್ರಕೃತಿ ಅದನ್ನು ನಿಮ್ಮ ಮೇಲೆ ಹೇರಿದೆ. ಹೇರಿಕೆಗೆ ನಿಮ್ಮ ಎಲ್ಲ ಒಪ್ಪಿಗೆಯನ್ನು ತಿರಸ್ಕರಿಸಿರಿ, ಆ ಒಪ್ಪಿಗೆಯನ್ನು ಹಿಂತೆಗೆದುಕೊಳ್ಳುವುದರ ಮೇಲೆ ಒತ್ತು ನೀಡಿರಿ. ನಿಮ್ಮ ಹಿಂತೆಗೆದುಕೊಳ್ಳುವಿಕೆಯಲ್ಲಿ ನಿಮಗೆ ಸಹಾಯ ನೀಡಲು ದೈವೀ ಶಕ್ತಿಗೆ ಕರೆ ಕೊಡಿರಿ. ಇದನ್ನು ನೀವು ಅಚಂಚಲರಾಗಿ, ದೃಢ ನಿರ್ಧಾರದಿಂದ ಹಾಗೂ ತಾಳ್ಮೆಯಿಂದ ಕೈಕೊಳ್ಳಬಲ್ಲಿರಾದರೆ ಕೊನೆಗೆ ನಿಮ್ಮ ಆಂತರಿಕ ಸಂಕಲ್ಪ ಆ ಬಾಹ್ಯ ಪ್ರಕೃತಿಯ ರೂಢಿಯ ವಿರುದ್ಧ ಪ್ರಬಲವಾಗಿ ಕಾರ್ಯ ಕೈಕೊಳ್ಳುವುದು.

*

(ಲೈಂಗಿಕ ಚಲನೆ) ಕುರಿತು ಪ್ರಜ್ಞೆಯುಳ್ಳವರಾಗುವುದು ಮೊದಲ ಹೆಜ್ಜೆ, ಆದರೆ ಅದಷ್ಟೇ ಸ್ವತಃ ಸಾಕಾಗದು, ನಿರಾಕರಿಸುವ ಒಂದು ಸ್ವಯಂಚಾಲಿತ ಶಕ್ತಿ ಬರಬೇಕು, ಅದು ಆಸೆ ಹಾಗೂ ಭಾವೋದ್ರೇಕಗಳ ಕ್ಷಣ ಮೇಲೆದ್ದು ಬಂದಾಗ ಅದನ್ನು ದೂರ ಚೆಲ್ಲಿಕೊಡುತ್ತದೆ, ಅದರಿಂದಾಗಿ ಅದು ಮನಸ್ಸಿನಿಂದ ಇಲ್ಲವೆ ಪ್ರಾಣಿಕದಿಂದ ಇಲ್ಲವೆ

ಸ್ಪರ್ಶಕ್ಕೊಳಗಾದ ಸ್ಥಳದಿಂದ ಹಿಂದೆ ಸರಿಯುತ್ತದೆ. ಇದು ನಿರಾಕರಿಸುವ ದೃಢ ಸಂಕಲ್ಪದಿಂದ ಪ್ರಜ್ಞೆಯ ಮೇಲಿನ ಅದರ ಕ್ರಿಯೆಯಲ್ಲಿ ರೂಢಿಗತವಾಗಿ ಬರುತ್ತದೆ ಇಲ್ಲವೆ ನಿರಾಸಕ್ತ ಆಂತರಿಕ ಸತ್ತೆ ತನ್ನಲ್ಲಿ ಸ್ವಯಂಚಾಲಿತ ಕ್ರಿಯಾಶೀಲ ಬಲವನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಬರುತ್ತದೆ, ಅದರಿಂದಾಗಿ ಅದು ಸ್ಪರ್ಶಕ್ಕೊಳ–ಗಾಗುವುದಿಲ್ಲ ಅಷ್ಟೇ ಅಲ್ಲ, ಆದರೆ ಕ್ರಿಯಾಶೀಲ ಪರಿಶುದ್ಧಗೊಳಿಸುವ ಸಾಮರ್ಥ್ಯ ಈ ವಿಷಯಗಳನ್ನು ತಿರಸ್ಕರಿಸುತ್ತದೆ, ಇಲ್ಲವೆ ಕೊನೆಗೆ ಚೈತ್ಯಸತ್ತೆ ಪೂರ್ತಿ ಹೊರಹೊಮ್ಮಿ ಮನಸ್ಸು, ಪ್ರಾಣಿಕ ಹಾಗೂ ದೇಹ ಇವುಗಳ ಮೇಲೆ ಆಳಿಕೆ ನಡೆಸುವುದರ ಮೂಲಕ ತಿರಸ್ಕರಿಸುತ್ತದೆ. ಕೊನೆಯದು ತೀವ್ರಗತಿಯ ಹಾಗೂ ಸುಲಭ ಮಾರ್ಗ. ಅಲ್ಲಿಯವರೆಗೆ ಈ ವಿಷಯಗಳು ಮರಳಿ ಬರುವವು. ಆದರೆ ಬಹುಶಃ ನಿನ್ನಲ್ಲಿ ಇನ್ನೂ ಪಾಪದ ಇಲ್ಲವೆ ದೋಷದ ಹಳೆಯ ವಿಚಾರದ ಸ್ವಲ್ಪ ಮಟ್ಟಿಗಿನ ಭಾವನೆ ಬರುತ್ತಿರಬಹುದು, ಅದು ನಿನಗೆ ತೊಂದರೆ ಉಂಟುಮಾಡುತ್ತದೆ. ನೀನು ಅದನ್ನು ಸ್ವಭಾವದ ಒಂದು ಹೊಂದಾಣಿಕೆಯ ರೂಪದಲ್ಲಿ ತೆಗೆದುಕೊಳ್ಳಬೇಕು, ಅದು ನಡೆದು ಹೋಗುತ್ತಿರುತ್ತದೆ, ಅದರಲ್ಲಿ ಹಳೆಯ ಚಲನೆಗಳಿರುತ್ತವೆ, ಅವುಗಳನ್ನು ಇನ್ನು ಮುಂದೆ ನಿನ್ನವೆಂದು ಒಪ್ಪಿಕೊಳ್ಳುವುದಿಲ್ಲ, ಅವು ರೂಢಿಯ ಶಕ್ತಿಯಿಂದ ಮರಳಿ ಬರುತ್ತವೆ ಮತ್ತು ಸತ್ತೆಯ ಒಂದು ಭಾಗದಿಂದ ರೂಢಿಗತ ಪ್ರತಿಸ್ಪಂದನವನ್ನು ಪಡೆಯುತ್ತವೆ. ಆದರೆ ಸತ್ತೆಯ ಆ ಭಾಗ ಅದನ್ನು ತಿರಸ್ಕರಿಸುವಂತೆ ಮಾಡಿದರೆ ಆಗ ಪ್ರತಿಸ್ಪಂದನ ಮಸುಕಾಗುತ್ತ ಹೋಗಲು ಪ್ರಾರಂಭಿಸುತ್ತದೆ. ಅವುಗಳ ಮರಳುವಿಕೆಗಳಿಂದ ನೀವೇ ಸ್ವತಃ ಇಲ್ಲವೆ ನಿಮ್ಮ ಮನಸ್ಸು ತೊಂದರೆಯ ಭಾವನೆ ತೆಗೆದುಕೊಳ್ಳುವುದಕ್ಕೆ ಅನುವು ಮಾಡಿಕೊಡಬಾರದು, ಏಕೆಂದರೆ ಅದು ಕೇವಲ ವಿರೋಧಿಸುವ ಸಾಮರ್ಥ್ಯವನ್ನು ದುರ್ಬಲಗೊಳಿಸುತ್ತದೆ. ನಿಮ್ಮಲ್ಲಿ ಈ ವಿಷಯಗಳಿಗೆ ಸ್ಥಿರವಾಗಿ ಅಂಟಿಕೊಳ್ಳದಿರುವಿಕೆ ಇರಬೇಕು. ಆಗ ಅಂಟಿಕೊಂಡಿರದ ಆಂತರಿಕ ಸತ್ತೆ ಬಹಳ ಸುಲಭವಾಗಿ ಕ್ರಿಯಾಶಕ್ತವಾಗುತ್ತದೆ ಮತ್ತು ಅವುಗಳನ್ನು ಪ್ರಾಣಿಕ ಸ್ವಭಾವದಿಂದ ತಿರಸ್ಕರಿಸಲು ಶಕ್ತವಾಗುತ್ತದೆ.

**CWSA, 31/508–09** **– ಶ್ರೀ ಅರವಿಂದರು**

*

ಪ್ರಾಣಾಯಾಮ ಮತ್ತು ಇತರ ಆಸನಗಳಂತಹ ಶಾರೀರಿಕ ಆಚರಣೆಗಳು ಲೈಂಗಿಕ ಆಸೆಯನ್ನು ಬೇರುಸಹಿತ ಕಿತ್ತುಹಾಕುವುದಿಲ್ಲ, ಅದಕ್ಕೂ ಹೆಚ್ಚಾಗಿ ಕೆಲವೊಮ್ಮೆ ಪ್ರಾಣಿಕ ಶಕ್ತಿಯನ್ನು ಅದ್ಭುತವಾಗಿ ಹೆಚ್ಚಿಸುತ್ತವೆ, ಅವು ಲೈಂಗಿಕ ಪ್ರವೃತ್ತಿಯನ್ನು

ಬೆಚ್ಚುಬೀಳಿಸುವಂತೆ ಉತ್ಪ್ರೇಕ್ಷಿತಗೊಳಿಸಬಹುದು, ಅದು ಭೌತಿಕ ಜೀವನದ ಆಧಾರದಲ್ಲಿರುವುದರಿಂದ ಯಾವಾಗಲೂ ಜಯಿಸುವುದಕ್ಕೆ ಕಠಿಣವಾದದ್ದು. ಕೈಕೊಳ್ಳಬೇಕಾದ ಒಂದು ವಿಷಯವೆಂದರೆ ಈ ಚಲನೆಗಳಿಂದ ಮನುಷ್ಯ ತನ್ನನ್ನು ಪ್ರತ್ಯೇಕಗೊಳಿಸಿಕೊಳ್ಳಬೇಕು. ಆಂತರಿಕ ಸತ್ತೆಯನ್ನು ಕಂಡು ಹಿಡಿಯಬೇಕು ಮತ್ತು ಅದರಲ್ಲಿ ಜೀವಿಸಬೇಕು. ಆಗ ಈ ಚಲನೆಗಳು ಮನುಷ್ಯನಿಗೆ ಸೇರಿದವುಗಳಲ್ಲ ಎಂದು ತೋರಿಬರುತ್ತವೆ, ಆದರೆ ಮೇಲ್ಮೈಯಲ್ಲಿ ಬಾಹ್ಯ ಪ್ರಕೃತಿ ಪುರುಷನ ಆಂತರಿಕ ಆತ್ಮದ ಮೇಲೆ ಹೇರಿದ ಹಾಗಿರುತ್ತವೆ. ಆಗ ಅವುಗಳನ್ನು ಹೆಚ್ಚು ಸುಲಭವಾಗಿ ಎಸೆದು ಬಿಡಬಹುದು, ಏನೋ ಅಲ್ಲದ ಸ್ಥಿತಿಗೆ ತರಬಹುದು.

**CWSA, 31/511–12** **– ಶ್ರೀ ಅರವಿಂದರು**

*

**ಪರಿಶುದ್ಧತೆಯ ಶಕ್ತಿಯ ಮೂಲಕ ಪ್ರಭುತ್ವ**

ಪರಿಶುದ್ಧತೆಯ ಶಕ್ತಿಯೊಂದಿದೆ, ಅದು ನೈತಿಕವಾದಿಯ ಪರಿಶುದ್ಧತೆ ಅಲ್ಲ, ಆದರೆ ಆತ್ಮದ ಸಾರಭೂತ ಪರಿಶುದ್ಧತೆ, ಅದು ಸತ್ತೆಯ ದ್ರವ್ಯದಲ್ಲಿಯೇ ಇರುತ್ತದೆ. ಅದು ಬಂದಾಗ ಲೈಂಗಿಕ ತರಂಗಗಳು ಸಮೀಪ ಬರುವುದಿಲ್ಲ ಇಲ್ಲವೆ ಯಾವುದೇ ಪ್ರಚೋದನೆಯನ್ನು ನೀಡದೆ, ಎಲ್ಲಿಯೂ ಸ್ಪರ್ಶಿಸದೆ ಹೊರಟು ಹೋಗುತ್ತವೆ.

*

ಹೃದಯದ ಹಾಗೂ ದೇಹದ ಆಸೆಗಳು ಬ್ರಹ್ಮಚರ್ಯದ ಹಾದಿಯಲ್ಲಿ ಅಡ್ಡನಿಲ್ಲುತ್ತವೆ ಮತ್ತು ಪ್ರಾಣಿಕಕ್ಕೆ ಮತ್ತು ಭಾವನಾತ್ಮಕ ಸ್ವಭಾವಕ್ಕೆ ಮಿನುಗನ್ನು ಕೊಡುತ್ತವೆ ಮತ್ತು ಅದು ಒಣಗಿ ಹೋಗುವುದಕ್ಕೆ ಹಾಗೂ ಭಾವನೆಯ ಮುಚ್ಚಿಟ್ಟುಕೊಳ್ಳುವಿಕೆಗೆ ತಡೆ ಒಡ್ಡುತ್ತವೆ. ಹೃದಯವನ್ನು ಸಹಾನುಭೂತಿ–ಪೂರ್ವಕವಾಗಿರಿಸಲು, ತೆರೆದಿರಿಸಲು, ಒಣಗಿ ಹೋಗದಂತೆ, ಮುಚ್ಚಿಟ್ಟುಕೊಳ್ಳದಂತೆ ಮಾಡಲು ಮತ್ತು ಅದೇ ಸಮಯದಲ್ಲಿ ಆಧ್ಯಾತ್ಮಿಕ ಪರಿಶುದ್ಧತೆಯನ್ನು ಸಿದ್ಧಿಸಿಕೊಳ್ಳಲು ಅತ್ಯಂತ ಒಳ್ಳೆಯ ರೀತಿಯೆಂದರೆ ಅದನ್ನು ಶಾಶ್ವತ, ಪರಿಶುದ್ಧ, ಯಾವಾಗಲೂ ಸತ್ಯದ್ದಾಗಿರುವ, ಈ ಪಾರ್ಥಿವ ಭಾವನೆಗಳ ಹಿಂದೆ ಹಾಗೂ ಆಚೆಗೆ ಇರುವ – ಎಂದೆಂದಿಗೂ ಜೀವಿಸುವ ದೈವೀ ಪ್ರೇಮ, ದಿವ್ಯಾನಂದ ಮತ್ತು ದೈವೀ ಸೌಂದರ್ಯ ಇವುಗಳತ್ತ ಹೊರಳಿಸುವುದಾಗಿದೆ.

*

## ಉಚ್ಚತರ ದೈವೀ ಪ್ರಜ್ಞೆ ಹಾಗೂ ದೈವೀ ಶಕ್ತಿಗಳ ಮೂಲಕ ಪ್ರಭುತ್ವ

ದೈಹಿಕ ವ್ಯವಸ್ಥೆಯ ಮೇಲೆ ಬಲವಾದ ಹಿಡಿತವನ್ನು ಹೊಂದಿದಾಗ ಲೈಂಗಿಕತೆಯನ್ನು ತೊಡೆದು ಹಾಕುವುದು ಯಾವಾಗಲೂ ಕಷ್ಟದಾಯಕವಾದದ್ದು. ಅದನ್ನು ಒಟ್ಟಿನಲ್ಲಿ ತೊಡೆದು ಹಾಕಲು ಬಹುಶಃ ಅದಕ್ಕೆ ಮಾನಸಿಕ ಸಂಕಲ್ಪಕ್ಕಿಂತ ಹೆಚ್ಚಿನದು– ಮೇಲ್ಗಡೆಯಿಂದ ಬರುವ ಬಲವತ್ತರವಾದ ದೈವೀ ಶಕ್ತಿಯ ಆವಶ್ಯಕತೆ ಇರುತ್ತದೆ.

*

X ಬರೆದ ಪತ್ರದಲ್ಲಿ ತನಗೆ ಲೈಂಗಿಕ ಯೋಚನೆಗಳಿಂದ ಮುಕ್ತಿ ಬೇಕಾಗಿದೆ ಮತ್ತು ಅದು ಬೇರೆಯವರ ಸಂಕಲ್ಪದ ಮಧ್ಯಸ್ಥಿಕೆಯಿಂದ ಬರಲಿ ಎಂದು ಹೇಳಿದ್ದಾನೆ, ಆದರೆ ಅದನ್ನು ಆ ರೀತಿಯನ್ನು ಕೈಕೊಳ್ಳಲಾಗದು. ಈ ಯೋಗವನ್ನು ಆಚರಿಸುವವರು ಅದರಿಂದ ತಪ್ಪಿಸಿಕೊಳ್ಳಬಲ್ಲರು. ಲೈಂಗಿಕ ಸೂಚನೆಗಳನ್ನು ತಿರಸ್ಕರಿಸುವುದರ ಮೂಲಕ, ಶ್ರೀಮಾತೆಯವರ ಮೂಲಕ ಕಾರ್ಯ ಕೈಕೊಳ್ಳುತ್ತಿರುವ ದೈವೀ ಸಾಮರ್ಥ್ಯದ ಪ್ರಭಾವದ ಮೂಲಕ ಹಾಗೆ ಮಾಡಬಲ್ಲರು. ಸಂಪೂರ್ಣ ಗ್ರಹಿಸುವಿಕೆ ಮತ್ತು ಪರಿಪೂರ್ಣ ನಂಬಿಕೆ ಇರುವವರ ಹೊರತಾಗಿ ಬೇರೆಯವರಲ್ಲಿ ತತ್ಕ್ಷಣ ಆಗುವುದಿಲ್ಲ. ಜೀವನದುದ್ದಕ್ಕೂ ಇರುವ ರೂಢಿಯನ್ನು ತೊಡೆದು ಹಾಕಲು ಏಕಪ್ರಕಾರದ ತಪಸ್ಸಿನ ಆವಶ್ಯಕತೆ ಇರುತ್ತದೆ.

*

## ಸ್ವಭಾವದ ವಿವಿಧ ಭಾಗಗಳಿಂದ ನಿರಾಕರಣೆ

ಮನಸ್ಸಿನ ಹಾಗೂ ಪ್ರಾಣಿಕ ಸಂಕಲ್ಪದ ಒಪ್ಪಿಗೆ ದೊರಕುತ್ತಿರುವವರೆಗೆ ಲೈಂಗಿಕ ತೊಂದರೆ ಗಂಭೀರ ಸ್ವರೂಪದ್ದಾಗಿರುತ್ತದೆ. ಅದನ್ನು ಮನಸ್ಸಿನಿಂದ ಹೊರಗೆ ದಬ್ಬಿದರೆ ಎಂದರೆ ಮನಸ್ಸು ಒಪ್ಪಿಕೊಳ್ಳುವುದನ್ನು ತಿರಸ್ಕರಿಸಿದರೆ, ಪ್ರಾಣಿಕ ಭಾಗ ಅದಕ್ಕೆ ಪ್ರತಿಸ್ಪಂದಿಸುತ್ತಿದ್ದರೆ, ಅದು ಪ್ರಾಣಿಕ ಆಸೆಯ ದೊಡ್ಡ ತರಂಗದ ರೂಪದಲ್ಲಿ ಬರುತ್ತದೆ ಮತ್ತು ಮನಸ್ಸನ್ನು ತನ್ನೊಡನೆ ಶಕ್ತಿಯ ಮೂಲಕ ದೂರ ಗುಡಿಸಿಕೊಂಡು ಹೋಗಲು ಪ್ರಯತ್ನಿಸುತ್ತದೆ. ಅದನ್ನು ಉಚ್ಚತರ ಪ್ರಾಣಿಕದಿಂದ, ಹೃದಯದಿಂದ, ವಶಪಡಿಸಿಕೊಳ್ಳುವ ಕ್ರಿಯಾಶಕ್ತ ಶಕ್ತಿಯಿಂದ ಹೊರದಬ್ಬಿದರೆ ಅದು ನಿಮ್ನತರ ಪ್ರಾಣಿಕದಲ್ಲಿ ಆಶ್ರಯ ಪಡೆಯುತ್ತದೆ ಮತ್ತು ಅಲ್ಲಿಂದ ಚಿಕ್ಕ ಸೂಚನೆಗಳ ಹಾಗೂ ಒತ್ತಡಗಳ ಆಕಾರದಲ್ಲಿ ಬರುತ್ತದೆ. ನಿಮ್ನತರ ಪ್ರಾಣಿಕದಿಂದ ಹೊರದಬ್ಬಿಸಿಕೊಂಡಾಗ

ಮಬ್ಬಾದುದರಲ್ಲಿ ಕೆಳಗಿಳಿದು ಹೋಗುತ್ತದೆ, ಜಡತೆಯಿಂದ ಪುನರಾವರ್ತಿಸುವ ಭೌತಿಕದಲ್ಲಿ ಮತ್ತು ಲೈಂಗಿಕ ಕೇಂದ್ರದಲ್ಲಿ ಸಂವೇದನೆಯ ರೂಪದಲ್ಲಿ ಸೂಚನೆಗಳಿಗೆ ಯಾಂತ್ರಿಕ ರೂಪದಲ್ಲಿ ಪ್ರತಿಸ್ಪಂದಿಸುತ್ತ ಮೇಲೆದ್ದು ಬರುತ್ತದೆ. ಅಲ್ಲಿಂದಲೂ ಕೂಡ ಹೊರದಬ್ಬಿದಾಗ ಅದು ಅವಚೇತನದಲ್ಲಿ ಕೆಳಗಿಳಿದು ಹೋಗುತ್ತದೆ, ಕನಸುಗಳ ರೂಪದಲ್ಲಿ, ಕನಸುಗಳಿದ್ದಾಗ ಇಲ್ಲವೆ ಇರದಿದ್ದಾಗಲೂ ಕೂಡ ರಾತ್ರಿಯ ಹೊರಸೂಸುವಿಕೆಯ ರೂಪದಲ್ಲಿ ಬರುತ್ತದೆ. ಅದು ಎಲ್ಲಿಯವರೆಗಾದರೂ ಹಿಂದೆ ಸರಿದು ಹೋಗಿರಲಿ, ಕೆಲಕಾಲದವರೆಗೆ ಅದಿನ್ನೂ ಆ ಆಧಾರ ಇಲ್ಲವೆ ಆಶ್ರಯದಿಂದ ತೊಂದರೆ ಕೊಡಲು, ಉಚ್ಚತರ ಭಾಗಗಳ ಆರೋಹಣವನ್ನು ಪುನಃ ಗೆದ್ದುಕೊಳ್ಳಲು ಪ್ರಯತ್ನಿಸುತ್ತದೆ– ವಿಜಯ ಪೂರ್ಣವಾಗುವವರೆಗೆ ಮತ್ತು ಅದನ್ನು ಪರಿಸರದಿಂದ ಹಾಗೂ ಆವರಣದ ಪ್ರಜ್ಞೆಯಿಂದ ಹೊರಗೆ ಹಾಕುವವರೆಗೆ ಇರುತ್ತದೆ, ಆ ಪ್ರಜ್ಞೆ ಸಾಧಾರಣ ಇಲ್ಲವೆ ವಿಶ್ವಂಭರ ಪ್ರಕೃತಿಯಲ್ಲಿ ನಮ್ಮದೇ ಪ್ರಜ್ಞೆಯ ವಿಸ್ತರಿಸಿಕೊಳ್ಳುವಿಕೆಯಾಗಿರುತ್ತದೆ.

*

ಪ್ರಾಣಿಕ–ಲೈಂಗಿಕತೆಯ ತೊಂದರೆಯನ್ನು ತೊಡೆದು ಹಾಕುವುದು ಕಠಿಣವಾದದ್ದು ಎನ್ನುವುದಕ್ಕೆ ಅದು ಕೊಡುವ ಲೈಂಗಿಕ ಸಂತೋಷವೇ ಕಾರಣ. ಕೆಲವರು ನಿಷ್ಕಪಟರಾಗಿ ಹೆಚ್ಚು ಭೌತಿಕ ರೂಪವನ್ನು ಬಿಟ್ಟುಕೊಟ್ಟಿದ್ದರೂ ಸಹ ಆ ಪ್ರಚೋದನೆಯ ಪ್ರಾಣಿಕ ರೂಪಕ್ಕೆ ಒಳಪಡುತ್ತಾರೆ. ಏಕೆಂದರೆ ಅದು ಸಾಧನೆಯ ಮಾರ್ಗದಲ್ಲಿ ಅಡ್ಡಬರುವ ಆ ಶಕ್ತಿಗಳ ಒಳಸೇರುವಿಕೆಯ ಸೂಕ್ಷ್ಮ ರೂಪಕ್ಕೆ ಅನುವು ಮಾಡಿಕೊಡುತ್ತದೆ. ಅವುಗಳನ್ನು ಮನುಷ್ಯ ತೊಡೆದು ಹಾಕಬೇಕು, ಆಗ ಪ್ರಾಣಿಕ ಇಡಿಯಾಗಿ ಪರಿಶುದ್ಧವಾಗುತ್ತದೆ ಮತ್ತು ದೈವೀ ಪ್ರೇಮ ಹಾಗೂ ಆನಂದಗಳನ್ನು ಒಳಗೊಳ್ಳಲು ಶಕ್ತವಾಗುತ್ತದೆ.

**CWSA, 31/512–16** **– ಶ್ರೀ ಅರವಿಂದರು**

*

**ನಿಷ್ಕಾಪಟ್ಯದ ಸಾಮರ್ಥ್ಯ**

ಸ್ಪಷ್ಟವಾಗಿ ಅಲ್ಲಿ ಒಂದು ತೊಂದರೆಯಿದೆ: ನಿಮ್ಮ ಪ್ರಜ್ಞಾಪೂರ್ಣ ಸತ್ತೆಯಲ್ಲಿರುವ ಏನೋ ಒಂದು ತೊಂದರೆಯನ್ನು ಬಯಸುವುದಿಲ್ಲ, ನಿಷ್ಕಾಪಟ್ಯದಿಂದ ಅದರ ಮೇಲೆ ಜಯ ಸಾಧಿಸಲು ಬಯಸುತ್ತದೆ, ಆದರೆ ನಿಮ್ಮ ಪ್ರಜ್ಞೆಯ ಇತರ ಭಾಗಗಳಲ್ಲಿ, ನಿಮ್ಮ

ಅರಿವಿಗೆ ಬಂದಿರದ ಅಸಂಖ್ಯಾತ ಚಲನೆಗಳಿರುತ್ತವೆ. “ಅದರಿಂದ ನನಗೆ ಚಿಕಿತ್ಸೆ ದೊರಕಬೇಕು” ಎಂದು ಹೇಳುತ್ತೀರಿ; ದುರ್ದೈವವಶಾತ್ ನನಗೆ ಬೇಕು ಎಂದು ಹೇಳಿದರೆ ಸಾಲದು. ನಿಮ್ಮ ಪ್ರಜ್ಞೆಯಲ್ಲಿ ಇತರ ಭಾಗಗಳಿವೆ, ಅವು ಅಡಗಿ–ಕೊಂಡಿರುತ್ತವೆ ಅದರಿಂದಾಗಿ ನೀವು ಅವುಗಳೊಡನೆ ವ್ಯವಹರಿಸುವುದಿಲ್ಲ ಮತ್ತು ನಿಮ್ಮ ಲಕ್ಷ್ಯ ಬೇರೆಡೆ ಹೊರಳಿದಾಗ ಈ ಭಾಗಗಳು ತಮ್ಮನ್ನು ದೃಢೀಕರಿಸಲು ಪ್ರಯತ್ನಿಸುತ್ತವೆ. ಆ ಕಾರಣದಿಂದಾಗಿ ನಾನು ಪುನರಾವರ್ತಿಸಿ ಹೇಳುತ್ತೇನೆ: “ಪರಿಪೂರ್ಣವಾಗಿ ನಿಷ್ಕಪಟರಾಗಿರಿ, ನಿಮ್ಮನ್ನೇ ನೀವು ಮೋಸಗೊಳಿಸಿಕೊಳ್ಳುವುದು ಬೇಡ” ಮತ್ತು “ನನಗೆ ಸಾಧ್ಯವಿದ್ದದ್ದನ್ನೆಲ್ಲ ಕೈಕೊಂಡಿದ್ದೇನೆ” ಎಂದು ಹೇಳುವುದು ಬೇಡ. ನೀವು ಯಶಸ್ವಿಯಾಗದಿದ್ದರೆ ಅದರರ್ಥ ನಿಮಗೆ ಸಾಧ್ಯವಿದ್ದಷ್ಟನ್ನು ನೀವು ಮಾಡುವುದಿಲ್ಲ ಎಂದಾಗುತ್ತದೆ. ಏಕೆಂದರೆ ನೀವು ನಿಜವಾಗಿ ನಿಮಗೆ ಸಾಧ್ಯವಿದ್ದಷ್ಟನ್ನು ಕೈಕೊಂಡರೆ ನೀವು ನಿಶ್ಚಿತವಾಗಿ ಯಶಸ್ವಿಯಾಗುತ್ತೀರಿ. ನೀವು ತೊಡೆದು ಹಾಕಬೇಕಾದ ದೋಷ ನಿಮ್ಮಲ್ಲಿದ್ದರೆ, ಅದು ಇನ್ನೂ ಪಟ್ಟು ಹಿಡಿದು ಉಳಿದುಕೊಂಡಿದ್ದರೆ ಮತ್ತು ನೀವು ಹೇಳುತ್ತೀರಿ “ನನಗೆ ಸಾಧ್ಯವಿದ್ದಷ್ಟನ್ನು ನಾನು ಕೈಕೊಂಡಿದ್ದೇನೆ”, ನೀವು ಕೈಕೊಳ್ಳಬೇಕಾಗಿದ್ದ ಎಲ್ಲವನ್ನೂ ನೀವು ಕೈಕೊಂಡಿರುವುದಿಲ್ಲ ಎಂಬುದರ ಬಗ್ಗೆ ನೀವು ನಿಶ್ಚಿತತೆ ಹೊಂದಬಹುದು. ನೀವು ಕೈಕೊಂಡಿದ್ದರೆ ವಿಜಯಿಯಾಗಿರುತ್ತೀರಿ, ಏಕೆಂದರೆ ನಿಮಗೆ ಬರುವ ತೊಂದರೆಗಳು ನಿಖರವಾಗಿ ನಿಮ್ಮ ಬಲದ ಪ್ರಮಾಣದಲ್ಲಿರುತ್ತವೆ– ನಿಮ್ಮ ಪ್ರಜ್ಞೆಗೆ ಸೇರಿರದ ಯಾವುದೂ ಸಂಭವಿಸುವುದು ಸಾಧ್ಯವಿಲ್ಲ, ಮತ್ತು ನಿಮ್ಮ ಪ್ರಜ್ಞೆಗೆ ಸೇರಿದ ಎಲ್ಲದರ ಮೇಲೆ ಪ್ರಭುತ್ವ ಪಡೆಯಬಲ್ಲಿರಿ. ಬಾಹ್ಯದಿಂದ ಬರುವ ವಿಷಯಗಳು ಹಾಗೂ ಸೂಚನೆಗಳು ಕೂಡ, ನಿಮ್ಮ ಪ್ರಜ್ಞೆ ಒಪ್ಪಿಕೊಳ್ಳುವ ಪ್ರಮಾಣಕ್ಕನುಸರಿಸಿ ನಿಮ್ಮನ್ನು ಸ್ಪರ್ಶಿಸಬಲ್ಲವು ಮತ್ತು ನಿಮ್ಮನ್ನು ನಿಮ್ಮ ಪ್ರಜ್ಞೆಯ ಪ್ರಭುವನ್ನಾಗಿ ಮಾಡಲಾಗಿದೆ. “ನನಗೆ ಸಾಧ್ಯವಿದ್ದಷ್ಟನ್ನು ನಾನು ಕೈಕೊಂಡಿದ್ದೇನೆ ಮತ್ತು ಪ್ರತಿಯೊಂದರ ಹೊರತಾಗಿ ಆ ವಿಷಯ ಮುಂದುವರಿಯುತ್ತ ಹೋಗುತ್ತಿದೆ, ಹಾಗಾಗಿ ನಾನು ಬಿಟ್ಟುಬಿಡುತ್ತಿದ್ದೇನೆ” ಎಂದು ನೀವು ಹೇಳಿದರೆ ನಿಮಗೆ ಸಾಧ್ಯವಿದ್ದಷ್ಟನ್ನು ನೀವು ಕೈಕೊಂಡಿಲ್ಲ ಎಂಬುದರ ಬಗ್ಗೆ ನೀವು ಅದಾಗಲೆ ನಿಶ್ಚಿತತೆ ಪಡೆದಿರುತ್ತೀರಿ. “ಪ್ರತಿಯೊಂದು ಇದ್ದುದರ ಹೊರತಾಗಿಯೂ” ಒಂದು ದೋಷ ಪಟ್ಟುಹಿಡಿದು ಉಳಿದುಕೊಂಡರೆ ಅದರರ್ಥ ನಿಮ್ಮಲ್ಲಿ ಅಡಗಿಕೊಂಡಿರುವ ಏನೋ ಒಂದು ಮುಚ್ಚಳವನ್ನು ತೆರೆದೊಡನೆ ಪುಸಕ್ಕನೆ ತಲೆ ಎತ್ತುವ ಬೊಂಬೆ (Jack-in-the-box)ಯ ಹಾಗೆ ಹಠಾತ್ತನೆ ಜಿಗಿದು ಬರುತ್ತದೆ, ಮತ್ತು ನಿಮ್ಮ

ಜೀವನದ ನೇತೃತ್ವ ವಹಿಸುತ್ತದೆ. ಹಾಗಾಗಿ ಕೈಕೊಳ್ಳಬೇಕಾದ ಕಾರ್ಯ ಒಂದೇ ಇದೆ: ಅದು ನಿಮ್ಮೊಳಗೆ ಅಡಗಿಕೊಂಡಿರುವ ಎಲ್ಲ ಅಂಧಕಾರದ ಮೂಲೆಗಳನ್ನು ಬೇಟೆಯಾಡುತ್ತ ಹೋಗುವುದಾಗಿದೆ. ಈ ಅಂಧಕಾರದ ಮೇಲೆ ಸತ್ಸಂಕಲ್ಪದ ಕಿಡಿಯೊಂದನ್ನು ಇರಿಸಿದರೆ ಅದು ಶರಣಾಗುತ್ತದೆ, ಮಾಯವಾಗುತ್ತದೆ ಮತ್ತು ನಿಮಗೆ ಅಸಾಧ್ಯವೆನಿಸಿದ್ದು ಸಾಧ್ಯವಾಗುತ್ತದೆ ವ್ಯಾವಹಾರಿಕವಾಗುತ್ತದೆ ಅಷ್ಟೇ ಅಲ್ಲ, ಆದರೆ ಅದನ್ನು ಕೈಕೊಂಡಿರಲಾಗುವುದು. ಹೀಗೆ ನೀವು ಒಂದು ನಿಮಿಷದಲ್ಲಿ ತೊಂದರೆಯೊಂದನ್ನು ತೊಡೆದು ಹಾಕಬಹುದು, ಆ ತೊಂದರೆ ನಿಮಗೆ ವರ್ಷಗಳ ಕಾಲ ಕಿರುಕುಳ ನೀಡಿರಬಹುದು. ಅದರ ಬಗ್ಗೆ ನಾನು ಸಂಪೂರ್ಣ ಭರವಸೆ ನೀಡುತ್ತೇನೆ. ಅದು ಒಂದು ವಿಷಯದ ಮೇಲೆ ಅವಲಂಬಿಸಿದೆ: ನೀವು ನಿಜವಾಗಿ, ನಿಷ್ಕಪಟರಾಗಿ ಅದನ್ನು ತೊಡೆದು ಹಾಕಲು ಬಯಸಬೇಕು.

**CWM, 4/73–74** **– ಶ್ರೀಮಾತೆ**

*

ಮನಸ್ಸು, ಚೈತ್ಯ, ಪ್ರಾಣಿಕ (ಹೃದಯ) ಇವುಗಳ ಮೂಲಕ ಪ್ರೀತಿಸಲು ಶಕ್ಯರಾದ ಅನೇಕ ಮಹಿಳೆಯರಿದ್ದಾರೆ, ಆದರೆ ಅವರು ದೇಹ ಸ್ಪರ್ಶದಿಂದ ಸಂಕೋಚಪಟ್ಟುಕೊಳ್ಳುತ್ತಾರೆ, ಮತ್ತು ಅದು ನಡೆದು ಹೋದಾಗ ಭೌತಿಕ ಕ್ರಿಯೆ ಅವರಿಗೆ ಅಸಹ್ಯಕರವಾಗಿ ಉಳಿದುಕೊಳ್ಳುತ್ತದೆ. ಒತ್ತಡದಡಿಯಲ್ಲಿ ಅವರು ಶರಣಾಗಬಹುದು, ಆದರೆ ಅದು ಆ ಕ್ರಿಯೆಯೊಂದಿಗೆ ರಾಜೀ ಮಾಡಿಕೊಳ್ಳುವುದಿಲ್ಲ, ಆ ಕ್ರಿಯೆ ಅವರಿಗೆ ಪಶುಸದೃಶವಾದದ್ದು, ಕೀಳಾಗಿಸುವುದು ಎಂದು ತೋರಿ–ಬರುತ್ತದೆ. ಮಹಿಳೆಯರಿಗೆ ಇದು ತಿಳಿದಿರುತ್ತದೆ, ಆದರೆ ಪುರುಷರಿಗೆ ಅದನ್ನು ನಂಬುವುದು ಕಠಿಣವೆನಿಸುತ್ತದೆ; ಆದರೆ ಅದು ಪರಿಪೂರ್ಣವಾಗಿ ಸತ್ಯವಾದ ಸಂಗತಿ.

**– ಶ್ರೀಮಾತೆ**


*

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 24ನೇ ಏಪ್ರಿಲ್ 2017ರ ಸೋಮವಾರದಂದು ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7 ಗಂಟೆಯಿಂದ 7.30 ಗಂಟೆಯವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ಅದೇ ದಿನ ಸಾಯಂಕಾಲ 5.00 ರಿಂದ 6.30 ರವರೆಗೆ ಶ್ರೀ ಭಾಸ್ಕರ ರೆಡ್ಡಿಯವರಿಂದ ಶ್ರೀಮಾತೆಯವರ "ಶ್ರೀಮಂತ ದೈವಿಕತೆ" ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಗುರು–ಬಂಧುಗಳು ಹಾಗೂ ಶ್ರೀ ಅರವಿಂದ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು. 24ನೇ ಏಪ್ರಿಲ್‌ನಿಂದ 5ನೇ ಜೂನ್ 2017ರವರೆಗೆ "True Spirituality" ಎಂಬ ವಿಷಯದ ಬಗ್ಗೆ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ.



*None can reach heaven*
*who has not passed through hell.*

- Sri Aurobindo

**RNI No. 22511/1971**
No. of Pages **60 + 4 (Cov. Page)**
KAR Reg No : RNP/KA/BGS/368/2015-2017
Date of Publication on 7th of Every Month
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.